ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

# ಶಿಕ್ಷಕರ ವೃತ್ತಿಪರ ಅಭಿವೃದ್ಧಿ

ಗುರು ಚೇತನ
ಕರ್ನಾಟಕ ಸರ್ಕಾರ

## ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಪರಿಚಯಾತ್ಮಕ ಮಾಡ್ಯೂಲ್ (ಭವಿಷ್ಯದ ರೂಪುರೇಷೆಗಳು)

(NEP-2020ರ ಆಧಾರಿತ)

141



2021-22

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಮತ್ತು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ

## ಮುಖ್ಯಾಂಶಗಳು

ಈ ಸಂಚಿಕೆಯನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ)ಯ ಮಾರ್ಗದರ್ಶನಗಳ ಅನ್ವಯ ರಚಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಚಯಾತ್ಮಕ ಸಂಚಿಕೆಯನ್ನು ಒಂದರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರುಗಳನ್ನು ಗಮನದಲ್ಲಿರಿಸಿಕೊಂಡು ರಚಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ – 2020 ಮುಖ್ಯವಾಗಿ ನಾಲ್ಕು ಭಾಗಗಳನ್ನು ಹೊಂದಿದೆ. ಈ ಎಲ್ಲಾ ನಾಲ್ಕು ವಿಭಾಗಗಳಲ್ಲಿನ ಪ್ರಮುಖ ಅಂಶಗಳನ್ನು ಪ್ರಸ್ತುತ ಸಂಚಿಕೆಯಲ್ಲಿ ಪರಿಚಯ ಮಾಡಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಎನ್.ಸಿ.ಎಫ್.ನ್ನು ಆಧಾರವಾಗಿರಿಸಿಕೊಂಡು ಶೈಕ್ಷಣಿಕವಾಗಿ ಮುಂದಿನ ಉಪ–ಕ್ರಮಗಳನ್ನು ರಾಜ್ಯ ಮಟ್ಟದಲ್ಲಿ ಕೈಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ನಮ್ಮ ಶಿಕ್ಷಕ ವರ್ಗ ಅಗತ್ಯವಾಗಿ ರಾ.ಶಿ.ನೀತಿ 2020ರ ಬಗ್ಗೆ ತಿಳಿದಿರಬೇಕಾದ ಅಂಶಗಳಿಗೆ ಹೆಚ್ಚು ಗಮನಹರಿಸಲಾಗಿದೆ.

ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬುನಾದಿ ಹಂತದಿಂದ (3 ವರ್ಷ) 12ನೇ ತರಗತಿಯವರೆಗೆ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳು, ಉಪಕ್ರಮಗಳು, ಶಿಕ್ಷಕರ ಶಿಕ್ಷಣ ತರಬೇತಿ, ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಸಂಬಂಧಿತ ಅಂಶಗಳನ್ನು ವಿಶದವಾಗಿ ಚರ್ಚಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಎಲ್ಲಾ ಅಂಶಗಳನ್ನು ನಮ್ಮ ಶಿಕ್ಷಕರುಗಳಿಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಇತರೆ ವಿಷಯಗಳನ್ನೂ ಸಂಕ್ಷಿಪ್ತವಾಗಿ ನೀಡಲಾಗಿದೆ.

ರಾ.ಶಿ. ನೀತಿಯಲ್ಲಿ ನಾಲ್ಕು ಭಾಗಗಳಿವೆ. ಭಾಗ – 1ರಲ್ಲಿ ಶಾಲಾ ಶಿಕ್ಷಣ ಸಂಬಂಧಿತ ವಿಷಯಗಳಿವೆ. ಇದು ಆರಂಭಿಕ ಶಿಕ್ಷಣ, ಆರಂಭಿಕ ಸಾಕ್ಷರತೆ ಮತ್ತು ನ್ಯೂಮರೆಸಿ, ಶಾಲೆಯಿಂದ ಹೊರಗುಳಿಯುವಿಕೆಯನ್ನು ತಡೆಗಟ್ಟಿ ಶಿಕ್ಷಣದ ಸಾರ್ವತ್ರೀಕರಣವನ್ನು ಖಾತರಿಗೊಳಿಸುವುದು, ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಶಿಕ್ಷಣ ಶಾಸ್ತ್ರ, ಶಿಕ್ಷಕರು, ಸಮಾನತೆ ಮತ್ತು ಒಳಗೊಳ್ಳುವ ಶಿಕ್ಷಣ, ಶಾಲಾ ಸಂಕೀರ್ಣಗಳ ಮೂಲಕ ಪರಿಣಾಮಕಾರಿ ಆಡಳಿತ, ಶಾಲಾ ಶಿಕ್ಷಣದ ಅಂಗೀಕರಣ ಇವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಹೊಂದಿದೆ.

ಸದರಿ ಸಂಚಿಕೆಯನ್ನು ಒಂದರಿಂದ ಎಂಟನೇ ತರಗತಿ ಬೋಧಿಸುತ್ತಿರುವ ಶಿಕ್ಷಕರನ್ನು ಗಮನದಲ್ಲಿರಿಸಿಕೊಂಡು ರಚಿಸಿರುವುದರಿಂದ ಭಾಗ – 1ಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗಿದೆ. ಈ ಭಾಗದಲ್ಲಿ ವಿಷಯಗಳ ಬಗ್ಗೆ ನಮ್ಮ ಶಿಕ್ಷಕರು ಪೂರ್ಣ ಪರಿಚಯ ಮಾಡಿಕೊಳ್ಳುವುದನ್ನು ನಿರೀಕ್ಷಿಸಿದೆ.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಗುರು ಚೇತನ

ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಪರಿಚಯಾತ್ಮಕ ಮಾಡ್ಯೂಲ್ (ಭವಿಷ್ಯದ ರೂಪುರೇಷೆಗಳು)

(NEP-2020ರ ಆಧಾರಿತ)

# ಶಿಕ್ಷಕರ ವೃತ್ತಿಪರ ಅಭಿವೃದ್ಧಿ

141

2021-22

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಮತ್ತು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ

ಶೀರ್ಷಿಕೆ : " ಗುರುಚೇತನ " – ಶಿಕ್ಷಕರ ವೃತ್ತಿಪರ ಅಭಿವೃದ್ಧಿ

ಪ್ರಕಾಶಕರು ಮತ್ತು ಹಕ್ಕುಗಳು :

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ನಂ. 4, 100 ಅಡಿ ವರ್ತುಲ ರಸ್ತೆ,
ಬನಶಂಕರಿ, 3ನೇ ಹಂತ, ಹೊಸಕೆರೆಹಳ್ಳಿ,
ಬೆಂಗಳೂರು – 85

ದೂರವಾಣಿ ಸಂಖ್ಯೆ : 26980100

ಫ್ಯಾಕ್ಸ್ : 080 – 26422377

ಇ–ಮೇಲ್ : dsert.guruchethana@gmail.com

ಮುದ್ರಣ :

ಪ್ರತಿಗಳ ಸಂಖ್ಯೆ :

## ಆಶಯ ನುಡಿ

ರಾಷ್ಟ್ರೀಯ ಶಿಕ್ಷಣ ನೀತಿ 2020, ಶಿಕ್ಷಣ ವ್ಯವಸ್ಥೆಯನ್ನು 21ನೇ ಶತಮಾನದ ಕೌಶಲಗಳಿಗೆ ಮಕ್ಕಳನ್ನು ಸಿದ್ದಗೊಳಿಸಲು ಉದ್ದೇಶಿಸಿದೆ. ಅದಕ್ಕೆ ಪೂರಕವಾಗಿ ಶಿಕ್ಷಕರು ಮತ್ತು ಶಿಕ್ಷಣ ವ್ಯವಸ್ಥೆಯನ್ನು ಪರಿವರ್ತಿಸುವುದಕ್ಕೆ ಅತ್ಯುತ್ತಮ ಕ್ರಮಗಳನ್ನು ರೂಪಿಸಿದೆ. ಇದಕ್ಕೆ ಅನುಗುಣವಾಗಿ ಶಿಕ್ಷಣ ವ್ಯವಸ್ಥೆಯನ್ನು ಪರಿವರ್ತಿಸುವುದು, ಶಿಕ್ಷಕರನ್ನು ಅಣಿಗೊಳಿಸುವುದು ಹಾಗೂ ಅಪೇಕ್ಷಿತ ಕಲಿಕೆಯನ್ನು ಮಕ್ಕಳಲ್ಲಿ ಉಂಟುಮಾಡಿ ಅತ್ಯುನ್ನತ ಪ್ರಜೆಗಳಾಗಿ ರೂಪಿಸುವುದು ನಮ್ಮೆಲ್ಲರ ಪ್ರಸ್ತುತದ ಅತೀ ಅಗತ್ಯವಾಗಿದೆ. 2025ರೊಳಗೆ ಸಾರ್ವತ್ರಿಕ ದಾಖಲಾತಿಯನ್ನು ಪ್ರಾಥಮಿಕ ಹಂತದಲ್ಲಿ ಸಾಧಿಸುವುದು ಪ್ರಥಮ ಪ್ರಾಶಸ್ತ್ಯವಾಗಿದೆ. 2030ರೊಳಗೆ ಆರಂಭಿಕ ಹಂತದಿಂದ 12ನೇ ಗ್ರೇಡ್‌ವರೆಗೆ 100% ದಾಖಲಾತಿಯನ್ನು ಸಾಧಿಸುವುದು ಹಾಗೂ ಮಕ್ಕಳಲ್ಲಿ ಅಪೇಕ್ಷಿತ ಕೌಶಲಗಳನ್ನು ಬೆಳೆಸಿ ಅವರನ್ನು ಉತ್ತಮ ಪ್ರಜೆಗಳಾಗಿ ರೂಪಿಸಬೇಕಾಗಿದೆ.

ಈ ಹಿನ್ನಲೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿನ ವಿಷಯಗಳನ್ನು ನಮ್ಮ ಶಿಕ್ಷಕರು ಹಾಗೂ ಶೈಕ್ಷಣಿಕ ಆಡಳಿಗಾರರು ಅರ್ಥ ಮಾಡಿಕೊಂಡು ಅದರಂತೆ ನೀತಿಯನ್ನು ಜಾರಿಗೊಳಿಸುವ ಗುರುತರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಶಿಕ್ಷಣ ಕ್ರಮಗಳು, ಶಾಲಾ ಸಿದ್ಧತೆ, ಪಠ್ಯಕ್ರಮ ಮತ್ತು ಪಠ್ಯವಿಷಯ ಸಂಬಂಧಿತ ಅಂಶಗಳು, ಶಿಕ್ಷಕರು, ಶಿಕ್ಷಕರ ಶಿಕ್ಷಣ ಸಂಬಂಧಿತ ಅಂಶಗಳು, ತರಗತಿ ಪ್ರಕ್ರಿಯೆಗಳು ಇವುಗಳನ್ನು ಸೂಕ್ತವಾಗಿ ಗ್ರಹಿಸಿ ಅದರಂತೆ ನಿರ್ವಹಿಸುವ ಕೌಶಲಗಳನ್ನು ರೂಢಿಸಿಕೊಳ್ಳಬೇಕಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ನ್ನು ಅರ್ಥೈಸಿಕೊಂಡು, ಅದರಲ್ಲಿನ ಅಂಶಗಳಿಗೆ ಪೂರಕವಾಗಿ ತಾವು ಸಿದ್ದಗೊಳ್ಳಬೇಕೆಂದು ಇಲಾಖೆ ಅಪೇಕ್ಷಿಸುತ್ತದೆ. ಇದಕ್ಕಾಗಿ ನೀತಿಯನ್ನು ಪೂರ್ಣವಾಗಿ ಅರ್ಥೈಸುವುದು, ತರಗತಿ ಪ್ರಕ್ರಿಯೆಗಳನ್ನು ಸೂಕ್ತವಾಗಿ ಮಾರ್ಪಡಿಸಿಕೊಳ್ಳುವುದು, ಶಿಕ್ಷಕರು ವೃತ್ತಿಪರವಾಗಿ ನಿರಂತರವಾಗಿ ಬೆಳೆಯುವುದು, ಮಕ್ಕಳಿಗೆ ಶತಮಾನದ ಕೌಶಲಗಳನ್ನು ಕಲಿಸುವುದು ಇವುಗಳನ್ನು ಮುಖ್ಯವಾಗಿ ಪರಿಗಣಿಸಿ ಡಿ.ಎಸ್.ಇ.ಆರ್.ಟಿ. ನೇತೃತ್ವದಲ್ಲಿ 34 ಮಾಡ್ಯೂಲ್‌ಗಳನ್ನು ರಚಿಸಲಾಗಿದೆ. ಈ ಮಾಡ್ಯೂಲ್‌ಗಳಲ್ಲಿ ಪೂರ್ಣವಾಗಿ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಶಗಳನ್ನು ಪ್ರತಿಪಾದಿಸಲಾಗಿದೆ. ಅದರಂತೆ ಶಿಕ್ಷಕರು ತಮ್ಮನ್ನು ರೂಪಿಸಿಕೊಳ್ಳಲು ಈ ಮಾಡ್ಯೂಲ್‌ಗಳು ಉಪಯುಕ್ತವಾಗಿವೆ. ಈ ಮಾಡ್ಯೂಲ್‌ಗಳ ರಚನೆಯಲ್ಲಿ ರಾಜ್ಯದ ಎಲ್ಲಾ ಡಯಟ್‌ಗಳು ಭಾಗವಹಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಡಯಟ್‌ಗಳು ಮಾಡ್ಯೂಲ್‌ಗಳನ್ನು ತಮ್ಮ ಹಂತದಲ್ಲಿ ರಚಿಸಲು ರಾಜ್ಯಮಟ್ಟದಲ್ಲಿ ಡಿ.ಎಸ್.ಇ.ಆರ್.ಟಿ. ಸಲಹೆ, ಸೂಚನೆ, ಮಾರ್ಗದರ್ಶನ ನೀಡಿರುವುದನ್ನು ಪ್ರಸಂಶಿಸುತ್ತೇನೆ. ಈ ಮಾಡ್ಯೂಲ್‌ಗಳಿಗೆ ಸಂಬಂಧಿತ ವಿಷಯಗಳನ್ನು ಆನ್‌ಲೈನ್ ಹಾಗೂ ಆಫ್‌ಲೈನ್‌ನಲ್ಲಿ ಅಳವಡಿಸಿ, ಎಲ್ಲಾ ಶಿಕ್ಷಕರು ವಿಷಯಗಳನ್ನು ಮನನ ಮಾಡಿಕೊಂಡು ಅದರಂತೆ ರೂಪುಗೊಳ್ಳಲು ಅಗತ್ಯವಾದ ಅವಕಾಶಗಳನ್ನು ಒದಗಿಸಲಾಗುವುದು.

ಈ ಎಲ್ಲಾ 34 ಮಾಡ್ಯೂಲ್‌ಗಳ ವಿಷಯಗಳಲ್ಲಿ ನಮ್ಮ ಪ್ರಾಥಮಿಕ ಶಾಲಾ ಶಿಕ್ಷಕರು ತರಬೇತಿ ಪಡೆದು, ಅದರಂತೆ ತರಗತಿ ಪ್ರಕ್ರಿಯೆಗಳನ್ನು ರೂಪಿಸುವುದನ್ನು ಹಾಗೂ ವೃತ್ತಿಪರವಾಗಿ ಅಭಿವೃದ್ಧಿಗೊಳ್ಳುವುದನ್ನು ಇಲಾಖೆ ನಿರೀಕ್ಷಿಸುತ್ತದೆ. ಇಲಾಖೆಯ ನಿರೀಕ್ಷೆಯನ್ನು ಮೀರಿ ನಮ್ಮ ಶಿಕ್ಷಕರು ಸ್ಪಂದಿಸುತ್ತಾರೆಂಬ ಆಶಯ ನಮ್ಮದು.

ಡಾ. ಎಸ್. ಸೆಲ್ವಕುಮಾರ್
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಬೆಂಗಳೂರು.

# ಆಶಯ ನುಡಿ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ನಿರ್ದೇಶನಗಳನ್ವಯ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಪರಿಚಯಾತ್ಮಕ ಮಾಡ್ಯೂಲ್ (ಭವಿಷ್ಯದ ರೂಪುರೇಷೆಗಳು)ನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ ಜಿಲ್ಲೆಯ ಸಂಪನ್ಮೂಲ ತಂಡದಿಂದ ತಯಾರಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ – 2020 ಮುಖ್ಯವಾಗಿ ನಾಲ್ಕು ಭಾಗಗಳನ್ನು ಹೊಂದಿದೆ. ಈ ಎಲ್ಲಾ ನಾಲ್ಕು ವಿಭಾಗಗಳಲ್ಲಿನ ಪ್ರಮುಖ ಅಂಶಗಳನ್ನು ಪ್ರಸ್ತುತ ಸಂಚಿಕೆಯಲ್ಲಿ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. ಶಾಲಾ ಶಿಕ್ಷಣ ಮತ್ತು ಶಿಕ್ಷಕರು – ಈ ಎರಡು ವಿಷಯಗಳಿಗೆ ಸಂಬಂಧಿಸಿದಂತೆ ನೀತಿಯಲ್ಲಿ ಇರುವ ಅಂಶಗಳನ್ನು ವಿಶದವಾಗಿ ನಮ್ಮ ಶಿಕ್ಷಕರುಗಳಿಗೆ ಅರ್ಥವಾಗುವಂತೆ ತಿಳಿಸಲು ಸಂಚಿಕೆಯನ್ನು ರೂಪಿಸಿದೆ. ಸದರಿ ಸಂಚಿಕೆಯನ್ನು ಒಂದರಿಂದ ಎಂಟನೇ ತರಗತಿ ಬೋಧಿಸುತ್ತಿರುವ ಶಿಕ್ಷಕರನ್ನು ವಿಶೇಷವಾಗಿ ಗಮನದಲ್ಲಿರಿಸಿಕೊಂಡು ತಯಾರಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಪ್ರತಿ ಹಂತದ ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ನೆಲಗಟ್ಟನ್ನು (ಎನ್.ಸಿ.ಎಫ್) ರೂಪಿಸುವ ಬಗ್ಗೆ ಪ್ರಸ್ತಾಪಿಸಿದ್ದು, ಸದರಿ ಕಾರ್ಯವನ್ನು ರಾಷ್ಟ್ರಮಟ್ಟದಲ್ಲಿ ಎನ್.ಸಿ.ಇ.ಆರ್.ಟಿ. ಅಭಿವೃದ್ಧಿಪಡಿಸಲಿದೆ. ಎನ್.ಸಿ.ಎಫ್. ನ್ನು ಆಧಾರವಾಗಿರಿಸಿಕೊಂಡು ಶೈಕ್ಷಣಿಕವಾಗಿ ಮುಂದಿನ ಉಪ–ಕ್ರಮಗಳನ್ನು ರಾಜ್ಯ ಮಟ್ಟದಲ್ಲಿ ಕೈಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ನಮ್ಮ ಶಿಕ್ಷಕ ವರ್ಗ ಅಗತ್ಯವಾಗಿ ರಾ.ಶಿ.ನೀತಿ 2020ರ ಬಗ್ಗೆ ತಿಳಿದಿರಬೇಕಾದ ಅಂಶಗಳಿಗೆ ಹೆಚ್ಚು ಗಮನಹರಿಸಲಾಗಿದೆ.

ಈ ಸಂಚಿಕೆಯನ್ನು 2020–21ನೇ ಸಾಲಿಗೆ ಗುರುಚೇತನ – ನಿರಂತರ ವೃತ್ತಿಪರ ಅಭಿವೃದ್ಧಿಯ ವಿಸ್ತೃತ ಕಾರ್ಯಕ್ರಮದಡಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಕಲಿಕಾ ಸಂಚಿಕೆ (Learning Module) ನೊಂದಿಗೆ ತರಬೇತಿದಾರರ ಮಾಡ್ಯೂಲ್ ಮತ್ತು ತರಬೇತಿ ಸಾಮಗ್ರಿಗಳ ಪಟ್ಟಿಯನ್ನೂ ನೀಡಲಾಗಿದೆ. ಸಂಚಿಕೆಯನ್ನು ರೂಪಿಸುವ ಸಂಬಂಧ ನಮ್ಮ ಡಯಟ್‌ನಲ್ಲಿ ಉಪನ್ಯಾಸಕರ ಸಭೆಯನ್ನು ನಡೆಸಿ, ರೂಪುರೇಷೆಗಳನ್ನು ಡಿ.ಎಸ್.ಇ.ಆರ್.ಟಿ. ನಿರ್ದೇಶನಗಳನ್ವಯ ನಿರ್ಧರಿಸಲಾಯಿತು. ಈ ಸಂಚಿಕೆಯನ್ನು ನಮ್ಮ ಡಯಟ್‌ನ ಹಿರಿಯ ಉಪನ್ಯಾಸಕರಾದ ಟಿ.ಕೆ. ರಾಘವೇಂದ್ರ ರವರ ನೇತೃತ್ವದಲ್ಲಿ ಉಪನ್ಯಾಸಕರುಗಳನ್ನು ಒಳಗೊಂಡ ತಂಡ ರಚಿಸಿದೆ. ನಮ್ಮ ಸಂಸ್ಥೆಯ ಉಪನ್ಯಾಸಕ ವರ್ಗದವರು ಸಕ್ರಿಯವಾಗಿ ತೊಡಗಿಸಿಕೊಂಡು ರಾ.ಶಿ. ನೀತಿಯನ್ನು ಅಭ್ಯಸಿಸಿ, ಪ್ರಮುಖ ಅಂಶಗಳನ್ನು ಮನನ ಮಾಡಿಕೊಂಡು ಈ ಸಂಚಿಕೆಯನ್ನು ತಯಾರಿಸಿರುತ್ತಾರೆ.

ಸದರಿ ಸಂಚಿಕೆಯ ರಚನಾ ಕಾರ್ಯಕ್ಕೆ ಕಾಲಕಾಲಕ್ಕೆ ಸೂಕ್ತ, ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಿದ ರಾಜ್ಯ ಮಟ್ಟದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಕಾರ್ಯದಲ್ಲಿ ಮನಃಪೂರ್ವಕವಾಗಿ ತೊಡಗಿಸಿಕೊಂಡು ಕಾರ್ಯನಿರ್ವಹಿಸಿದ ನಮ್ಮ ಡಯಟ್‌ನ ಉಪನ್ಯಾಸಕ ವರ್ಗದವರನ್ನು ಅಭಿನಂದಿಸುತ್ತೇನೆ. ಇದಕ್ಕೆ ಸೂಕ್ತವಾಗಿ ತಾಂತ್ರಿಕ ಸಹಾಯವನ್ನು ನೀಡಿದ ರಾಜ್ಯ ಹೆಲ್ಪ್‌ಡೆಸ್ಕ್ ಸದಸ್ಯರುಗಳಾದ ಶ್ರೀ ಶಂಭುಲಿಂಗಯ್ಯ, ಶಿವಕುಮಾರ್ ಮತ್ತು ಶ್ರೀನಿವಾಸ್ ಅವರುಗಳ ಕಾರ್ಯವನ್ನೂ ಸ್ಮರಿಸುತ್ತೇನೆ. ಸಂಚಿಕೆಯನ್ನು ಉತ್ತಮ ಪಡಿಸಲು ತಮ್ಮ ಸಲಹೆ–ಸೂಚನೆಗಳಿಗೆ ಸದಾ ಸ್ವಾಗತವಿರುತ್ತದೆ.

ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು,

ಡಯಟ್, ಕೋಲಾರ.

# ಪರಿಕಲ್ಪನೆ ಮತ್ತು ಮಾರ್ಗದರ್ಶನ

ಡಾ|| ಎಸ್. ಸೆಲ್ವ ಕುಮಾರ್ ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ಡಾ. ವಿಶಾಲ್ ಆರ್ ಭಾ.ಆ.ಸೇ
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಶ್ರೀಮತಿ ದೀಪಾ ಎಂ ಚೋಳನ್ ಭಾ.ಆ.ಸೇ
ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ

ಶ್ರೀಮತಿ ಸುಮಂಗಲ ವಿ
ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ

ಶ್ರೀ ಎಂ.ಆರ್. ಮಾರುತಿ
ನಿಕಟ ಪೂರ್ವ ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ

ಶ್ರೀಮತಿ ಗಾಯಿತ್ರಿದೇವಿ ಟಿ.ಎನ್
ಸಹ ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ

ಶ್ರೀಮತಿ ಎಂ.ಎನ್ ದಾಕ್ಷಾಯಣಮ್ಮ
ಉಪ ನಿರ್ದೇಶಕರು, (ಟಿ.ಇ ವಿಭಾಗ)
ಡಿ.ಎಸ್.ಇ.ಆರ್.ಟಿ

ಶ್ರೀ ವಿಶ್ವನಾಥ ಕೆ.ವಿ
ಹಿರಿಯ ಸಹಾಯಕ ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ

ಶ್ರೀ ವೇದಮೂರ್ತಿ ಸಿ
ಹಿರಿಯ ಸಹಾಯಕ ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ

# ಮಾರ್ಗದರ್ಶನ

ಶ್ರೀ ಕೆ. ಎಂ. ಜಯರಾಮರೆಡ್ಡಿ,
ನಿಕಟ ಪೂರ್ವ ಪ್ರಾಂಶುಪಾಲರು,
ಡಯಟ್, ಕೋಲಾರ.

ಶ್ರೀ ಕೃಷ್ಣಮೂರ್ತಿ,
ಪ್ರಾಂಶುಪಾಲರು,
ಡಯಟ್, ಕೋಲಾರ.

# ಸಾಹಿತ್ಯ ರಚನಾ ತಂಡ

ಟಿ. ಕೆ. ರಾಘವೇಂದ್ರ,.
ಹಿರಿಯ ಉಪನ್ಯಾಸಕರು,
ಡಯಟ್, ಕೋಲಾರ.

ಶ್ರೀಮತಿ ಎಚ್. ಎಸ್. ಚಂದ್ರಕಲಾ,
ಹಿರಿಯ ಉಪನ್ಯಾಸಕರು,
ಡಯಟ್, ಕೋಲಾರ.

ಶ್ರೀಮತಿ ಎಂ. ನಾಗಮಣಿ,.
ಹಿರಿಯ ಉಪನ್ಯಾಸಕರು,
ಡಯಟ್, ಕೋಲಾರ.

ಎಸ್. ಆರ್. ವೀಣಾ,
ಉಪನ್ಯಾಸಕರು,
ಡಯಟ್, ಕೋಲಾರ.

ಎಸ್. ಜಮೀಲುದ್ದೀನ್,
ಉಪನ್ಯಾಸಕರು,
ಡಯಟ್, ಕೋಲಾರ.

ಪಿ. ಎನ್. ಬಾಲಕೃಷ್ಣ ರಾವ್.
ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ನಂಬಿಹಳ್ಳಿ, ಶ್ರೀನಿವಾಸಪುರ ತಾಲ್ಲೂಕು.

ಶ್ರೀಮತಿ ರಮಾ
ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಕುರುಗಲ್, ಕೋಲಾರ ತಾಲ್ಲೂಕು

ಶ್ರೀನಿವಾಸ್.ಎಂ.
ಬಿ.ಆರ್.ಪಿ, ಬಿ.ಆರ್.ಸಿ
ಬಂಗಾರಪೇಟೆ

ರಾಜೇಶ್ವರಿ.ಎಂ.ಕೆ.
ಸಿ.ಆರ್.ಪಿ, ಬಿ.ಆರ್.ಸಿ,
ಮುಳಬಾಗಿಲು

# ತಾಂತ್ರಿಕ ಸಹಾಯಕರು

ಶಂಭುಲಿಂಗಯ್ಯ.ಕೆ
ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ.
ಕಠಾರಿಪಾಳ್ಯ, ಕೋಲಾರ

ಶ್ರೀ ಶಿವಕುಮಾರ್
ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ. ಭೂಹಳ್ಳಿ,
ಕನಕಪುರ ತಾಲ್ಲೂಕು

ಶ್ರೀ ಶ್ರೀನಿವಾಸ.ಬಿ.ವಿ
ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ. ಮಾಗೊಂದಿ,
ಬಂಗಾರಪೇಟೆ ತಾಲ್ಲೂಕು

# ಪರಿವಿಡಿ


| ಅಧ್ಯಾಯ | ವಿಷಯ ಸೂಚಿ | ಪುಟಗಳು |
|---|---|---|
| 1 | ರಾಷ್ಟ್ರೀಯ ಶಿಕ್ಷಣ ನೀತಿ-2020 ಪೀಠಿಕೆ, ಮುಖ್ಯಾಂಶಗಳು, ಪ್ರಮುಖ<br>ತತ್ವಗಳು, ದೃಷ್ಟಿಕೋನ ಮತ್ತು ಕಾಣ್ಕೆ ,<br>ಅಧ್ಯಾಯಾವಾರು ನೀತಿಯ ಪ್ರಮುಖ ಅವಲೋಕನಗಳು | 1 |
| 2 | ಭಾಗ-1 ಶಾಲಾ ಶಿಕ್ಷಣ<br>ಅಧ್ಯಾಯ - 01 ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ<br>ಅಧ್ಯಾಯ - 02 ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನ<br>ಅಧ್ಯಾಯ - 03 ಶಾಲೆ ಬಿಡುವ ಮಕ್ಕಳ ದರವನ್ನು ಕಡಿಮೆಗೊಳಿಸುವುದು<br>ಅಧ್ಯಾಯ - 04 ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ವಿಧಾನ<br>ಅಧ್ಯಾಯ - 05 ಶಿಕ್ಷಕರು<br>ಅಧ್ಯಾಯ - 06 ಸಮಾನ ಮತ್ತು ಸಮನ್ವಯ ಶಿಕ್ಷಣ<br>ಅಧ್ಯಾಯ - 07 ಶಾಲಾ ಸಂಕೀರ್ಣ<br>ಅಧ್ಯಾಯ - 08 ಶಾಲಾ ಶಿಕ್ಷಣಕ್ಕಾಗಿ ಮಾನಕಗಳ ನಿರ್ಧಾರ ಮತ್ತು ಮಾನ್ಯತೆ | 11 ರಿಂದ 44 |
| 3 | ಭಾಗ-2 ಉನ್ನತ ಶಿಕ್ಷಣ | 45 |
| 4 | ಭಾಗ-3 ಗಮನಿಸಬೇಕಾದ ಇತರೆ ಪ್ರಮುಖ ಕ್ಷೇತ್ರಗಳು | 54 |
| 5 | ಭಾಗ-4 ಕಾರ್ಯಗತಗೊಳಿಸುವುದು | 58 |
| 6 | ತರಬೇತುದಾರರ ಸಾಹಿತ್ಯ ಮತ್ತು ವೇಳಾಪಟ್ಟಿ | 62 |

# 1

# ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಚಯಾತ್ಮಕ ಸಂಚಿಕೆ ಕುರಿತು

ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಚಯಾತ್ಮಕ ಸಂಚಿಕೆ ಕುರಿತು . . ಈ ಸಂಚಿಕೆಯನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ)ಯ ಮಾರ್ಗದರ್ಶನಗಳ ಅನ್ವಯ ರಚಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಚಯಾತ್ಮಕ ಸಂಚಿಕೆಯನ್ನು ಒಂದರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರುಗಳನ್ನು ಗಮನದಲ್ಲಿರಿಸಿಕೊಂಡು ರಚಿಸಲಾಗಿದೆ. ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬುನಾದಿ ಹಂತದಿಂದ (3 ವರ್ಷ) 12ನೇ ತರಗತಿಯವರೆಗಿನ ಶಿಕ್ಷಣ ಸಂಬಂಧಿಸಿದ ಅಂಶಗಳು, ಉಪಕ್ರಮಗಳು, ಶಿಕ್ಷಕರ ಶಿಕ್ಷಣ ತರಬೇತಿ, ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಸಂಬಂಧಿತ ಅಂಶಗಳನ್ನು ವಿಶದವಾಗಿ ಪ್ರಸ್ತುತಪಡಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಒಟ್ಟಾರೆ ಅಂಶಗಳನ್ನು ನಮ್ಮ ಶಿಕ್ಷಕರುಗಳಿಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಇತರೆ ವಿಷಯಗಳನ್ನೂ ಸಂಕ್ಷಿಪ್ತವಾಗಿ ನೀಡಲಾಗಿದೆ.

ಪ್ರಸ್ತುತ ಸಂಚಿಕೆಯ ಮೂಲಕ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಸಂಪೂರ್ಣ ತಿಳಿವಳಿಕೆ ಮೂಡಿಸುವ ಸಲುವಾಗಿ ಎಲ್ಲಾ ಅಂಶಗಳಿಗೂ ಆದ್ಯತೆ ನೀಡಲಾಗಿದೆ. ವಿಶೇಷ ಆದ್ಯತೆಯನ್ನು ಶಾಲಾ ಶಿಕ್ಷಣ, ಶಿಕ್ಷಕರ ತರಬೇತಿ ಮತ್ತು ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಸಂಬಂಧಿಸಿದ ವಿಷಯಗಳಿಗೆ ನೀಡಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಚಯಾತ್ಮಕ ಸಂಚಿಕೆಯನ್ನು ನಮ್ಮ ಎಲ್ಲಾ ಶಿಕ್ಷಕರು ಅವಲೋಕಿಸಿ, ನೀತಿ ಸಂಬಂಧಿತ ವಿಷಯಗಳಲ್ಲಿ ವಿಶೇಷ ತಿಳಿವಳಿಕೆಯನ್ನು ಮೂಡಿಸಿಕೊಳ್ಳುವರು ಎಂಬ ಆಶಯ ನಮ್ಮದು.

**ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಚಯಾತ್ಮಕ ಸಂಚಿಕೆಯ ಉದ್ದೇಶಗಳು**

1. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮೂಲ ಅಂಶಗಳನ್ನು ಗ್ರಹಿಸುವುದು
2. ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮಗ್ರ ವಿಷಯಗಳನ್ನು ಮನನ ಮಾಡಿಕೊಳ್ಳುವುದು
3. ಶೈಕ್ಷಣಿಕ ಪ್ರಕ್ರಿಯೆಗಳು, ಶಿಕ್ಷಕರ ವೃತ್ತಿಪರ ಅಭಿವೃದ್ಧಿ, ಶೈಕ್ಷಣಿಕ ಕ್ರಮಗಳನ್ನು ಅರಿಯುವುದು
4. ಹೊಸ ಶಿಕ್ಷಣ ನೀತಿಯಂತೆ ಬದಲಾಗಬೇಕಾಗಿರುವ ಅಂಶಗಳನ್ನು ಗುರುತಿಸುವುದು
5. ಹೊಸ ಶಿಕ್ಷಣ ನೀತಿಯ ಜಾರಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದು.

1

# ಪ್ರಸ್ತಾವನೆ

## ಇಲ್ಲಿಯವರೆಗೆ ಶಿಕ್ಷಣ ನಡೆದು ಬಂದ ಹಾದಿ . . . . . .

ಶಿಕ್ಷಣದ ಮಹತ್ವವನ್ನು ಪ್ರಾಚೀನ ಕಾಲದಿಂದಲೂ ಪ್ರತಿಪಾದಿಸಲಾಗುತ್ತಿದೆ. ಗುರುಕುಲ ಶಿಕ್ಷಣದಿಂದ ಆರಂಭಿಸಿ ಇಂದಿನ ಆಧುನಿಕ ಯುಗದವರೆಗೂ ಶಿಕ್ಷಣದ ತನ್ನ ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತಲೇ ಇದೆ. ಬದಲಾದ ಕಾಲಕ್ಕೆ ಅನುಗುಣವಾಗಿ ಶಿಕ್ಷಣವನ್ನು ಪ್ರತಿ ಮಗುವಿಗೆ ಒದಗಿಸುವುದು ಎಲ್ಲಾ ಭಾಗೀದಾರರ ಕರ್ತವ್ಯವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮ ಗಾಂಧೀಜಿಯವರು ತಮ್ಮ ಮೂಲ ಶಿಕ್ಷಣದ ಯೋಜನೆಯನ್ನು ರಾಷ್ಟ್ರದ ಮುಂದಿಟ್ಟರು. ದೀರ್ಘ ಮತ್ತು ನಿರಂತರ ಹೋರಾಟದ ಫಲವಾಗಿ 1944ರಲ್ಲಿ ಬ್ರಿಟಿಷ್ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು ತಾತ್ವಿಕ ಒಪ್ಪಿಗೆಯನ್ನು ನೀಡಿತು. ಆದರೂ ವೇದ್ಯ ಕಾರಣಗಳಿಂದಾಗಿ ಬ್ರಿಟಿಷರು ಭಾರತೀಯರಿಗೆ ನಿರೀಕ್ಷಿತ ಶಿಕ್ಷಣವನ್ನು ನೀಡಲಿಲ್ಲ. ನಂತರದ ಕಾಲಘಟ್ಟದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬೇಡಿಕೆಯು ಸ್ವಾತಂತ್ರ್ಯ ಚಳುವಳಿಯ ಒಂದು ಪ್ರಮುಖ ಬೇಡಿಕೆಯಾಗಿ ರೂಪುಗೊಂಡಿತು. ಸ್ವಾತಂತ್ರ್ಯಾ ನಂತರದಲ್ಲಿ (1947 – 1949) ಸಂವಿಧಾನ ರಚನಾ ಸಮಿತಿಯಲ್ಲಿ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ರಚನೆಯಾಗಿದ್ದ ಉಪಸಮಿತಿಯು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಿತು. ಸಂವಿಧಾನದ 45ನೆಯ ಪರಿಚ್ಛೇದದ ಪ್ರಕಾರ ರಾಜ್ಯವು ಸಂವಿಧಾನ ಪ್ರಾರಂಭವಾದ (1950) 10 ವರ್ಷದೊಳಗಾಗಿ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕಾಗಿದ್ದಿತು. ಅದರಂತೆ 1960ರ ಅಂತ್ಯಕ್ಕೂ ಉಚಿತ ಮತ್ತು ಪ್ರಾಥಮಿಕ ಶಿಕ್ಷಣದ ಗುರಿಯನ್ನು ಈಡೇರಿಸಲು ಸಾಧ್ಯವಾಗಲಿಲ್ಲ. 1964ರಲ್ಲಿ ಭಾರತದಲ್ಲಿ ಶಿಕ್ಷಣ ಕ್ಷೇತ್ರವನ್ನು ಸಮಗ್ರವಾಗಿ ಪರಿಶೀಲಿಸುವ ದೃಷ್ಟಿಯಿಂದ ಭಾರತ ಸರ್ಕಾರವು ಶಿಕ್ಷಣ ಆಯೋಗ–ಕೊಠಾರಿ ಆಯೋಗವನ್ನು ನೇಮಿಸಿತು. ಈ ಆಯೋಗವು ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಸಂವಿಧಾನದ ಗುರಿಯನ್ನು ಈಡೇರಿಸಬೇಕೆಂಬ ವಿಷಯವನ್ನು ಪುನರುಚ್ಚರಿಸಿತು. ಕೊಠಾರಿ ಆಯೋಗದ ಶಿಫಾರಸ್ಸಿನ ಮೇಲೆ 1968ರಲ್ಲಿ ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು. ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಎಲ್ಲಾ ಮಕ್ಕಳು ಎಂಟು ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯಬೇಕೆಂಬ ಗುರಿಯು 1986ರ ಅಂತ್ಯಕ್ಕೂ ಈಡೇರಲಿಲ್ಲ. 1986ರಲ್ಲಿ ಎರಡನೆಯ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು. ಇದರಲ್ಲಿ ಶಿಕ್ಷಣದ ಸಾರ್ವತ್ರೀಕರಣದ ಹೊಸ ಗುರಿಯನ್ನು ನಿಗದಿಗೊಳಿಸಿ, 1990ರ ಅಂತ್ಯಕ್ಕೆ ಎಲ್ಲಾ ಮಕ್ಕಳು 8 ವರ್ಷಗಳ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಬೇಕೆಂಬ ಇಂಗಿತವನ್ನು ವ್ಯಕ್ತಪಡಿಸಲಾಯಿತು

1993ರಲ್ಲಿ ಸರ್ವೋಚ್ಚ ನ್ಯಾಯಲಯವು ಶಿಕ್ಷಣ ಕ್ಷೇತ್ರದ ದಿಕ್ಕನ್ನೇ ಬದಲಾಯಿಸುವ ಐತಿಹಾಸಿಕ ತೀರ್ಪೊಂದನ್ನು ನೀಡಿತು. ಈ ತೀರ್ಪು ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮೂಲಭೂತ ಹಕ್ಕಿನ ಸ್ಥಾನಮಾನವನ್ನು ನೀಡಿತು. 1994ರಲ್ಲಿ ಕೇಂದ್ರ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕಾಗಿಸಲು ತೀರ್ಮಾನಿಸಿತು. ನಂತರದ ವರ್ಷಗಳಲ್ಲಿ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಲು ರಾಜ್ಯ ಮಟ್ಟದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ರೂಪಿಸಿ, ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನ ಬೆಳವಣಿಗೆಯಾದಂತೆ, ಹಲವಾರು ಸುಧಾರಣೆಗಳು ಉತ್ತಮ ಫಲಿತಾಂಶವನ್ನು ನೀಡುತ್ತಿವೆ. ಮಾನವರನ್ನು ಉತ್ತಮ ಪ್ರಜೆಗಳಾಗಿ ರೂಪಿಸಲು ಮತ್ತು ಉತ್ಪಾದಕ ಸಮಾಜವನ್ನು ನಿರ್ಮಿಸಲು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಸ್ತುತ ರೂಪಿಸಲಾಗಿದೆ.

**ಚಿಂತನಾಶೀಲ ಪ್ರಶ್ನೆಗಳು**

1. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳು ಭಾರತದಲ್ಲಿ ಹೇಗೆ ಆರಂಭವಾದವು?
2. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಂಬಂಧ ಇದುವರೆಗೆ ಕೈಗೊಳ್ಳಲಾಗಿರುವ ವಿವಿಧ ಉಪ-ಕ್ರಮಗಳು ಯಾವುವು?
3. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಭಾಗೀದಾರರ ವಿವಿಧ ಜವಾಬ್ದಾರಿಗಳೇನು?

## 1.2 ರಾಷ್ಟ್ರೀಯ ಶಿಕ್ಷಣ ನೀತಿ 2020 ಪೀಠಿಕೆ

ಮಾನವನ ಪೂರ್ಣ ಅಂತಸ್ಥ ಸಾಮರ್ಥ್ಯವನ್ನು ಸಾಧಿಸಲು, ನ್ಯಾಯಸಮ್ಮತ ಮತ್ತು ನ್ಯಾಯಯುತ ಸಮಾಜವನ್ನು ಅಭಿವೃದ್ಧಿ ಪಡಿಸಲು ಮತ್ತು ರಾಷ್ಟ್ರದ ಅಭಿವೃದ್ಧಿಯನ್ನು ಉತ್ತೇಜಿಸಲು ಶಿಕ್ಷಣವು ಬುನಾದಿಯಾಗಿದೆ. ಭಾರತದ ಅವಿಚ್ಛಿನ್ನ ಅಭ್ಯುದಯ, ಜಾಗತಿಕ ವೇದಿಕೆಯಲ್ಲಿ ಆರ್ಥಿಕ ಬೆಳವಣಿಗೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆ, ವೈಜ್ಞಾನಿಕ ಪ್ರಗತಿ, ರಾಷ್ಟ್ರೀಯ ಸಮಗ್ರತೆ ಮತ್ತು ಸಂಸ್ಕೃತಿಯ ವಿಷಯದಲ್ಲಿ ಮುಂದಾಳತ್ವ ವಹಿಸಲು ಗುಣಮಟ್ಟದ ಶಿಕ್ಷಣವನ್ನು ಎಲ್ಲರಿಗೂ ಸಾರ್ವತಿಕ್ರವಾಗಿ ಒದಗಿಸುವುದು ಅತ್ಯಗತ್ಯವಾಗಿದೆ. ವ್ಯಕ್ತಿ, ಸಮಾಜ, ದೇಶ ಮತ್ತು ಪ್ರಪಂಚದ ಒಳಿತಿಗಾಗಿ ನಮ್ಮ ದೇಶದ ಸಂಪತ್ಭರಿತ ಪ್ರತಿಭೆ ಮತ್ತು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನೊದಗಿಸುವುದು ಅತ್ಯುತ್ತಮ ಮಾರ್ಗವಾಗಿದೆ. ಮುಂದಿನ ದಶಕಗಳಲ್ಲಿ ಭಾರತವು ವಿಶ್ವದಲ್ಲಿಯೇ ಅತಿ ಹೆಚ್ಚು ಯುವಜನರನ್ನು ಹೊಂದಿರುವ ದೇಶವಾಗಿರುತ್ತದೆ. ಈ ಯುವಜನರಿಗೆ ಉತ್ತಮ ಗುಣಮಟ್ಟದ ಶೈಕ್ಷಣಿಕ ಅವಕಾಶಗಳನ್ನು ಒದಗಿಸುವ ನಮ್ಮ ಸಾಮರ್ಥ್ಯವು ನಮ್ಮ ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ.

2015 ರಲ್ಲಿ ಭಾರತವು ಅಂಗೀಕರಿಸಿದ 2030ರ ಸುಸ್ಥಿರ ಅಭಿವೃದ್ಧಿಯ ಕಾರ್ಯ ಸೂಚಿಯ ಗುರಿ 4 (SDG–4) ರಲ್ಲಿ ಪ್ರತಿಬಿಂಬಿತವಾಗಿರುವ ಜಾಗತಿಕ ಶಿಕ್ಷಣ ಅಭಿವೃದ್ಧಿ ಕಾರ್ಯಸೂಚಿ 2030 – **"ಎಲ್ಲರನ್ನು ಒಳಗೊಳ್ಳುವ ಮತ್ತು ಸಮ್ಮತವಾದ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸಿಕೊಳ್ಳಲು ಜೀವನ ಪರ್ಯಂತ ಕಲಿಕೆಯ ಅವಕಾಶಗಳನ್ನು ಉತ್ತೇಜಿಸಲು"** ಪ್ರಯತ್ನಿಸುತ್ತದೆ. ಈ ಉದಾತ್ತ ಗುರಿಯನ್ನು ಸಾಧಿಸಲು ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪುನರ್ ರಚಿಸುವ ಅಗತ್ಯವಿದೆ.

ಜ್ಞಾನ ಕ್ಷೇತ್ರದಲ್ಲಿ ಕ್ಷಿಪ್ರತರವಾದ ಬದಲಾವಣೆಗಳಾಗುತ್ತಿವೆ. ಬೃಹತ್ ದತ್ತಾಂಶ, ಯಂತ್ರ ಕಲಿಕೆ ಮತ್ತು ಕೃತಕ ಬುದ್ಧಿಮತ್ತೆಯಂತಹ ಕೌತುಕ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯೊಂದಿಗೆ, ವಿಶ್ವಾದ್ಯಂತ ಅನೇಕ ಕೌಶಲರಹಿತ ಉದ್ಯೋಗಗಳನ್ನು ಯಂತ್ರಗಳೇ ಮಾಡುವಂತಾಗಬಹುದು. ಆದರೆ ನುರಿತ ಕಾರ್ಯಪಡೆಯ ಅವಶ್ಯಕತೆ ಇರುವ ಅದರಲ್ಲೂ ವಿಶೇಷವಾಗಿ ಗಣಿತವನ್ನು ಬಳಸುವ ಕಂಪ್ಯೂಟರ್ ವಿಜ್ಞಾನ, ದತ್ತಾಂಶ ವಿಜ್ಞಾನ, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಮಾನವಿಕತೆಗಳಾದ್ಯಂತ ಬಹುಶಿಸ್ತೀಯ ಸಾಮರ್ಥ್ಯಗಳ ಸಮಾಗಮಕ್ಕೆ ಹೆಚ್ಚಿನ ಬೇಡಿಕೆಯಿರುತ್ತದೆ. ಹವಾಮಾನ ಬದಲಾವಣೆ, ಹೆಚ್ಚುತ್ತಿರುವ ಮಾಲಿನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕ್ಷೀಣತೆಯೊಂದಿಗೆ, ನಾವು ವಿಶ್ವದ ಶಕ್ತಿ, ನೀರು, ಆಹಾರ ಮತ್ತು ನೈರ್ಮಲ್ಯದ ಅಗತ್ಯಗಳನ್ನು ಹೇಗೆ ಪೂರೈಸುತ್ತೇವೆ ಎಂಬುದರಲ್ಲಿಯೂ ಅಸಾಧಾರಣ ಬದಲಾವಣೆಗಳಾಗುತ್ತಿವೆ. ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಕೃಷಿ, ಹವಾಮಾನ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಇದಕ್ಕೆ ಅನುಗುಣವಾಗಿ ಹೊಸ ಹೊಸ ನುರಿತ ಕಾರ್ಮಿಕರ ಅವಶ್ಯಕತೆ ಉಂಟಾಗುತ್ತದೆ. ಸಾಂಕ್ರಾಮಿಕ ರೋಗಗಳು ಮತ್ತು ಸರ್ವವ್ಯಾಪಿ ಸಾಂಕ್ರಾಮಿಕ ವ್ಯಾಧಿಗಳ ಬೆಳವಣಿಗೆಯಿಂದ ಉಂಟಾಗುವ ತುರ್ತು ಸ್ಥಿತಿಯಲ್ಲಿ ಸಾಂಕ್ರಾಮಿಕ ರೋಗ ನಿರ್ವಹಣೆ ಮತ್ತು ಲಸಿಕೆಗಳ ಅಭಿವೃದ್ಧಿಯಲ್ಲಿ ಸಹಭಾಗಿತ್ವ ಸಂಶೋಧನೆಯು ಹೆಚ್ಚು ಸಹಕಾರಿಯಾಗುತ್ತದೆ. ಇದರ ಪರಿಣಾಮವಾಗಿ ಉಂಟಾಗುವ ಸಾಮಾಜಿಕ ಸಮಸ್ಯೆಗಳು ಬಹುಶಿಸ್ತೀಯ ಕಲಿಕೆಯ ಅಗತ್ಯವನ್ನು ಹೆಚ್ಚಿಸುತ್ತದೆ. ಭಾರತವು ಅಭಿವೃದ್ಧಿ ಹೊಂದಿದ ದೇಶವಾಗುವುದರ ಜೊತೆಗೆ ವಿಶ್ವದ ಮೂರು ಬೃಹತ್ ಆರ್ಥಿಕತೆಗಳ ನಡುವೆ ಸಾಗುತ್ತಿರುವುದರಿಂದ ಮಾನವಿಕ ಸಾಹಿತ್ಯ ಮತ್ತು ಕಲಾ ವಿಷಯಕ್ಕೂ ಹೆಚ್ಚಿನ ಬೇಡಿಕೆ ಇರುತ್ತದೆ.

ವಾಸ್ತವವಾಗಿ, ತ್ವರಿತವಾಗಿ ಬದಲಾಗುತ್ತಿರುವ ಉದ್ಯೋಗ ಕ್ಷೇತ್ರ ಮತ್ತು ಜಾಗತಿಕ ವ್ಯವಸ್ಥೆಯಲ್ಲಿ ಮಕ್ಕಳು ಹೆಚ್ಚು ಹೆಚ್ಚಾಗಿ

ಕಲಿಯುವುದು ಮುಖ್ಯವಲ್ಲ ಆದರೆ ಹೇಗೆ ಕಲಿಯಬೇಕು ಎಂಬುದು ನಿರ್ಣಾಯಕವಾಗುತ್ತದೆ. ಮಕ್ಕಳು ವಿಮರ್ಶಾತ್ಮಕವಾಗಿ ಯೋಚಿಸುವುದು, ಸಮಸ್ಯೆಗಳನ್ನು ಪರಿಹರಿಸುವುದು ಸೃಜನಶೀಲವಾಗಿ ವರ್ತಿಸುವುದು, ಬದಲಾಗುತ್ತಿರುವ ನವೀನ ಕ್ಷೇತ್ರದಲ್ಲಿ ಹೊಸತನ್ನು ಅವಿಷ್ಕರಿಸುವುದು ಮತ್ತು ನೂತನ ವಿಧಾನಗಳಿಗೆ ಹೊಂದಿಕೊಳ್ಳುವುದನ್ನು ಕಲಿಯಬೇಕು.

ಬೋಧನಾಕ್ರಮವು ಹೆಚ್ಚು ಅನುಭವಾತ್ಮಕ, ಅಖಂಡ, ಸಮಗ್ರ, ವಿಚಾರಣಾಕೇಂದ್ರಿತ, ಅವಿಷ್ಕಾರಕೇಂದ್ರಿತ, ಕಲಿಕಾರ್ಥಿಕೇಂದ್ರಿತ, ಚರ್ಚೆ ಆಧಾರಿತ, ನಮ್ಯತೆಯಿಂದಿರುವ ಮತ್ತು ಪ್ರಮುಖವಾಗಿ ಸಂತೋಷವಾಗಿ ಕಲಿಸಲು ವಿಕಸನಗೊಳ್ಳಬೇಕು. ಪಠ್ಯಕ್ರಮವು ಕಲಿಯುವವರ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಬೇಕು. ಶಿಕ್ಷಣವು ವಿಜ್ಞಾನ ಮತ್ತು ಗಣಿತದ ಜೊತೆಗೆ ಮೂಲ ಕಲೆಗಳು, ಕರಕುಶಲ, ಮಾನವಿಕಗಳು, ಆಟಗಳು, ಕ್ರೀಡೆ ಮತ್ತು ದೈಹಿಕ ದೃಢತೆ, ಭಾಷೆಗಳು, ಸಾಹಿತ್ಯ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಒಳಗೊಂಡಿಂರಬೇಕು. ಇವುಗಳನ್ನು ಕಲಿಕಾರ್ಥಿಗಳಿಗೆ ಸುಸಂಗತವಾಗಿ ಮತ್ತು ಉಪಯುಕ್ತವಾಗಿ ಒದಗಿಸುವಂತಿರಬೇಕು. ಶಿಕ್ಷಣವು ಕಲಿಯುವವರಲ್ಲಿ ಉತ್ತಮ ಚಾರಿತ್ರ್ಯ, ನೈತಿಕತೆ, ಯುಕ್ತಾಯುಕ್ತ ಜ್ಞಾನ, ಅನುಕಂಪ ಮತ್ತು ಕಾಳಜಿಯನ್ನು ಬೆಳಸಬೇಕು.

ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದಿಂದ ಉನ್ನತ ಶಿಕ್ಷಣದವರೆವಿಗೂ ವ್ಯವಸ್ಥೆಯಲ್ಲಿ ಉತ್ಕೃಷ್ಟ ಗುಣಮಟ್ಟ, ಸಮಾನತೆ ಮತ್ತು ಸಮಗ್ರತೆಯನ್ನು ತರುವ ನಿಟ್ಟಿನಲ್ಲಿ ಪ್ರಮುಖ ಸುಧಾರಣೆಗಳನ್ನು ಕೈಗೊಳ್ಳುವ ಅಗತ್ಯವಿದೆ. ಇದರ ಮೂಲಕ ವರ್ತಮಾನ ಸ್ಥಿತಿಯ ಕಲಿಕೆಯ ಫಲಶೃತಿಗಳು ಮತ್ತು ಅಗತ್ಯವಾಗಿ ಒದಗಿಸಬೇಕಾಗಿರುವ ಶಿಕ್ಷಣ – ಇವುಗಳ ನಡುವಿನ ಅಂತರವನ್ನು ಕಡಿಮೆಗೊಳಿಸಬೇಕು. ಸಾಮಾಜಿಕ ಅಥವಾ ಆರ್ಥಿಕ ಹಿನ್ನಲೆಯನ್ನು ಗಣನೆಗೆ ತೆಗೆದುಕೊಳ್ಳದೆ ಕಲಿಯುವವರೆಲ್ಲರಿಗೂ ಅತ್ಯುತ್ಕೃಷ್ಟ ಗುಣಮಟ್ಟದ ಶಿಕ್ಷಣಕ್ಕೆ ಸಮಾನ ಪ್ರವೇಶಾಕಾಶ ನೀಡುವುದು ಹಾಗೂ ಯಾವುದಕ್ಕೂ ಕಡಿಮೆಯಿಲ್ಲದ ಅದ್ವಿತೀಯ ಶಿಕ್ಷಣ ವ್ಯವಸ್ಥೆಯನ್ನು ಭಾರತವು 2040 ಕ್ಕೆ ಹೊಂದಿರಬೇಕು.

ರಾಷ್ಟ್ರೀಯ ಶಿಕ್ಷಣ ನೀತಿ 2020, 21 ನೇ ಶತಮಾನದ ಮೊದಲ ಶಿಕ್ಷಣ ನೀತಿಯಾಗಿದೆ. ನಮ್ಮ ದೇಶದ ಬೆಳೆಯುತ್ತಿರುವ ಅಭಿವೃದ್ಧಿಯ ಅಗತ್ಯತೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿದೆ. ಈ ನೀತಿಯನ್ನು ಭಾರತದ ಸಂಪ್ರದಾಯ ಹಾಗೂ ಮೌಲ್ಯಗಳ ಮೇಲೆ ರಚಿಸಲಾಗಿದೆ. ಇದು 21 ನೇ ಶತಮಾನದ ಶಿಕ್ಷಣದ ಮಹತ್ವಾಕಾಂಕ್ಷೆಯ ಗುರಿಗಳೊಂದಿಗೆ ಹೊಂದಿಕೆಯಾಗುವ ಹೊಸ ವ್ಯವಸ್ಥೆಯನ್ನು ನಿಯಂತ್ರಿಸಲು ಅದರ ರಚನೆ ಹಾಗೂ ಆಡಳಿತ ಸೇರಿದಂತೆ ಶಿಕ್ಷಣ ರಚನೆಯ ಎಲ್ಲಾ ಸ್ವರೂಪಾಂಶಗಳನ್ನು ಪರಿಶೀಲಿಸಲು, ಪರಿಷ್ಕರಿಸಲು ಪ್ರಸ್ತಾವನೆಗಳನ್ನು ಒಳಗೊಂಡಿದೆ. ರಾಷ್ಟ್ರೀಯ ಶಿಕ್ಷಣ ನೀತಿ–2020, ಪ್ರತಿ ವ್ಯಕ್ತಿಯ ಸೃಜನಶೀಲ ಸಾಮರ್ಥ್ಯದ ಅಭಿವೃದ್ಧಿಗೆ ಒತ್ತು ನೀಡುತ್ತದೆ. ಶಿಕ್ಷಣವು ಕೇವಲ ಜ್ಞಾನಾತ್ಮಕ ಸಾಮರ್ಥ್ಯಗಳಿಗೆ ಮಾತ್ರವಲ್ಲದೆ, ಸಾಕ್ಷರತೆ ಮತ್ತು ಎಣಿಕೆಯ ಮೂಲ ಸಾಮರ್ಥ್ಯ ಹಾಗೂ ವಿರ್ಮಶಾತ್ಮಕ ಚಿಂತನೆ ಮತ್ತು ಸಮಸ್ಯೆ ಪರಿಹಾರದಂತಹ ಉನ್ನತ ಜ್ಞಾನಾತ್ಮಕ ಸಾಮರ್ಥ್ಯಗಳು ಹಾಗೂ ಸಾಮಾಜಿಕ, ನೈತಿಕ ಮತ್ತು ಭಾವನಾತ್ಮಕ ಸಾಮರ್ಥ್ಯಗಳಿಗೂ ಅಣಿಗೊಳಿಸಬೇಕು.

**ಚಿಂತನಾಶೀಲ ಪ್ರಶ್ನೆಗಳು**

1. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳ ಬೆಳವಣಿಗೆಗೆ ಸಂಬಂಧಿಸಿದಂತೆ ನಿರೂಪಿಸಲ್ಪಟ್ಟಿರುವ ಪ್ರಮುಖ ಅಂಶಗಳು ಯಾವುವು?
2. ಇವುಗಳಿಂದ ಶಿಕ್ಷಣ ಕ್ಷೇತ್ರವು ಬದಲಾವಣೆಗಳತ್ತ ಹೇಗೆ ಮುನ್ನಡೆಯುತ್ತದೆ ಎಂದು ಭಾವಿಸುವಿರಿ?

## 1.3.ಮುಖ್ಯಾಂಶಗಳು

### ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ನಾಲ್ಕು ಭಾಗಗಳಿವೆ.

**ಭಾಗ 1. ಶಾಲಾ ಶಿಕ್ಷಣ:** ಈ ಭಾಗವು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿದೆ. ಆರಂಭಿಕ ಬಾಲ್ಯಾವಸ್ಥೆಯ ಆರೈಕೆ ಮತ್ತು ಶಿಕ್ಷಣ, ಆರಂಭಿಕ ಸಾಕ್ಷರತೆ ಮತ್ತು ಬುನಾದಿ ಸಂಖ್ಯಾಶಾಸ್ತ್ರ, ಸಾರ್ವತ್ರಿಕ ದಾಖಲಾತಿಯನ್ನು ಎಲ್ಲಾ ಹಂತಗಳಲ್ಲಿಯೂ ಸಾಧಿಸುವುದು ಮತ್ತು ಶಾಲೆಯಿಂದ ಹೊರಗುಳಿಯುವುದನ್ನು ತಡೆಗಟ್ಟುವುದು, ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ಕ್ರಮಗಳು, ಶಿಕ್ಷಕರು, ಸಮವರ್ತಿ ಮತ್ತು ಒಳಗೊಳ್ಳುವ ಶಿಕ್ಷಣ, ಪರಿಣಾಮಕಾರಿ ಶೈಕ್ಷಣಿಕ ಕಾರ್ಯಗಳಿಗಾಗಿ ಶಾಲಾ ಸಂಕೀರ್ಣ/ಗುಚ್ಛಗಳ ನಿರ್ಮಾಣ ಹಾಗೂ ಶಾಲಾ ಶಿಕ್ಷಣದ ಅಂಗೀಕರಣಕ್ಕಾಗಿ ಮಾನದಂಡಗಳನ್ನು ಗುರ್ತಿಸುವುದಕ್ಕೆ ಸಂಬಂಧಿಸಿದ ಅಂಶಗಳನ್ನು ವಿವರಿಸಲಾಗಿದೆ. ಇದರಲ್ಲಿ ಒಟ್ಟು 8 ಅಧ್ಯಾಯಗಳಿವೆ. (1 ರಿಂದ 8)

**ಭಾಗ 2. ಉನ್ನತ ಶಿಕ್ಷಣ:** ಈ ಭಾಗದಲ್ಲಿ ಉನ್ನತ ಶಿಕ್ಷಣಕ್ಕೆ ಪೂರಕವಾದ ಅಂಶಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಉನ್ನತ ಗುಣಮಟ್ಟದ ವಿಶ್ವವಿದ್ಯಾಲಯಗಳು ಮತ್ತು ಪದವಿ ಕಾಲೇಜುಗಳು, ಕಾಲೇಜುಗಳ ಸಾಂಸ್ಥಿಕ ಪುನಾರಚನೆ ಮತ್ತು ಬಲವರ್ಧನೆ, ಹೆಚ್ಚು ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣ, ಉತ್ಕೃಷ್ಟ ಕಲಿವಿನ ವಾತಾವರಣ ಮತ್ತು ವಿದ್ಯಾರ್ಥಿ ಬೆಂಬಲಿತ ಅಂಶಗಳು, ಪ್ರೇರಣಾತ್ಮಕ,

ಬಲವರ್ಧಿತ ಮತ್ತು ಸಾಮರ್ಥ್ಯ ಹೊಂದಿದ ಬೋಧನಾವರ್ಗ, ಉನ್ನತ ಶಿಕ್ಷಣದಲ್ಲಿ ಸಮಾನತೆ ಮತ್ತು ಒಳಗೊಳ್ಳುವಿಕೆ, ಶಿಕ್ಷಕರ ಶಿಕ್ಷಣ, ವೃತ್ತಿಪರ ಶಿಕ್ಷಣ, ಶೈಕ್ಷಣಿಕ ಸಂಶೋಧನೆ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ನಿಯಂತ್ರಣವನ್ನು ಪರಿವರ್ತಿಸುವುದಕ್ಕೆ ಪೂರಕವಾದ ಅಂಶಗಳನ್ನು ನೀಡಲಾಗಿದೆ. ಇದರಲ್ಲಿ ಒಟ್ಟು 11 ಅಧ್ಯಾಯಗಳಿವೆ (9 ರಿಂದ 19)

**ಭಾಗ 3. ಗಮನಹರಿಸಬೇಕಾದ ಇತರೆ ಪ್ರಮುಖ ಕ್ಷೇತ್ರಗಳು:** ಈ ಭಾಗದಲ್ಲಿ ಗಮನಹರಿಸಬೇಕಾದ ಇತರೆ ಪ್ರಮುಖ ಕ್ಷೇತ್ರಗಳಾದ ವೃತ್ತಿಪರ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆ, ಭಾರತೀಯ ಭಾಷೆಗಳು, ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುವ ಅಂಶಗಳು, ತಂತ್ರಜ್ಞಾನದ ಬಳಕೆ ಮತ್ತು ಸಮ್ಮಿಳಿತ, ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣ – ತಂತ್ರಜ್ಞಾನವನ್ನು ಸಮಾನವಾಗಿ ಬಳಸಿಕೊಳ್ಳುವುದನ್ನು ಖಚಿತಪಡಿಸುವ ಅಂಶಗಳ ಕುರಿತು ಬೆಳಕು ಚೆಲ್ಲಲಾಗಿದೆ. ಇದರಲ್ಲಿ ಒಟ್ಟು 5 ಅಧ್ಯಾಯಗಳಿವೆ. (20 ರಿಂದ 24)

**ಭಾಗ 4. ಶಿಕ್ಷಣವನ್ನು ಪರಿವರ್ತನೆಗೊಳಿಸುವುದು ಗುರಿ ಸಾಧಿಸುವ ಬಗೆಗಿನ ಅಂಶಗಳು(ಕಾರ್ಯಗತಗೊಳಿಸುವುದು):** ಈ ಅಧ್ಯಾಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅಂಶಗಳನ್ನು ಸಾಧಿಸುವ ಬಗೆಗಿನ ಅಗತ್ಯವಾದ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಕೇಂದ್ರೀಯ ಶಿಕ್ಷಣ ಸಲಹಾ ಮಂಡಲಿಯನ್ನು ಬಲವರ್ಧನಗೊಳಿಸುವುದು, ಹಣಕಾಸನ್ನು ಒದಗಿಸುವುದು ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.ಇದರಲ್ಲಿ ಒಟ್ಟು 3 ಅಧ್ಯಾಯಗಳಿವೆ. (25 ರಿಂದ 27)

## 1.4.ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಮುಖ ತತ್ವಗಳು

- ಪ್ರತಿ ವಿದ್ಯಾರ್ಥಿಯ ಅನನ್ಯ ಸಾಮರ್ಥ್ಯವನ್ನು ಗುರುತಿಸುವುದು. ಇವುಗಳಿಂದ ಶಿಕ್ಷಕರು ಮತ್ತು ಪೋಷಕರನ್ನು ಸಂವೇದನಾಶೀಲರನ್ನಾಗಿಸುವುದರಿಂದ ವೇಗವಾಗಿ ಸಾಧಿಸುವುದು. ಪಠ್ಯ ಮತ್ತು ಪಠ್ಯೇತರ ವಲಯಗಳಲ್ಲಿ ಪ್ರತಿ ವಿದ್ಯಾರ್ಥಿಯ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವುದು.
- 3ನೇ ಗ್ರೇಡ್ ಶಿಕ್ಷಣವನ್ನು ಪಡೆಯುವ ವೇಳೆಗೆ ಎಲ್ಲಾ ವಿದ್ಯಾರ್ಥಿಗಳಲ್ಲಿ ಆರಂಭಿಕ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಸಾಧಿಸಲು ಅತಿ ಹೆಚ್ಚಿನ ಪ್ರಾತಿನಿಧ್ಯ ನೀಡುವುದು.
- ಕಲಿಕಾರ್ಥಿಗಳು ತಮ್ಮ ಕಲಿವಿನ ಪಥವನ್ನು ಮತ್ತು ಕಾರ್ಯಕ್ರಮಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಶಿಕ್ಷಣವನ್ನು ರೂಪಿಸುವುದು. ಜೀ ೀವನದಲ್ಲಿ ಬೌದ್ಧಿಕತೆ ಮತ್ತು ಆಸಕ್ತಿಗನುಗುಣವಾಗಿ ತಮ್ಮ ಪಥವನ್ನು ಆಯ್ಕೆ ಮಾಡಿಕೊಳ್ಳಲು ನಮ್ಯತೆ (flexibility) ಯನ್ನು ನೀಡುವುದು – ಒಟ್ಟಿನಲ್ಲಿ ತಾರತಮ್ಯವಿಲ್ಲದ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದು.
- ಕಲಿವಿನ ವಿವಿಧ ಕ್ಷೇತ್ರಗಳಲ್ಲಿ ಅಸಮಾನತೆಯನ್ನು ತೊಡೆದು ಹಾಕಲು ಕಲೆ ಮತ್ತು ವಿಜ್ಞಾನಗಳನ್ನು, ಪಠ್ಯ ಮತ್ತು ಪಠ್ಯೇತರ ವಿಷಯಗಳು ಹಾಗೂ ವೃತ್ತಿಪರ ಮತ್ತು ಶೈಕ್ಷಣಿಕ ವಿಭಾಗಗಳನ್ನು ಬೇರೆಬೇರೆಯಾಗಿ ವಿಭಾಗಿಸದಿರುವುದು.
- ಪರೀಕ್ಷೆಗಾಗಿ ಕಂಠಪಾಠ ಮಾಡುವುದು ಹಾಗೂ (ಯಾಂತ್ರಿಕ ಕಲಿಕೆ) ಅರ್ಥರಹಿತ ಕಂಠಪಾಠವನ್ನು ತಪ್ಪಿಸಲು ಪರಿಕಲ್ಪನಾತ್ಮಕ ಗ್ರಹಿಕೆಗೆ ಒತ್ತನ್ನು ನೀಡುವುದು.
- ತಾರ್ಕಿಕ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ಹೊಸತನ್ನು ಸಂಶೋಧಿಸಲು ಅನುವಾಗುವಂತೆ ಕ್ರಿಯಾಶೀಲತೆ ಮತ್ತು ತಾರ್ಕಿಕ ಚಿಂತನೆಯನ್ನು ಪ್ರೋತ್ಸಾಹಿಸುವುದು.



- ಬೋಧನೆ ಮತ್ತು ಕಲಿಕೆಯಲ್ಲಿ ಬಹು ಭಾಷಾಜ್ಞಾನ ಮತ್ತು ಭಾಷೆಯ ಪ್ರೌಢಿಮೆಯನ್ನು ಉತ್ತೇಜಿಸುವುದು.
- ಇಂದಿನ ಕೋಚಿಂಗ್ ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಸಂಕಲನಾತ್ಮಕ ಮೌಲ್ಯಮಾಪನದ ಬದಲಾಗಿ ನಿಯಮಿತ ರಚನಾತ್ಮಕ ಮೌಲ್ಯಮಾಪನದತ್ತ ಗಮನಹರಿಸುವುದು.
- ಬೋಧನೆ ಮತ್ತು ಕಲಿಕೆಯಲ್ಲಿ ಭಾಷೆಯ ಅಡೆತಡೆಗಳನ್ನು ತೆಗೆದುಹಾಕುವಲ್ಲಿ, ವಿಕಲಚೇತನ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಹೆಚ್ಚಿಸುವುದು. ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯಲ್ಲಿ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸುವುದು.
- ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿನ ವಿಷಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಪಠ್ಯಕ್ರಮ, ಬೋಧನಾ ವಿಧಾನ ಮತ್ತು ನೀತಿಯಲ್ಲಿ ಸ್ಥಳೀಯ ವೈವಿಧ್ಯತೆಗೆ ಗೌರವ ನೀಡುವುದು.
- ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ ಹಂತದಿಂದ ಶಾಲಾ ಶಿಕ್ಷಣದವರೆಗೆ ಎಲ್ಲಾ ಹಂತದ ಶಿಕ್ಷಣದ ಪಠ್ಯಕ್ರಮದಲ್ಲಿ ಯೋಜನಾಬದ್ಧವಾಗಿ ಸಮನ್ವಯಗೊಳಿಸುವುದು.
- ಸ್ವಾಯತ್ತತೆ, ಉತ್ತಮ ಆಡಳಿತ ಮತ್ತು ಸಬಲೀಕರಣದ ಮೂಲಕ ನಾವಿನ್ಯತೆ ಮತ್ತು ಸೃಜನಶೀಲ ಆಲೋಚನೆಗಳನ್ನು ಉತ್ತೇಜಿಸುತ್ತಾ, ಲೆಕ್ಕ ಪರಿಶೋಧನೆ ಮತ್ತು ಪಾರದರ್ಶಕತೆಯ ಮೂಲಕ ಶೈಕ್ಷಣಿಕ ವ್ಯವಸ್ಥೆಯ ಸಮಗ್ರತೆ, ಪಾರದರ್ಶಕತೆ ಮತ್ತು ಸಂಪನ್ಮೂಲ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು 'ಹಗುರಾದ ಆದರೆ ಬಿಗಿಯಾದ' (light but tight) ನಿಯಂತ್ರಕ ಚೌಕಟ್ಟು ರೂಪಿಸುವುದು.
- ಅತ್ಯುತ್ತಮ ಶಿಕ್ಷಣ ಮತ್ತು ಅಭಿವೃದ್ಧಿಗೆ ಪೂರಕ ಅಗತ್ಯವಾಗಿ ಅತ್ಯುತ್ತಮ ಸಂಶೋಧನೆಗೆ ಪ್ರೋತ್ಸಾಹ ನೀಡುವುದು.
- ಶೈಕ್ಷಣಿಕ ತಜ್ಞರಿಂದ ನಿರಂತರ ಸಂಶೋಧನೆ ಮತ್ತು ನಿಯಮಿತ ಮೌಲ್ಯಮಾಪನ ಆಧಾರದ ಮೇಲೆ ಪ್ರಗತಿಯ ನಿರಂತರ ವಿಮರ್ಶೆ ಮಾಡುವುದು.
- ಭಾರತೀಯತೆಯಲ್ಲಿ ಭದ್ರವಾದ ನಂಬಿಕೆ, ಪ್ರಾಚೀನ ಮತ್ತು ಆಧುನಿಕ ಭಾರತದ ಶ್ರೀಮಂತ ಸಂಸ್ಕೃತಿ, ಜ್ಞಾನ ವ್ಯವಸ್ಥೆಗಳು ಮತ್ತು ಸಂಪ್ರದಾಯಗಳ ಬಗ್ಗೆ ಹೆಮ್ಮೆ ಪಡುವಂತೆ ಮಾಡುವುದು.
- ಶಿಕ್ಷಣವು ಸಾರ್ವಜನಿಕ ಸೇವೆಯಾಗಿದೆ; ಗುಣಮಟ್ಟದ ಶಿಕ್ಷಣವನ್ನು ಪಡೆಯುವುದು ಪ್ರತಿ ಮಗುವಿನ ಮೂಲಭೂತ ಹಕ್ಕು ಎಂದು ಪರಿಗಣಿಸುವುದು.
- ಸುಭದ್ರವಾದ ಮತ್ತು ಚಲನಶೀಲ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಗಣನೀಯ ಹೂಡಿಕೆ ಮತ್ತು ಸಾರ್ವಜನಿಕ ಸೇವೆಯ ನೈಜ ಉದ್ದೇಶ ಹಾಗೂ ಸೇವಾ ಮನೋಭಾವವುಳ್ಳ ಉದ್ದೇಶದ ಖಾಸಗಿ ವ್ಯಕ್ತಿ/ ಸಂಸ್ಥೆಗಳ ಮತ್ತು ಸಮುದಾಯದ ಭಾಗವಹಿಸುವಿಕೆಗೆ ಪ್ರೋತ್ಸಾಹ ನೀಡುವುದು.

## 1.4.ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕಾಣ್ಕೆ (VISION)

- ರಾಷ್ಟ್ರೀಯ ಶಿಕ್ಷಣ ನೀತಿ ಭಾರತದ ಮನೋದೃಷ್ಟಿಯಲ್ಲಿ ಬೇರೂರಿರುವ ಶಿಕ್ಷಣ ವ್ಯವಸ್ಥೆಯನ್ನು ದರ್ಶಿಸುತ್ತ, ದೇಶವನ್ನು ಒಂದು ಸುಸ್ಥಿರ, ಸಮದರ್ಶಿ ಮತ್ತು ಸಮರ್ಥ ಜ್ಞಾನವಂತ ಸಮಾಜವನ್ನಾಗಿ ರೂಪಿಸಲು ಅನುವಾಗುವಂತೆ ಎಲ್ಲರಿಗೂ ಅತ್ಯುತ್ಕೃಷ್ಟ ಶಿಕ್ಷಣವನ್ನು ನೀಡುವುದರ ಮೂಲಕ ಜಾಗತಿಕವಾಗಿ ಜ್ಞಾನಪ್ರಭುತ್ವ ರಾಷ್ಟ್ರವನ್ನಾಗಿಸಲು ಕೊಡುಗೆ ನೀಡುತ್ತದೆ.
- ನಮ್ಮ ಶಾಲೆಗಳ ಪಠ್ಯಕ್ರಮ ಮತ್ತು ಶಿಕ್ಷಣ ಬೋಧನಾಕ್ರಮವು ವಿದ್ಯಾರ್ಥಿಗಳಲ್ಲಿ ಮೂಲಭೂತ ಕರ್ತವ್ಯಗಳು ಮತ್ತು ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಆಳವಾದ ಗೌರವವನ್ನು ಬೆಳೆಸಬೇಕು, ದೇಶದೊಂದಿಗೆ ಬಾಂಧವ್ಯ ಹಾಗೂ ಬದಲಾಗುತ್ತಿರುವ ಜಗತ್ತಿನಲ್ಲಿ ಅವರ ಪಾತ್ರಗಳು ಮತ್ತು ಜವಾಬ್ದಾರಿಗಳ ಕುರಿತು ಅರಿವು ಮೂಡಿಸಬೇಕು ಎಂಬುದನ್ನು ನೀತಿಯು ಇಚ್ಛಿಸಿದೆ.
- ಕಲಿಯುವವರಲ್ಲಿ ಭಾರತೀಯನಾಗಿರುವುದಕ್ಕೆ ಅತಿಶಯವಾಗಿ ಹೆಮ್ಮೆಪಡುವುದು – ಕೇವಲ ಚಿಂತನೆಯಲ್ಲಿ ಮಾತ್ರವಲ್ಲದೆ ಅಂತಃಕರಣದಲ್ಲಿಯೂ, ಪ್ರಜ್ಞಾ ಪೂರ್ವಕ ಹಾಗೂ ಉದ್ದೇಶಪೂರ್ವಕವಾಗಿಯೂ ಸಹಾ; ಹಾಗೆಯೇ ಜ್ಞಾನ, ಕೌಶಲ, ಮೌಲ್ಯಗಳು ಮತ್ತು ಮಾನವ ಹಕ್ಕುಗಳ ಕುರಿತು ಜವಾಬ್ದಾರಿಯುತ ಬದ್ಧತೆಯನ್ನು ಬೆಂಬಲಿಸಲು ಕಲಿಯುವವರನ್ನು ಸಿದ್ಧಗೊಳಿಸಿ, ಸುಸ್ಥಿರ ಜೀವನ ಮತ್ತು ಅಭಿವೃದ್ಧಿ ಹಾಗೂ ಜಾಗತಿಕ ಯೋಗಕ್ಷೇಮವನ್ನು ಬೆಂಬಲಿಸುವುದರ ಮೂಲಕ ನಿಜವಾದ ಜಾಗತಿಕ ನಾಗರೀಕರನ್ನಾಗಿಸುವ ದೃಷ್ಟಿಕೋನವನ್ನು ನೀತಿಯು ಪ್ರತಿಬಿಂಬಸುತ್ತದೆ.

## ಅಧ್ಯಾಯವಾರು ನೀತಿಯ ಪ್ರಮುಖ ಅವಲೋಕನಗಳು

### ಭಾಗ– 01 ಶಾಲಾ ಶಿಕ್ಷಣ

1. **01. ಪ್ರಾರಂಭಿಕ ಬಾಲ್ಯಾವಸ್ಥೆಯ ಆರೈಕೆ ಮತ್ತು ಶಿಕ್ಷಣ** – ಕಲಿಕೆಗೆ ಸುಭದ್ರ ಅಡಿಪಾಯ: ಈ ನೀತಿಯು ಪ್ರಾರಂಭಿಕ ಬಾಲ್ಯ ಶಿಕ್ಷಣದ ಮಹತ್ವಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತದೆ. 3 ರಿಂದ 6 ವರ್ಷ ವಯೋಮಾನದ ಎಲ್ಲಾ ಮಕ್ಕಳಿಗೆ 2025ರ ವೇಳೆಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಧ್ಯೇಯವನ್ನು ಹೊಂದಿದೆ. ಈ ದಿಕ್ಕಿನಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವ ಗುರಿಯನ್ನು ಹೊಂದಿದೆ. ಇದು ಮಕ್ಕಳಲ್ಲಿ ಒಟ್ಟಾರೆ ಉತ್ತಮ ಕಲಿಕೆ, ಅಭಿವೃದ್ಧಿ

ಮತ್ತು ಸ್ವಾಸ್ಥ್ಯವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

2. **ಆರಂಭಿಕ ಸಾಕ್ಷರತೆ ಮತ್ತು ಬುನಾದಿ ಸಂಖ್ಯಾ ಜ್ಞಾನ:** ಕಲಿಕೆಗೆ ತುರ್ತಾದ ಮತ್ತು ಅವಶ್ಯಕ ಪೂರ್ವಾರ್ಹತೆ: 1 ರಿಂದ 5ನೇ ತರಗತಿಯವರೆಗಿನ ಮಕ್ಕಳಿಗೆ ಪ್ರಾರಂಭಿಕ ಹಂತದಲ್ಲಿ ಭಾಷಾ ಕಲಿಕೆ ಮತ್ತು ಗಣಿತದ ಕೌಶಲಗಳನ್ನು ಕಲಿಸುವ ಬಗ್ಗೆ ವಿಶೇಷ ಗಮನವನ್ನು ನೀಡಲಾಗುತ್ತದೆ. 2025ರ ವೇಳೆಗೆ 5ನೇ ತರಗತಿಯಲ್ಲಿ ಮತ್ತು ಅದಕ್ಕಿಂತ ಮೇಲಿನ ತರಗತಿಗಳಲ್ಲಿ ಓದುತ್ತಿರುವ ಪ್ರತಿ ವಿದ್ಯಾರ್ಥಿಯೂ ಪ್ರಾರಂಭಿಕ ಭಾಷಾ ಸಾಮರ್ಥ್ಯ ಮತ್ತು ಗಣಿತ ಕೌಶಲಗಳನ್ನು ಪಡೆಯುವಂತೆ ಮಾಡುವುದು ಈ ನೀತಿಯ ಧ್ಯೇಯವಾಗಿದೆ.

3. **ಮಕ್ಕಳು ಶಾಲೆಯಿಂದ ಹೊರಗುಳಿಯುವ ದರವನ್ನು ಕಡಿತಗೊಳಿಸುವುದು ಮತ್ತು ಶಿಕ್ಷಣದ ಎಲ್ಲ ಹಂತದಲ್ಲೂ ಸಾರ್ವತ್ರಿಕ ಪ್ರವೇಶ ಮತ್ತು ಧಾರಣತೆಯನ್ನು ಖಾತ್ರಿಪಡಿಸುವುದು:** ಹಲವಾರು ಕ್ರಮಗಳ ಮೂಲಕ 2030ರ ವೇಳೆಗೆ 100% ರಷ್ಟು ಶಾಲಾ ದಾಖಲಾತಿಯನ್ನು ಸಾಧಿಸುವುದು ಈ ನೀತಿಯ ಉದ್ದೇಶವಾಗಿದೆ.

4. **ಶಾಲೆಗಳಲ್ಲಿ ಪಠ್ಯಕ್ರಮ ಹಾಗೂ ಶಿಕ್ಷಣ ಕ್ರಮ (ಬೋಧನಾಕ್ರಮ):** ಕಲಿಕೆ ಸಮಗ್ರ, ಸಂತಸದಾಯಕ ಮತ್ತು ಎಲ್ಲರನ್ನೂ ತೊಡಗಿಸಿಕೊಳ್ಳಲು ಮಕ್ಕಳ ಮೆದುಳಿನ ಬೆಳವಣಿಗೆ ಹಾಗೂ ಕಲಿಕೆಗೆ ಸೂಕ್ತವಾದ ಶೈಕ್ಷಣಿಕ ಕ್ರಮ ಮತ್ತು ಪಠ್ಯಕ್ರಮವನ್ನು 5 + 3 + 3 + 4 ಮಾದರಿಯಲ್ಲಿ ವಿನ್ಯಾಸಗೊಳಿಸುವುದು. ಭಾಷೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಕಲೆ ಮತ್ತು ಕ್ರೀಡೆಗಳಿಗೆ ಸಮಾನ ಒತ್ತು ನೀಡಲಾಗುವುದು. ಹಾಗೆಯೇ, ಶೈಕ್ಷಣಿಕ ಮತ್ತು ಔದ್ಯೋಗಿಕ ಶಿಕ್ಷಣವನ್ನು ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಒಂದಾಗಿ ಬೆಸೆಯುವುದು ಈ ನೀತಿಯ ಗುರಿಯಾಗಿದೆ.

5. **ಶಿಕ್ಷಕರು:** ಶಾಲಾ ಶಿಕ್ಷಕರನ್ನು ಒಂದು ಉತ್ತಮ ಹಾಗೂ ಸಂಪೂರ್ಣ ಪಾರದರ್ಶಕ ಪ್ರಕ್ರಿಯೆಯ ಮೂಲಕ ನೇಮಕ ಮಾಡಲಾಗುವುದು. ಅರ್ಹತೆಯ ಮೇರೆಗೆ ಮುಂಬಡ್ತಿಯನ್ನು ನೀಡಲಾಗುವುದು ಮತ್ತು ಶಿಕ್ಷಕರು ಶಿಕ್ಷಣ ತಜ್ಞರಾಗಿ ಮತ್ತು ಶಿಕ್ಷಣ ಆಡಳಿತಗಾರರಾಗಿ ಕಾರ್ಯನಿರ್ವಹಿಸಲು ನೆರವಾಗುವಂತೆ ಕಾಲ ಕಾಲಕ್ಕೆ ವಿವಿಧ ಮೂಲಗಳಿಂದ ಮೌಲ್ಯಮಾಪನ ಮಾಡಿಸಲಾಗುವುದು.

6. **ಸಮಾನ ಹಾಗೂ ಒಳಗೊಳ್ಳುವ(ಸಮನ್ವಯ)** (Inclusive Education) ಶಿಕ್ಷಣ: ಎಲ್ಲರಿಗಾಗಿ ಕಲಿಕೆ – ಯಾವುದೇ ಮಗು ತನ್ನ ಹುಟ್ಟು ಮತ್ತು ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳ ಕಾರಣದಿಂದಾಗಿ ಕಲಿಕೆಯ ಅವಕಾಶದಿಂದ ವಂಚಿತವಾಗದಿರಲು ನೀತಿಯು ಅನೇಕ ಕ್ರಮಗಳನ್ನು ಸೂಚಿಸುತ್ತದೆ.

7. **ಶಾಲಾ ಸಂಕೀರ್ಣಗಳ/ಸಮೂಹಗಳ ಮೂಲಕ ಸಂಪನ್ಮೂಲಗಳ ಸಮರ್ಥ ಉಪಯೋಗ ಮತ್ತು ಪರಿಣಾಮಕಾರಿ ಆಡಳಿತ: ಶಾಲೆಗಳನ್ನು ಒಂದೊಂದು ಗುಂಪನ್ನಾಗಿ ಮಾಡಿ ಶಾಲಾ ಸಂಕೀರ್ಣಗಳನ್ನು (10 ರಿಂದ 20 ಸಾರ್ವಜನಿಕ ಶಾಲೆಗಳ ಕ್ಲಸ್ಟರ್) ನಿರ್ಮಿಸಲಾಗುವುದು.** ಇದು ಶಾಲಾ ಆಡಳಿತದ ಮೂಲ ಘಟಕವಾಗಿದ್ದು, ಉತ್ತಮ ವೃತ್ತಿಪರ ಶಿಕ್ಷಕರ ಜೊತೆಗೆ ಮೂಲಭೂತ ಸೌಕರ್ಯಗಳು, ಶೈಕ್ಷಣಿಕ (ಉದಾ. ಗ್ರಂಥಾಲಯ, ಪ್ರಯೋಗಾಲಯ ಇತ್ಯಾದಿ) ಮತ್ತು ಮಾನವ ಸಂಪನ್ಮೂಲಗಳ (ಉದಾ. ಕಲೆ ಮತ್ತು ಸಂಗೀತ ಶಿಕ್ಷಕರು) ಲಭ್ಯತೆಯನ್ನು ಖಾತರಿಪಡಿಸುತ್ತದೆ.

8. **ಶಾಲಾ ಶಿಕ್ಷಣಕ್ಕಾಗಿ ಪ್ರಮಾಣಿತ ವ್ಯವಸ್ಥೆ ಮತ್ತು ಮಾನ್ಯತೆ:** ಶಾಲಾ ಕಾರ್ಯನಿರ್ವಹಣೆ ಮತ್ತು ನಿಯಂತ್ರಣಗಳನ್ನು ಭಿನ್ನ ಭಿನ್ನ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುವುದು. ಇದು ಹಿತಾಸಕ್ತಿಗಳ ಸಂಘರ್ಷವನ್ನು ತಪ್ಪಿಸಲು ನೆರವಾಗುತ್ತದೆ. ನೀತಿ ನಿರೂಪಣೆ, ನಿಯಂತ್ರಣ, ಕಾರ್ಯಾಚರಣೆ ಮತ್ತು ಶೈಕ್ಷಣಿಕ ವಿಷಯಗಳನ್ನು ನಿರ್ವಹಿಸಲು ವಿಭಿನ್ನವಾದ ಹಾಗೂ ಸ್ಪಷ್ಟವಾದ ವ್ಯವಸ್ಥೆಗಳನ್ನು ರೂಪಿಸಲಾಗುತ್ತದೆ.

## ಭಾಗ 02. ಉನ್ನತ ಶಿಕ್ಷಣ

9. **ಗುಣಮಟ್ಟದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು:** ಭಾರತದ ಹೊಸ ಮತ್ತು ಪ್ರಗತಿಪರ ಮುನ್ನೋಟದ (ದೂರದರ್ಶಿತ್ವದ ದೃಷ್ಟಿಕೋನ) ಉನ್ನತ ಶಿಕ್ಷಣ ವ್ಯವಸ್ಥೆಗಾಗಿ: ಹೆಚ್ಚು ಹೆಚ್ಚು ಬಹುಶಿಸ್ತೀಯ ಪದವಿ ಪೂರ್ವ ಶಿಕ್ಷಣದತ್ತ ಸಾಗುವುದು; ವಿದ್ಯಾರ್ಥಿಗಳಿಗೆ ಪಠ್ಯಕ್ರಮ, ಶಿಕ್ಷಣಶಾಸ್ತ್ರ, ಮೌಲ್ಯಮಾಪನ ಕ್ರಮಗಳನ್ನು ಪರಿಷ್ಕರಿಸುವುದು; ಬೋಧನೆ, ಸಂಶೋಧನೆ ಮತ್ತು ಸೇವೆಯ ಆಧಾರದ ಮೇಲೆ ನೇಮಕಾತಿ ಮತ್ತು ವೃತ್ತಿ ಪ್ರಗತಿಗೆ ಅವಕಾಶ; ಹಾಗೂ ಆನ್ ಲೈನ್ ಶಿಕ್ಷಣ ಮತ್ತು ಮುಕ್ತ ದೂರ ಶಿಕ್ಷಣಕ್ಕೆ ಸೌಕರ್ಯ ಒದಗಿಸುವುದು.

10. **ಸಾಂಸ್ಥಿಕ ಪುನರ್ ರಚನೆ ಮತ್ತು ಬಲವರ್ಧನೆ:** ಬೃಹತ್ ಗಾತ್ರದ, ಉನ್ನತ ಸಂಪನ್ಮೂಲಗಳನ್ನು ಹೊಂದಿರುವ ಬಹುಶಿಸ್ತೀಯ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಹೊಸ ಮುನ್ನೋಟ ಮತ್ತು ಸಂರಕ್ಷಣೆಗಳನ್ನು ರೂಪಿಸಲಾಗಿದೆ. ಈಗ ಅಸ್ತಿತ್ವದಲ್ಲಿರುವ 800 ವಿಶ್ವವಿದ್ಯಾಲಯಗಳು ಮತ್ತು 40,000 ಕಾಲೇಜುಗಳನ್ನು 15,000 ಅತ್ಯುತ್ತಮ ಗುಣಮಟ್ಟದ ಶೈಕ್ಷಣಿಕ ಸಂಸ್ಥೆಗಳನ್ನಾಗಿ ಪರಿವರ್ತಿಸಲಾಗುತ್ತದೆ.

11. **ಹೆಚ್ಚು ಸಮಗ್ರ ಮತ್ತು ಬಹುಶಿಸ್ತೀಯ ಅಧ್ಯಯನದ ಕಡೆಗೆ:** ವಿಜ್ಞಾನ, ಕಲೆ, ಗಣಿತಶಾಸ್ತ್ರ, ಮಾನವಿಕಗಳು ಮತ್ತು ವೃತ್ತಿಪರ

ಕ್ಷೇತ್ರಗಳನ್ನು ಒಟ್ಟಾಗಿ ಬೆಸೆದ ಸ್ಥೂಲವಾಗಿ ಉದಾರವಾದಿಯಾದ ಪದವಿ ಶಿಕ್ಷಣವನ್ನು ಜಾರಿಗೊಳಿಸಲಾಗುವುದು. ಈ ಶಿಕ್ಷಣ ಕ್ರಮವು ಕಲ್ಪನಾ ಶಕ್ತಿಯನ್ನು ವರ್ಧಿಸುವ ಮತ್ತು ಎಲ್ಲದಕ್ಕೂ ಸುಲಭವಾಗಿ ಹೊಂದಿಕೊಳ್ಳುವ ಪಠ್ಯಕ್ರಮವನ್ನು ಹೊಂದಿದ್ದು, ಸೃಜನಶೀಲ ಅಧ್ಯಯನ ಕ್ರಮ ಹಾಗೂ ಔದ್ಯಮಿಕ ಶಿಕ್ಷಣವನ್ನು ಒಳಗೊಂಡಿರುತ್ತದೆ. ಈ ಕೋರ್ಸ್‌ಗಳಿಗೆ ವಿವಿಧ ರೀತಿಯಲ್ಲಿ ದಾಖಲಾಗುವ ಅವಕಾಶವನ್ನು ಕಲ್ಪಿಸಲಾಗುತ್ತದೆ.

12. **ಅತ್ಯುತ್ತಮ ಕಲಿಕಾ ಪರಿಸರಗಳು ಮತ್ತು ವಿದ್ಯಾರ್ಥಿಗಳಿಗೆ ಬೆಂಬಲ:** ಸೃಜನಶೀಲತೆಯನ್ನು ಉತ್ತೇಜಿಸುವ ಸಲುವಾಗಿ ಸಂಸ್ಥೆಗಳು ಮತ್ತು ಅಧ್ಯಾಪಕರ ನಾವಿನ್ಯತೆಗೆ ಸ್ವಾಯತ್ತತೆ ನೀಡುವುದು; ವಿದ್ಯಾರ್ಥಿಗಳಿಗೆ ಹಾಗೂ ಪ್ರತಿ ಕಾರ್ಯಕ್ರಮಕ್ಕೆ ಗುರಿಗಳನ್ನು ಹೆಚ್ಚಿಸಲು ನಿರಂತರ ಸಮಗ್ರ ಹಾಗೂ ರಚನಾತ್ಮಕ ಮೌಲ್ಯಮಾಪನ; ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಹಿನ್ನಲೆಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ; ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಕೌನ್ಸಿಲಿಂಗ್ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ ನೀಡುವ ವ್ಯವಸ್ಥೆಯನ್ನು ನೀತಿಯು ಹೊಂದಿದೆ.

13. **ಪ್ರೇರಣೆಗೊಂಡ, ಅತ್ಯುತ್ಸಾಹಿ (ಜ್ಞಾನ ಸಂಪನ್ಮೂಲ) ಮತ್ತು ಸಮರ್ಥ ಶಿಕ್ಷಕ ವರ್ಗ:** ಬೋಧನೆ ಮತ್ತು ಸಂಶೋಧನೆಯಲ್ಲಿನ ಶ್ರೇಷ್ಠತೆಗೆ ಶಕ್ತಿ ತುಂಬಲು ಹೆಚ್ಚಿನ ಸಾಮರ್ಥ್ಯ ಮತ್ತು ಆಳವಾದ ಬದ್ಧತೆಯೊಂದಿಗೆ ಬೋಧಕ ವರ್ಗವನ್ನು ಸಶಕ್ತಗೊಳಿಸುವುದು.

14. **ಉನ್ನತ ಶಿಕ್ಷಣದಲ್ಲಿ ಸಮಾನತೆ ಮತ್ತು ಒಳಗೊಳ್ಳುವಿಕೆ:** ಎಲ್ಲಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣಕ್ಕೆ ಸಮಾನವಾದ ಪ್ರವೇಶವನ್ನು ಖಾತ್ರಿಪಡಿಸುವುದು.

15. **ಶಿಕ್ಷಕರ ಶಿಕ್ಷಣ:** ಶಿಕ್ಷಕರ ಶಿಕ್ಷಣ ವ್ಯವಸ್ಥೆಯನ್ನು ಬಹುಶಿಸ್ತೀಯ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸ್ಥಳಾಂತರಿಸುವುದು ಹಾಗೂ ಎಲ್ಲಾ ಶಾಲಾ ಶಿಕ್ಷಕರಿಗೆ ಕನಿಷ್ಠ ನಾಲ್ಕು ವರ್ಷದ ಸಂಯೋಜಿತ ಬ್ಯಾಚುಲರ್ ಪದವಿಯನ್ನು ಸ್ಥಾಪಿಸುವ ಮೂಲಕ ವಿಷಯ, ಬೋಧನಾಕ್ರಮ ಮತ್ತು ಅಭ್ಯಾಸದಲ್ಲಿ ಉನ್ನತ ಗುಣಮಟ್ಟದ ತರಬೇತಿ ನೀಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

16. **ವೃತ್ತಿಪರ ಶಿಕ್ಷಣದ ಪುನರ್ ಸಂಯೋಜನೆ:** ವೃತ್ತಿಪರ ಶಿಕ್ಷಣವು ಉನ್ನತ ಶಿಕ್ಷಣ ಕ್ರಮದ ಅವಿಭಾಜ್ಯ ಅಂಗವಾಗಿರುತ್ತದೆ. ಪ್ರತ್ಯೇಕವಾದ ತಾಂತ್ರಿಕ ವಿಶ್ವವಿದ್ಯಾಲಯಗಳು, ವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯಗಳು, ಕಾನೂನು ಮತ್ತು ಕೃಷಿ ವಿಶ್ವವಿದ್ಯಾಲಯಗಳು ಅಥವಾ ಈ ಕ್ಷೇತ್ರಗಳಲ್ಲಿರುವ ಇತರೆ ಸಂಸ್ಥೆಗಳನ್ನು ರದ್ದುಪಡಿಸಲಾಗುತ್ತದೆ.

17. **ನೂತನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ ಸ್ಥಾಪನೆ:** ಎಲ್ಲಾ ಕ್ಷೇತ್ರಗಳಲ್ಲಿ ಗುಣಮಟ್ಟದ ಶೈಕ್ಷಣಿಕ ಸಂಶೋಧನೆಯನ್ನು ಚುರುಕುಗೊಳಿಸುವುದು: ದೇಶಾದ್ಯಂತ ಸಂಶೋಧನೆ ಮತ್ತು ಅವಿಷ್ಕಾರಗಳ ವೇಗವನ್ನು ವರ್ಧಿಸಲು ಮತ್ತು ವಿಸ್ತರಿಸಲು ಹೊಸ ಘಟಕವನ್ನು ಸ್ಥಾಪಿಸಲಾಗುವುದು.

18. **ಉನ್ನತ ಶಿಕ್ಷಣದ ನಿಯಂತ್ರಣ ವ್ಯವಸ್ಥೆಯನ್ನು ರೂಪಾಂತರಿಸುವುದು:** ಸಂಸ್ಥೆಗಳ ಸಾರ್ವಜನಿಕ ಹಿತಾಸಕ್ತಿ ಮತ್ತು ಆರ್ಥಿಕ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ನೆರವಾಗುವಂತೆ ನಿಯಂತ್ರಣವು ಹಗುರವೆನಿಸಿದರೂ ಬಿಗಿಯಾಗಿರುತ್ತದೆ. ಪ್ರಮಾಣಕಗಳನ್ನು ಜಾರಿಗೊಳಿಸುವಲ್ಲಿ, ಹಣಕಾಸು ನಿಧಿಗಳ ವಿಚಾರದಲ್ಲಿ, ಮಾನ್ಯತೆಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳನ್ನು ಯಾವುದೇ ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಇಲ್ಲದಂತೆ ನಿರ್ವಹಿಸಲು ಅವುಗಳನ್ನು ಸ್ವತಂತ್ರ ಸಂಸ್ಥೆಗಳ ಮೂಲಕ ನಿರ್ವಹಿಸಲಾಗುತ್ತದೆ.

19. **ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪರಿಣಾಮಕಾರಿ ಆಡಳಿತ ಮತ್ತು ನಾಯಕತ್ವ:** ಈ ಸಂಸ್ಥೆಗಳನ್ನು ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಆರ್ಥಿಕ ಸ್ವಾಯುತ್ತತೆಯ ಆಧಾರದ ಮೇಲೆ ನಡೆಸಲಾಗುವುದು. ಪ್ರತಿ ಉನ್ನತ ಶಿಕ್ಷಣ ಸಂಸ್ಥೆಯ ಆಡಳಿತವನ್ನು ಸ್ವತಂತ್ರವಾದ ಮಂಡಲಿಯು ನೋಡಿಕೊಳ್ಳುತ್ತದೆ.

## ಭಾಗ 3. ಗಮನಹರಿಸಬೇಕಾದ ಇತರೆ ಪ್ರಮುಖ ಕ್ಷೇತ್ರಗಳು

20. **ವೃತ್ತಿ ಪರ ಶಿಕ್ಷಣ:** ವೃತ್ತಿಪರ ಶಿಕ್ಷಣ ಉನ್ನತ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗ. ಕೃಷಿ, ಕಾನೂನು, ಆರೋಗ್ಯ, ತಾಂತ್ರಿಕ ಶಿಕ್ಷಣ ಇತ್ಯಾದಿ ಕೋರ್ಸ್‌ಗಳ ಅವಧಿ, ರಚನೆ ಮತ್ತು ವಿನ್ಯಾಸವನ್ನು ಮರುರೂಪಿಸುವುದು. ಕೃತಕ ಬುದ್ಧಿಮತ್ತೆ, 3–ಡಿ ಯಂತ್ರ ಕಲಿಕೆ, ದೊಡ್ಡ ಡೇಟಾ ವಿಶ್ಲೇಷಣೆ, ಜೈವಿಕ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ, ನರ ವಿಜ್ಞಾನ, ಆರೋಗ್ಯ, ಪರಿಸರ ಮತ್ತು ಸ್ಥಿರ ಜೀವನಕ್ಕೆ ಅನ್ವಯವಾಗುವ ಜ್ಞಾನ ಮತ್ತು ಉದ್ಯೋಗವಕಾಶವನ್ನು ಹೆಚ್ಚಿಸುವುದು.

21. **ವಯಸ್ಕರ ಶಿಕ್ಷಣ ಮತ್ತು ಜೀವನಪರ್ಯಂತ ಕಲಿಕೆ:** ಈ ನೀತಿಯು 2030ರ ವೇಳೆಗೆ 100% ರಷ್ಟು ಯುವಕರ ಮತ್ತು

ವಯಸ್ಕರ ಸಾಕ್ಷರತೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

22. **ಭಾರತೀಯ ಭಾಷೆಗಳು, ಕಲೆಗಳು ಮತ್ತು ಸಂಸ್ಕೃತಿಯ ಪ್ರಚಾರ ಮತ್ತು ಉತ್ತೇಜನ:** ಎಲ್ಲಾ ಭಾರತೀಯ ಭಾಷೆಗಳನ್ನು ಸಂರಕ್ಷಿಸಿ, ಅವುಗಳ ಬೆಳವಣಿಗೆ ಮತ್ತು ಜೀವಂತಿಕೆಯನ್ನು ಕಾಪಾಡುವುದನ್ನು ಈ ನೀತಿಯು ಖಾತರಿಪಡಿಸುತ್ತದೆ.

23. **ತಂತ್ರಜ್ಞಾನ ಬಳಕೆ ಮತ್ತು ಸಂಯೋಜನೆ:** ತರಗತಿಯ ಪ್ರಕ್ರಿಯೆಗಳನ್ನು ಸುಧಾರಿಸಲು, ಶಿಕ್ಷಕರ ವೃತಿಪರ ಬೆಳವಣಿಗೆಯನ್ನು ಬೆಂಬಲಿಸಲು, ಅನಾನುಕೂಲಕರ ಗುಂಪುಗಳಿಗೆ ಶೈಕ್ಷಣಿಕ ಪ್ರವೇಶವನ್ನು ಹೆಚ್ಚಿಸಲು ಶೈಕ್ಷಣಿಕ ಯೋಜನೆಯನ್ನು ರೂಪಿಸಲಾಗುತ್ತದೆ. ಆಡಳಿತ ಮತ್ತು ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸಲು ಎಲ್ಲಾ ಹಂತದ ಶಿಕ್ಷಣಕ್ಕೆ ತಂತ್ರಜ್ಞಾನವನ್ನು ಸೂಕ್ತವಾಗಿ ಸಂಯೋಜಿಸುವ ಗುರಿಯನ್ನು ಹೊಂದಿದೆ.

24. **ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣ:** ತಂತ್ರಜ್ಞಾನದ ಸಮಾನ ಬಳಕೆಯನ್ನು ಖಾತ್ರಿಗೊಳಿಸುವಿಕೆ: ಶಾಲೆಯಿಂದ ಉನ್ನತ ಶಿಕ್ಷಣದವರೆಗೆ ಎಲ್ಲಾ ಹಂತಗಳಲ್ಲಿ ತಂತ್ರಜ್ಞಾನದ ಪ್ರಯೋಜನಗಳನ್ನು ಬಳಸಿಕೊಳ್ಳುವ ಪ್ರಾಮುಖ್ಯತೆಯನ್ನು ನೀತಿಯು ಗುರುತಿಸುತ್ತದೆ. ಆನ್–ಲೈನ್ ಶಿಕ್ಷಣಕ್ಕಾಗಿ ಪೈಲಟ್ ಅಧ್ಯಯನಗಳು, ಡಿಜಿಟಲ್ ಮೂಲ ಸೌಕರ್ಯಗಳು, ಆನ್‌ಲೈನ್ ಬೋಧನಾ ವೇದಿಕೆ ಮತ್ತು ಪರಿಕರಗಳು, ಡಿಜಿಟಲ್ ಭಂಡಾರ ಮತ್ತು ಪ್ರಸರಣ, ಇ– ಆಡಳಿತ, ಡಿಜಿಟಲ್ ವಿಭಜನೆಯನ್ನು ಕಡಿತಗೊಳಿಸುವುದು, ವರ್ಚುಯಲ್ ಲ್ಯಾಬ್‌ಗಳು, ಶಿಕ್ಷಕರಿಗೆ ತರಬೇತಿ ಮತ್ತು ಉತ್ತೇಜನಗಳು, ಆನ್ ಲೈನ್ ಮೌಲ್ಯಮಾಪನ ಮತ್ತು ಪರೀಕ್ಷೆಗಳು ವಿಶ್ವದರ್ಜೆ ಡಿಜಿಟಲ್ ಮೂಲ ಸೌಕರ್ಯಗಳ ವಿಷಯಗಳಿಗೆ ಆದ್ಯತೆ ಮತ್ತು ಪ್ರೋತ್ಸಾಹ ನೀಡಲಾಗುತ್ತದೆ.

## ಭಾಗ 4. ಗುರಿ ಸಾಧಿಸುವ ಬಗೆಗಿನ ಅಂಶಗಳು

25. **ಕೇಂದ್ರೀಯ ಶೈಕ್ಷಣಿಕ ಸಲಹಾ ಮಂಡಳಿಯನ್ನು ಬಲಪಡಿಸುವುದು(ಸಶಕ್ತಗೊಳಿಸುವುದು):** ಮಾನ್ಯ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಶಿಕ್ಷಣ ಆಯೋಗವನ್ನು ಸ್ಥಾಪಿಸಲಾಗುವುದು. ಇದು ಭಾರತದಲ್ಲಿ ಶೈಕ್ಷಣಿಕ ಮುನ್ನೋಟವನ್ನು ಜಾರಿಗೊಳಿಸಲು ಬದ್ಧವಾಗಿರುತ್ತದೆ.

26. **ಹಣಕಾಸು:** ಎಲ್ಲರಿಗೂ ಲಭ್ಯವಾಗುವ ಮತ್ತು ಗುಣಮಟ್ಟದ ಶಿಕ್ಷಣ: ಸಾರ್ವಜನಿಕ ಶಿಕ್ಷಣವನ್ನು ವಿಸ್ತರಿಸಲು ಮತ್ತು ಬಲಗೊಳಿಸಲು ಸಾಕಷ್ಟು ಮಟ್ಟದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಮಾಡಲಾಗುವುದು.

27. **ಅನುಷ್ಠಾನ:** ಈ ನೀತಿಯಲ್ಲಿ ಸ್ಪಷ್ಟ ಹಾಗೂ ಹಂತ ಹಂತಗಳಲ್ಲಿ ನಿಗದಿತ ಗುರಿಗಳನ್ನು ಸಿದ್ಧಿಸಿಕೊಳ್ಳುವ ಸಲುವಾಗಿ ಯೋಜನೆಗಳನ್ನು ವಿವರಣಾತ್ಮಕವಾಗಿಯೇ ಅನುಷ್ಠಾನಗೊಳಿಸುವ ಸಲುವಾಗಿ ಅನುಷ್ಠಾನ ಸಮಿತಿಗಳನ್ನು ರೂಪಿಸುವುದು, ಪ್ರಗತಿಯ ಪರಿಶೀಲನೆ ಮತ್ತು ಸಂಪೂರ್ಣ ಕಾರ್ಯಾನುಷ್ಠಾನ ಮಾಡುವುದು.

2

# ಭಾಗ – 01
# ಶಾಲಾ ಶಿಕ್ಷಣ

## ಈ ಅಧ್ಯಾಯದಲ್ಲಿ. . . . .

ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಮಗುವಿನ ಮೆದುಳಿನ 85% ಸಂಚಿತ ಬೆಳವಣಿಗೆಯು 6 ವರ್ಷ ವಯಸ್ಸಿಗಿಂತ ಮುಂಚೆಯೇ ಆಗುವುದರಿಂದ ಈ ಹಂತದ ಶಿಕ್ಷಣ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಪೂರ್ವ ಬಾಲ್ಯಾವಸ್ಥೆಯ ಆರೈಕೆ, ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಬಲಪಡಿಸುವ ಕ್ರಮಗಳು, ಇದಕ್ಕೆ ಪೂರಕವಾಗಿ ರೂಪಿಸಲಾಗುವ ಪಠ್ಯಕ್ರಮ ನೆಲಗಟ್ಟು ಇತ್ಯಾದಿ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

## 01. ಪ್ರಾರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಬಲಪಡಿಸುವುದು

**ಉದ್ದೇಶ:** 3 ರಿಂದ 6 ವರ್ಷದೊಳಗಿನ ಪ್ರತಿ ಮಗುವಿಗೆ 2025ರ ವೇಳೆಗೆ ಉಚಿತ, ಸುರಕ್ಷಿತ, ಉತ್ತಮ ಗುಣಮಟ್ಟದ ಅಭಿವೃದ್ಧಿಗೆ ಸೂಕ್ತವಾದ ಆರೈಕೆ ಮತ್ತು ಶಿಕ್ಷಣವನ್ನು ನೀಡುವುದು.


ಇದಕ್ಕೆ ಪೂರಕವಾಗಿ ಪ್ರಸ್ತಾಪಿಸಲ್ಪಟ್ಟಿರುವ ಮುಖ್ಯ ಅಂಶಗಳು:


### 1.1 ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ: ಕಲಿಕೆಗೆ ತಳಹದಿ

1.1 ಮಗುವಿನ ಮೆದುಳಿನ ಶೇಕಡಾ 85 ರಷ್ಟು ಸಂಚಿತ ಬೆಳವಣಿಗೆಯು, 6 ವರ್ಷ ವಯಸ್ಸಿಗಿಂತ ಮುಂಚೆಯೇ ಆಗಿರುತ್ತದೆ. ಮೆದುಳಿನ ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು, ಆರಂಭಿಕ ವರ್ಷಗಳಲ್ಲಿ ಮೆದುಳಿನ ಸೂಕ್ತ ಆರೈಕೆ ಮತ್ತು ಪ್ರಚೋದನೆ ಅತ್ಯಂತ ಮಹತ್ವದಾಗಿದೆ. ಪ್ರಸ್ತುತ ಕೋಟ್ಯಾಂತರ ಚಿಕ್ಕ ಮಕ್ಕಳಿಗೆ, ಅದರಲ್ಲೂ ವಿಶೇಷವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಗುಣಮಟ್ಟದ ಪೂರ್ವ ಬಾಲ್ಯಾವಸ್ಥೆ ಪೋಷಣೆ ಮತ್ತು

> 85% ರಷ್ಟು ಭಾಗ ಮಕ್ಕಳ ಮೆದುಳಿನ ಸಂಚಿತ ಬೆಳವಣಿಗೆಯು 6 ವರ್ಷದ ವಯಸ್ಸಿಗೆ ಮುಂಚಿತವಾಗಿ ಆಗುತ್ತದೆ. ಆರೋಗ್ಯಕರ ಮಾನಸಿಕ ಬೆಳವಣಿಗೆ ಮತ್ತು ವಿಕಾಸವನ್ನು ಖಚಿತಪಡಿಸಲು, ಸೂಕ್ತವಾದ ಕ್ರಮಗಳನ್ನು ಈ ಹಂತದಲ್ಲಿ ಒದಗಿಸುವುದು ಮುಖ್ಯವಾಗುತ್ತದೆ. ಮೆದುಳಿನ ಸಂವೇದನೆಯನ್ನೂ ಗಮನಿಸಬೇಕಾಗುತ್ತದೆ. ಈ ಮಕ್ಕಳು ಜೀವನ ಪರ್ಯಂತ ವಿಕಾಸ ಹೊಂದಲು ಆರಂಭಿಕ ಬಾಲ್ಯದ ಶಿಕ್ಷಣಕ್ಕೆ ಹೆಚ್ಚಿನ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಇದಕ್ಕಾಗಿ ಗುಣಾತ್ಮಕ ಆರಂಭಿಕ ಬಾಲ್ಯದ ವಿಕಾಸ, ಆರೈಕೆ ಮತ್ತು ಶಿಕ್ಷಣವನ್ನು ಆದಷ್ಟು ಶೀಘ್ರವಾಗಿ 2030ರೊಳಗೆ ಸಾರ್ವತ್ರೀಕರಣಗೊಳಿಸಿ, ಎಲ್ಲಾ ಮಕ್ಕಳು ಒಂದನೇ ತರಗತಿಗೆ (ಗ್ರೇಡ್ 1) ಪ್ರವೇಶಿಸುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ.

ಶಿಕ್ಷಣ ECCE (Early Childhood Care and Education) ಲಭ್ಯವಿರುವುದಿಲ್ಲ, ECCE ಕ್ಷೇತ್ರದಲ್ಲಿ ನಾವು ಪ್ರಸ್ತುತ ಮಾಡುವ ಹೂಡಿಕೆ ಎಲ್ಲಾ ಚಿಕ್ಕ ಮಕ್ಕಳಿಗೆ ಗುಣಮಟ್ಟದ ಸೌಲಭ್ಯವನ್ನು ಒದಗಿಸುತ್ತದೆ. ಇದರಿಂದ ಆ ಮಕ್ಕಳು ಜೀವನದುದ್ದಕ್ಕೂ ಶಿಕ್ಷಣ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡು ಅಭಿವೃದ್ಧಿ ಹೊಂದಬಹುದು. ಒಂದನೇ ತರಗತಿಗೆ ದಾಖಲಾಗುವ ಎಲ್ಲಾ ಮಕ್ಕಳು ಶಾಲಾ ವ್ಯವಸ್ಥೆಗೆ ಹೊಂದಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು, ಗುಣಮಟ್ಟದ ಪೂರ್ವ ಬಾಲ್ಯಾವಸ್ಥೆಯ ಬೆಳವಣಿಗೆ, ಆರೈಕೆ ಮತ್ತು ಶಿಕ್ಷಣದ ಸಾರ್ವತ್ರಿಕ ಲಭ್ಯತೆಯನ್ನು 2030 ರೊಳಗಾಗಿ ಸಾಧಿಸಲೇಬೇಕಾಗಿದೆ.








1.2 ECCE ಸಾಮಾನ್ಯವಾಗಿ ವರ್ಣಮಾಲೆಗಳು, ಭಾಷೆಗಳು, ಸಂಖ್ಯೆಗಳು, ಎಣಿಕೆ, ಬಣ್ಣಗಳು, ಆಕಾರಗಳು, ಒಳಾಂಗಣ ಮತ್ತು ಹೊರಾಂಗಣ ಆಟ, ಒಗಟುಗಳು ಮತ್ತು ತಾರ್ಕಿಕ ಚಿಂತನೆ, ಸಮಸ್ಯಾ ಪರಿಹಾರ, ಚಿತ್ರಕಲೆ, ಬಣ್ಣಹಚ್ಚುವುದು ಮತ್ತು ಇತರ ದೃಶ್ಯ ಕಲೆ, ಕರಕುಶಲ ಕಲೆ, ನಾಟಕ ಮತ್ತು ಕೈಗೊಂಬೆ, ಸಂಗೀತ ಮತ್ತು ಚಲನಾ ಚಟುಚಟಿಕೆಗಳನ್ನು ಒಳಗೊಂಡಿದೆ. ಇವುಗಳು ನಮ್ಯ, ಬಹುಮುಖಿ, ಬಹು–ಹಂತದ, ಆಟ– ಆಧಾರಿತ, ಚಟುವಟಿಕೆ–ಆಧಾರಿತ ಮತ್ತು ಅನ್ವೇಷಣಾ ಆಧಾರಿತ ಕಲಿಕೆಯನ್ನು ಒಳಗೊಂಡಿರುತ್ತವೆ. ಇದಲ್ಲದೇ ಸಾಮಾಜಿಕ ಸಾಮರ್ಥ್ಯಗಳು, ಸೂಕ್ಷ್ಮತೆ, ಉತ್ತಮ ನಡವಳಿಕೆ, ಸೌಜನ್ಯ, ನೈತಿಕತೆ, ವೈಯಕ್ತಿಕ ಮತ್ತು ಸಾರ್ವಜನಿಕ ಸ್ವಚ್ಛತೆ ಯಂತಹ ವರ್ತನೆಗಳನ್ನು ಬೆಳೆಸುವುದರ ಬಗೆಗೂ ಇಸಿಸಿಇ ಗಮನಹರಿಸುತ್ತದೆ.

1.3 NCERT, 0–3 ವರ್ಷ ವಯಸ್ಸಿನ ಮಕ್ಕಳಿಗೆ ಒಂದು ಮತ್ತು 3–8 ವರ್ಷ ವಯಸ್ಸಿನ ಮಕ್ಕಳಿಗೆ ಒಂದು ಹೀಗೆ ಎರಡು ಉಪ–ನೆಲೆಗಟ್ಟನ್ನು ಮೇಲೆ ವಿವರಿಸಲಾದ ಮಾರ್ಗಸೂಚಿಗಳೊಂದಿಗೆ ಅಭಿವೃದ್ಧಿಪಡಿಸುತ್ತದೆ. ಇದು ECCE ಸಂಬಂಧ ಇತ್ತೀಚಿನ ಸಂಶೋಧನೆ ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಅತ್ಯುತ್ತಮ ಅಭ್ಯಾಸಗಳನ್ನು ಆಧರಿಸಿ, 8 ವರ್ಷ ವಯಸ್ಸಿನ ಮಕ್ಕಳಿಗಾಗಿ

ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಮತ್ತು ಬೋಧನಾ ಚೌಕಟ್ಟು (NCPEFCCE) ಆಗಿರುತ್ತದೆ. ಕಲೆ, ಕಥೆ, ಪದ್ಯ, ಆಟ, ಹಾಡುಗಳನ್ನು ಒಳಗೊಂಡಂತೆ, ಸಾವಿರಾರು ವರ್ಷಗಳಿಂದ ವಿಕಸನಗೊಂಡಿರುವ ಭಾರತದ ಶ್ರೀಮಂತ ಸ್ಥಳೀಯ ಸಂಪ್ರದಾಯಗಳನ್ನೂ ECCE ಯಲ್ಲಿ ಸೂಕ್ತವಾಗಿ ಸಂಯೋಜಿಸಲಾಗುವುದು. ಈ ಚೌಕಟ್ಟು ಪೋಷಕರಿಗೆ ಮತ್ತು ಪೂರ್ವ ಬಾಲ್ಯಾವಸ್ಥೆ ಪೋಷಣೆ ಮತ್ತು ಶಿಕ್ಷಣ ಒದಗಿಸುವ ಸಂಸ್ಥೆಗಳಿಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ.

1.4 ದೇಶಾದ್ಯಂತ ಹಂತಹಂತವಾಗಿ ಉನ್ನತ ಗುಣಮಟ್ಟದ ECCE ಲಭ್ಯತೆಯನ್ನು ಖಚಿತಪಡಿಸುವುದು ನಮ್ಮ ಗುರಿಯಾಗಿದೆ. ಸಾಮಾಜಿಕವಾಗಿ–ಆರ್ಥಿಕವಾಗಿ ಹಿಂದುಳಿದಿರುವ ಜಿಲ್ಲೆಗಳು ಮತ್ತು ಸ್ಥಳಗಳಿಗೆ ವಿಶೇಷ ಗಮನ ಮತ್ತು ಆದ್ಯತೆ ನೀಡಲಾಗುವುದು. ECCE ಶಿಕ್ಷಣವನ್ನು a) ಪ್ರತ್ಯೇಕವಾಗಿರುವ ಅಂಗನವಾಡಿಗಳು b) ಪ್ರಾಥಮಿಕ ಶಾಲಾ ಆವರಣದಲ್ಲಿರುವ ಅಂಗನವಾಡಿಗಳು c) ಪ್ರಸ್ತುತ ಇರುವ ಪ್ರಾಥಮಿಕ ಶಾಲೆಗಳಲ್ಲಿರುವ 5 ಅಥವಾ 6 ವರ್ಷಗಳ ಮಕ್ಕಳಿರುವ ಶಾಲೆಗಳು ಪೂರ್ವ ಪ್ರಾಥಮಿಕ ವಿಭಾಗಗಳು ಮತ್ತು d) ಪ್ರತ್ಯೇಕವಾಗಿರುವ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಒದಗಿಸಲಾಗುತ್ತದೆ. ಉತ್ತಮವಾಗಿ ಸ್ಥಾಪಿಸಲಾದ ಬಾಲ್ಯಾವಸ್ಥೆ ಶಿಕ್ಷಣ ಸಂಸ್ಥೆಗಳ ಮೂಲಕ ECCE ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರದಲ್ಲಿ ವಿಶೇಷ ತರಬೇತಿ ಪಡೆದ ಶಿಕ್ಷಕರು/ ಕಾರ್ಯಕರ್ತರ ಮೂಲಕ ತರಬೇತಿ ಒದಗಿಸಲಾಗುತ್ತದೆ.




1.5 ECCE ಸಾರ್ವತ್ರಿಕ ಲಭ್ಯತೆಗಾಗಿ ಉತ್ತಮ ಗುಣಮಟ್ಟದ ಮೂಲಸೌಕರ್ಯ, ಆಟದ ಉಪಕರಣಗಳು ಮತ್ತು ಸುಶಿಕ್ಷಿತ ಅಂಗನವಾಡಿ ಕಾರ್ಯಕರ್ತರು / ಶಿಕ್ಷಕರನ್ನು ಒದಗಿಸಿ ಅಂಗನವಾಡಿ ಕೇಂದ್ರಗಳನ್ನು ಬಲಪಡಿಸಲಾಗುತ್ತದೆ. ಪ್ರತಿ ಅಂಗನವಾಡಿಯು ಉತ್ತಮ ವಾತಾಯನ ವ್ಯವಸ್ಥೆ, ಉತ್ತಮವಾಗಿ ವಿನ್ಯಾಸಗೊಳಿಸಲಾದ ಮಕ್ಕಳ ಸ್ನೇಹಿ ಮತ್ತು ಸುಸಜ್ಜಿತ ಕಲಿಕೆಯ ವಾತಾವರಣದೊಂದಿಗೆ ಉತ್ತಮ ಕಟ್ಟಡವನ್ನು ಹೊಂದಿರುತ್ತದೆ. ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳು ಚಟುವಟಿಕೆ ಆಧಾರಿತವಾಗಿ ಪ್ರವಾಸಗಳನ್ನು ಕೈಗೊಳ್ಳಬೇಕು ಹಾಗೂ ಸ್ಥಳೀಯ ಪ್ರಾಥಮಿಕ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಭೇಟಿ ಮಾಡಬೇಕು. ಈ ಮಕ್ಕಳು ಮುಂದೆ ಅಂಗನವಾಡಿ ಕೇಂದ್ರಗಳಿಂದ ಪ್ರಾಥಮಿಕ ಶಾಲೆಗಳಿಗೆ ಸೇರುವುದು ಸುಲಭವಾಗಬೇಕು. ಅಂಗನವಾಡಿಗಳನ್ನು ಶಾಲಾ ಸಂಕೀರ್ಣ / ಸಮೂಹಗಳೊಂದಿಗೆ ಸಂಪೂರ್ಣವಾಗಿ ಸಂಯೋಜಿಸಲಾಗುವುದು. ಅಂಗನವಾಡಿ ಮಕ್ಕಳು, ಪೋಷಕರು ಮತ್ತು ಶಿಕ್ಷಕರನ್ನು ಶಾಲೆ / ಶಾಲಾ ಸಂಕೀರ್ಣದ ಕಾರ್ಯಕ್ರಮಗಳಲ್ಲಿ ಪರಸ್ಪರ ಭಾಗವಹಿಸಲು ಆಹ್ವಾನಿಸಲಾಗುತ್ತದೆ.

1.6 ಐದು ವರ್ಷ ವಯಸ್ಸಾಗುವ ಮೊದಲು ಪ್ರತಿ ಮಗು ಉನ್ನತವಾಗಿ ಕಲಿಸುವ ಶಿಕ್ಷಕರಿರುವ "ಪೂರ್ವಸಿದ್ಧತಾ ತರಗತಿ" ಅಥವಾ "ಬಾಲವಾಟಿಕಾ" (ಅಂದರೆ 1ನೇ ತರಗತಿಗೆ ಮುಂಚಿತವಾಗಿ) ಗೆ ದಾಖಲಾಗುತ್ತದೆ ಎಂದು ಭಾವಿಸಲಾಗಿದೆ. ಪೂರ್ವಸಿದ್ಧತಾ ತರಗತಿಯಲ್ಲಿನ ಕಲಿಕೆಯು ಮುಖ್ಯವಾಗಿ ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನೋಗತ್ಯಾತ್ಮಕ ಸಾಮರ್ಥ್ಯಗಳು ಮತ್ತು ಆರಂಭಿಕ ಅಕ್ಷರ ಜ್ಞಾನ ಹಾಗೂ ಗಣಿತ ಕೌಶಲಗಳನ್ನು ವಿಕಸನಗೊಳಿಸಲು ಗಮನಹರಿಸುತ್ತದೆ. ಈ ಹಂತ ಆಟ–ಆಧಾರಿತ ಕಲಿಕಾ ಸ್ವರೂಪವನ್ನು ಹೊಂದಿದೆ. ಮಧ್ಯಾಹ್ನದ ಬಿಸಿ ಊಟ ಕಾರ್ಯಕ್ರಮವನ್ನು ಪ್ರಾಥಮಿಕ ಶಾಲೆಗಳಲ್ಲಿನ ಪೂರ್ವಸಿದ್ಧತಾ ತರಗತಿ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗುವುದು.

1.7 ಅಂಗನವಾಡಿಯಲ್ಲಿ ಉನ್ನತ–ಗುಣಮಟ್ಟದ ECCE ಶಿಕ್ಷಕ ವೃಂದವನ್ನು ಸಿದ್ಧಗೊಳಿಸಲು, ಪ್ರಸ್ತುತ ಇರುವ ಅಂಗನವಾಡಿ ಕಾರ್ಯಕರ್ತೆ / ಶಿಕ್ಷಕರಿಗೆ NCERT ರೂಪಿಸಿದ ಪಠ್ಯಕ್ರಮ ಚೌಕಟ್ಟಿನ ಅನುಸಾರ ವ್ಯವಸ್ಥಿತವಾಗಿ ತರಬೇತಿ ನೀಡಲಾಗುವುದು. 10 + 2 ಮತ್ತು ಅದಕ್ಕಿಂತ ಹೆಚ್ಚಿನ ಅರ್ಹತೆ ಹೊಂದಿರುವ ಅಂಗನವಾಡಿ ಕಾರ್ಯಕರ್ತರು / ಶಿಕ್ಷಕರಿಗೆ ECCE ಯಲ್ಲಿ 6 ತಿಂಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿರುವವರಿಗೆ ಪ್ರಾರಂಭಿಕ ಅಕ್ಷರ ಜ್ಞಾನ, ಗಣಿತ ಕೌಶಲ ಮತ್ತು ECCE ಯ ಇತರೆ ಸಂಬಂಧಿತ ಅಂಶಗಳನ್ನು ಒಳಗೊಂಡ ಒಂದು ವರ್ಷದ ಡಿಪ್ಲೋಮಾ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಶಿಕ್ಷಕರಿಗೆ ತಮ್ಮ ಈಗಿನ ಕೆಲಸಕ್ಕೆ ಯಾವುದೇ ಅಡ್ಡಿಯಾಗದಂತೆ, ECCE ಗೆ ಬೇಕಾದ ಅರ್ಹತೆಗಳನ್ನು ಪಡೆಯಲು ಅನುಕೂಲ ಮಾಡಿಕೊಡಲಾಗುವುದು. ಈ ಕಾರ್ಯಕ್ರಮಗಳನ್ನು ಡಿಟಿಎಚ್ ಚಾನೆಲ್‌ಗಳು ಮತ್ತು ಸ್ಮಾರ್ಟಫೋನ್‌ಗಳನ್ನು ಬಳಸಿಕೊಂಡು ಡಿಜಿಟಲ್ / ದೂರ ಶಿಕ್ಷಣ ವಿಧಾನದ ಮೂಲಕ ಆಯೋಜಿಸಲಾಗುವುದು. ಅಂಗನವಾಡಿ ಕಾರ್ಯಕರ್ತರ / ಶಿಕ್ಷಕರ ECCE ತರಬೇತಿಯನ್ನು ಶಿಕ್ಷಣ ಇಲಾಖೆಯ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳ ಮಾರ್ಗದರ್ಶನದಲ್ಲಿ ನಡೆಸಬಹುದಾಗಿದ್ದು, ಈ ಕೇಂದ್ರಗಳು ನಿರಂತರ ಮೌಲ್ಯಮಾಪನಕ್ಕಾಗಿ ತಿಂಗಳಲ್ಲಿ ಕನಿಷ್ಠ ಒಂದು ಮುಖಾಮುಖಿ ತರಬೇತಿಯನ್ನು ಕೈಗೊಳ್ಳಬಹುದಾಗಿದೆ. ದೀರ್ಘಾವಧಿಯಲ್ಲಿ ನಿರ್ದಿಷ್ಟ ವೃತ್ತಿಪರ ತರಬೇತಿ, ಮಾರ್ಗದರ್ಶನ ಕಾರ್ಯವಿಧಾನಗಳು ಮತ್ತು

ವೃತ್ತಿ ವಿನ್ಯಾಸದ ಮೂಲಕ ರಾಜ್ಯ ಸರ್ಕಾರಗಳು ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಮತ್ತು ಶಿಕ್ಷಣಕ್ಕಾಗಿ ವೃತ್ತಿಪರ ಅರ್ಹ ಶಿಕ್ಷಕರನ್ನು ಸಿದ್ಧಪಡಿಸಬೇಕು. ಈ ಶಿಕ್ಷಕರ ಆರಂಭಿಕ ವೃತ್ತಿಪರ ಸಿದ್ಧತೆ ಮತ್ತು ಅವರ ನಿರಂತರ ಅಭಿವೃದ್ಧಿ (CPD)ಗೆ ಅಗತ್ಯವಾದ ಸೌಲಭ್ಯಗಳನ್ನೂ ಒದಗಿಸಲಾಗುವುದು.

1.8 ಬುಡಕಟ್ಟು ಪ್ರದೇಶಗಳಲ್ಲಿನ ಆಶ್ರಮ ಶಾಲೆಗಳಲ್ಲಿ ಮತ್ತು ಪರ್ಯಾಯ ಶಾಲಾ ಶಿಕ್ಷಣದ ಎಲ್ಲಾ ಸ್ವರೂಪಗಳಲ್ಲಿಯೂ ಹಂತ ಹಂತವಾಗಿ ECCE ಪರಿಚಯಿಸಲಾಗುವುದು. ಆಶ್ರಮ ಶಾಲೆ ಮತ್ತು ಪರ್ಯಾಯ ಶಾಲಾ ಶಿಕ್ಷಣದಲ್ಲಿ ECCE ಯ ಸಮನ್ವಯ ಮತ್ತು ಅನುಷ್ಠಾನದ ಪ್ರಕ್ರಿಯೆಗಳು ಮೇಲೆ ವಿವರಿಸಿದಂತೆಯೇ ಇರುತ್ತವೆ.

1.9 ಪೂರ್ವ–ಪ್ರಾಥಮಿಕ ಶಾಲೆಯಿಂದ ಪ್ರಾಥಮಿಕ ಶಾಲೆಯವರೆಗೆ ನಿರಂತರತೆಯನ್ನು ಖಾತರಿಪಡಿಸಿಕೊಳ್ಳಲು ಮತ್ತು ಶಿಕ್ಷಣದ ಬುನಾದಿ ಅಂಶಗಳ ಬಗ್ಗೆ ಸೂಕ್ತ ಗಮನ ನೀಡಲು, ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನು ರೂಪಿಸುವ ಜವಾಬ್ದಾರಿಯ ಶಿಕ್ಷಣ ಇಲಾಖೆಯದಾಗಿರುತ್ತದೆ. ಪೂರ್ವ ಬಾಲ್ಯಾವಸ್ಥೆ ಮತ್ತು ಶಿಕ್ಷಣ ಪಠ್ಯಕ್ರಮದ ಯೋಜನೆ ಮತ್ತು ಅನುಷ್ಠಾನವನ್ನು ಮಾನವ ಸಂಪನ್ಮೂಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಬುಡಕಟ್ಟು ವ್ಯವಹಾರಗಳ ಸಚಿವಾಲಯಗಳು ಜಂಟಿಯಾಗಿ ನಿರ್ವಹಿಸುತ್ತವೆ. ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣವನ್ನು ಶಾಲಾ ಶಿಕ್ಷಣದೊಂದಿಗೆ ಸುಗಮವಾಗಿ ಸಂಯೋಜಿಸಲು ನಿರಂತರ ಮಾರ್ಗದರ್ಶನಕ್ಕಾಗಿ ವಿಶೇಷ ಜಂಟಿ ಕಾರ್ಯಪಡೆಯನ್ನು ರಚಿಸಲಾಗುವುದು.

### ಈ ಅಧ್ಯಾಯದಲ್ಲಿ ಕಲಿತ ಮುಖ್ಯ ಅಂಶಗಳು

- ಪೂರ್ವ ಬಾಲ್ಯಾವಸ್ಥೆಯ ಶಿಕ್ಷಣ ಮಕ್ಕಳು ಶಾಲಾ ವ್ಯವಸ್ಥೆಗೆ ಹೊಂದಿಕೊಳ್ಳುವುದನ್ನು ಖಚಿತಪಡಿಸುತ್ತದೆ.
- ಇಸಿಸಿಇ ಸಾಮಾಜಿಕ ಸಾಮರ್ಥ್ಯ, ಸೂಕ್ಷ್ಮ, ಸೌಜನ್ಯ, ಸಾರ್ವಜನಿಕ ಸ್ವಚ್ಛತೆಯಂತಹ ವರ್ತನೆಗಳನ್ನು ಬೆಳೆಸುವುದರ ಬಗೆಗೆ ಗಮನಹರಿಸುತ್ತದೆ.
- ಇಸಿಸಿಯ ಸಾರ್ವತ್ರಿಕ ಲಭ್ಯತೆಗಾಗಿ ಉತ್ತಮ ಗುಣಮಟ್ಟದ ಮೂಲ ಸೌಕರ್ಯಗಳನ್ನು ಒದಗಿಸಲಾಗುತ್ತದೆ.
- ಪೂರ್ವ ಪ್ರಾಥಮಿಕ ಶಾಲೆಯಿಂದ ಪ್ರಾಥಮಿಕ ಶಾಲೆಯವರೆಗೆ ನಿರಂತರೆಯನ್ನು ಸೂಕ್ತ ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳ ಮೂಲಕ ಖಾತರಿಪಡಿಸಿಕೊಳ್ಳಲಾಗುತ್ತದೆ.

### ಚಿಂತನಾಶೀಲ ಪ್ರಶ್ನೆಗಳು

1. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕಾಗಿ ನಾವು ಕೈಗೊಳ್ಳಬೇಕಾಗಿರುವ ಕ್ರಮಗಳೇನು?
2. ಇದಕ್ಕಾಗಿ ಅಗತ್ಯವಾದ ಸಿದ್ಧತೆಗಳು ಯಾವುವು?
3. ಇ.ಸಿ.ಸಿ.ಇ. ಗೆ ಸಂಬಂಧಿಸಿದಂತೆ ಪ್ರತಿಪಾದಿಸಿರುವ ಮುಖ್ಯ ಅಂಶಗಳು ಯಾವುವು?

# ಅಧ್ಯಾಯ –02

# ಬುನಾದಿ ಅಕ್ಷರಜ್ಞಾನ ಮತ್ತು ಸಂಖ್ಯಾಜ್ಞಾನ

### ಈ ಅಧ್ಯಾಯದಲ್ಲಿ. . . . .


ಬುನಾದಿ ಅಕ್ಷರಜ್ಞಾನ ಮತ್ತು ಸಂಖ್ಯಾಜ್ಞಾನದ ತುರ್ತು ಅಗತ್ಯತೆಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಆರಂಭಿಕ ಹಂತದಲ್ಲಿ ಎಲ್ಲಾ ಮಕ್ಕಳು ಅಕ್ಷರ ಮತ್ತು ಸಂಖ್ಯಾ ಜ್ಞಾನವನ್ನು ಪಡೆಯಲು ಅಗತ್ಯವಾದ ಪಠ್ಯಕ್ರಮ, ವಿಧಾನ, ಅದಕ್ಕೆ ಪೂರಕವಾದ ಪುಸ್ತಕಗಳು, ಗ್ರಂಥಾಲಗಳು ಇವುಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಆರಂಭಿಕ ಹಂತದಲ್ಲಿ ಮಕ್ಕಳು ಪಡೆಯುವ ಭಾಷಾ ಜ್ಞಾನ ಮತ್ತು ಅಕ್ಷರಜ್ಞಾನ ಮುಂದಿನ ಹಂತದ ಕಲಿಕೆಗೆ ಭದ್ರ ಬುನಾದಿಯನ್ನು ಒದಗಿಸುತ್ತದೆ.


### ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ: ಕಲಿಕೆಗೆ ತುರ್ತಾದ ಮತ್ತು ಅವಶ್ಯಕ ಪೂರ್ವಾರ್ಹತೆ


2.1 ಓದುವ ಮತ್ತು ಬರೆಯುವ ಹಾಗೂ ಸಂಖ್ಯೆಗಳೊಂದಿಗೆ ಗಣಿತದ ಮೂಲ ಕ್ರಿಯೆಗಳನ್ನು ನಿರ್ವಹಿಸುವ ಸಾಮರ್ಥ್ಯವು, ಭವಿಷ್ಯದ ಎಲ್ಲಾ ಶಾಲಾ ಶಿಕ್ಷಣ ಮತ್ತು ಆಜೀವ ಕಲಿಕೆಗೆ ಅಗತ್ಯವಾದ ಅಡಿಪಾಯ ಮತ್ತು ಅನಿವಾರ್ಯವಾದ ಪೂರ್ವಾರ್ಹತೆಯಾಗಿದೆ. ಆದರೆ ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಮೀಕ್ಷೆಗಳು, ನಾವು ಪ್ರಸ್ತುತ ಕಲಿಕೆಯಲ್ಲಿ ಬಿಕ್ಕಟ್ಟಿನಲ್ಲಿದ್ದೇವೆ ಎಂದು ಸೂಚಿಸಿವೆ.

ಪ್ರಸ್ತುತ ಪ್ರಾಥಮಿಕ ಶಾಲೆಯಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು – 5 ಕೋಟಿಗಿಂತ ಹೆಚ್ಚು ಇದ್ದಾರೆ ಎಂದು ಅಂದಾಜಿಸಲಾಗಿದೆ.

2.2 ಎಲ್ಲಾ ಮಕ್ಕಳು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಪಡೆಯುವಂತೆ ಮಾಡುವುದು ಹಾಗೂ ಅನೇಕ ವಿಷಯಗಳಲ್ಲಿ ತಕ್ಷಣದ ಕ್ರಮಗಳನ್ನು ಕೈಗೊಂಡು ಅಲ್ಪಾವಧಿಯಲ್ಲಿ ಸಾಧಿಸಬೇಕಾಗಿರುವ ಸ್ಪಷ್ಟ ಗುರಿಗಳನ್ನು ರಾಷ್ಟ್ರೀಯ ಮಿಷನ್ (ಅಭಿಯಾನ) ಹೊಂದಿದೆ. 2025 ರ ವೇಳೆಗೆ ಪ್ರಾಥಮಿಕ ಶಾಲೆಯಲ್ಲಿನ ಎಲ್ಲಾ ವಿದ್ಯಾರ್ಥಿಗಳು ಸಾರ್ವತ್ರಿಕ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಪಡೆಯುವುದು ಶಿಕ್ಷಣ ವ್ಯವಸ್ಥೆಯ ಪ್ರಥಮ ಆದ್ಯತೆಯಾಗಿದೆ. ಈ ಮೂಲಭೂತ ಕಲಿಕೆಯ ಅವಶ್ಯಕತೆಯನ್ನು (ಅಂದರೆ, ಬುನಾದಿ ಹಂತದಲ್ಲಿ ಓದುವಿಕೆ, ಬರೆಯುವಿಕೆ ಮತ್ತು ಅಂಕಗಣಿತ) ಮೊದಲು ಸಾಧಿಸಿದರೆ ಮಾತ್ರ ಈ ನೀತಿಯ ಉಳಿದ ಭಾಗವು ನಮ್ಮ ವಿದ್ಯಾರ್ಥಿಗಳಿಗೆ ಪ್ರಸ್ತುತವಾಗುತ್ತದೆ. ಈ ನಿಟ್ಟಿನಲ್ಲಿ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಆದ್ಯತೆಯ ಮೇರೆಗೆ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನದ ರಾಷ್ಟ್ರೀಯ ಮಿಷನ್ ಅನ್ನು ಸ್ಥಾಪಿಸುತ್ತದೆ. ಅಂತೆಯೇ, ಎಲ್ಲಾ ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳು ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಸಾರ್ವತ್ರಿಕ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಸಾಧಿಸಲು, 2025 ರ ವೇಳೆಗೆ ಸಾಧಿಸಬೇಕಾದ ಹಂತವಾರು ಗುರಿಗಳನ್ನು ಗುರುತಿಸಿ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಯೋಜನೆಯನ್ನು ಸಿದ್ಧಪಡಿಸುತ್ತವೆ.






2.3 ಮೊದಲನೆಯದಾಗಿ, ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ವಿಶೇಷವಾಗಿ ಅನನುಕೂಲಕರ ಪ್ರದೇಶಗಳು ಮತ್ತು ಅಧಿಕ ವಿದ್ಯಾರ್ಥಿ–ಶಿಕ್ಷಕ ಅನುಪಾತವಿರುವ ಅಥವಾ ಹೆಚ್ಚಿನ ಪ್ರಮಾಣದ ಅನಕ್ಷರತೆ ಇರುವ ಪ್ರದೇಶಗಳಲ್ಲಿ ಶೀಘ್ರವಾಗಿ, ನಿಗದಿತ ಸಮಯದಲ್ಲಿ ಭರ್ತಿ ಮಾಡಲಾಗುತ್ತದೆ. ಸ್ಥಳೀಯ ಶಿಕ್ಷಕರನ್ನು ಅಥವಾ ಸ್ಥಳೀಯ ಭಾಷೆಗಳ ಪರಿಚಯವಿರುವವರನ್ನು ನೇಮಿಸಿಕೊಳ್ಳಲು ವಿಶೇಷ ಆದ್ಯತೆ ನೀಡಲಾಗುವುದು. ಪ್ರತಿ ಶಾಲಾ ಹಂತದಲ್ಲಿ 30:1 ವಿದ್ಯಾರ್ಥಿ–ಶಿಕ್ಷಕ ಅನುಪಾತವನ್ನು (PTR) ಖಾತ್ರಿಪಡಿಸಲಾಗುತ್ತದೆ; ಹೆಚ್ಚಿನ ಸಂಖ್ಯೆಯ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿರುವ ಪ್ರದೇಶಗಳಲ್ಲಿ 25:1 PTR ಇರಬಹುದಾಗಿದೆ. ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಕಲಿಸಲು ಶಿಕ್ಷಕರಿಗೆ ನಿರಂತರ ವೃತ್ತಿಪರ ಅಭಿವೃದ್ಧಿಯೊಂದಿಗೆ ತರಬೇತಿ, ಪ್ರೋತ್ಸಾಹ ಮತ್ತು ಬೆಂಬಲವನ್ನು ನೀಡಲಾಗುವುದು.

2.4 ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ, ಪೂರ್ವಸಿದ್ಧತಾ ಮತ್ತು ಮಧ್ಯಮ ಹಂತದ ಶಾಲಾ ವಿದ್ಯಾರ್ಥಿಗಳ ಸಾಧನೆಯನ್ನು ಗಮನಿಸಲು, ನಿರಂತರ ಸಂಕಲನಾತ್ಮಕ ಮೌಲ್ಯಮಾಪನದೊಂದಿಗೆ, ಪ್ರತಿ ವಿದ್ಯಾರ್ಥಿಯ ಕಲಿಕೆಯನ್ನು ಖಚಿತಪಡಿಸಲು, ಸಾಮಾನ್ಯವಾಗಿ ಓದುವುದು, ಬರೆಯುವುದು, ಮಾತನಾಡುವುದು, ಎಣಿಸುವುದು, ಅಂಕಗಣಿತ ಮತ್ತು ಗಣಿತದ ಚಿಂತನೆಗಳಿಗೆ ಮತ್ತು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನಕ್ಕೆ ಹೆಚ್ಚಿನ ಗಮನ ನೀಡಲಾಗುತ್ತದೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಮತ್ತು ಉತ್ತೇಜಿಸಲು ಪ್ರತಿದಿನ ನಿರ್ದಿಷ್ಟ ಸಮಯದಲ್ಲಿ ವರ್ಷ ಪೂರ್ತಿ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ. ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನಕ್ಕೆ ಹೆಚ್ಚು ಒತ್ತು ನೀಡುವಂತೆ ಶಿಕ್ಷಕರ ಶಿಕ್ಷಣ ಮತ್ತು ಪ್ರಾರಂಭಿಕ ತರಗತಿಗಳ ಪಠ್ಯಕ್ರಮವನ್ನು ಮರುವಿನ್ಯಾಸಗೊಳಿಸಲಾಗುತ್ತದೆ.




ನಿಪುಣ್ ಭಾರತ್ ಕಾರ್ಯಕ್ರಮದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆಯಲು ಎನ್.ಸಿ.ಇ.ಆರ್.ಟಿ. ವೆಬ್ ಸೈಟ್‌ಗೆ ಭೇಟಿ ನೀಡಿ. (https://ncert.nic.in/ComicFlipBookEnglish/nipunbharat/mobile/index.html)

2.5 ಪ್ರಸ್ತುತ ECCE ಸಾರ್ವತ್ರಿಕವಾಗಿ ಲಭ್ಯವಿಲ್ಲದಿರುವುದರಿಂದ 1ನೇ ತರಗತಿಯ ಮೊದಲ ಕೆಲವು ವಾರಗಳಲ್ಲಿ ಹೆಚ್ಚಿನ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿರುತ್ತಾರೆ. ಆದ್ದರಿಂದ, ಎಲ್ಲಾ ವಿದ್ಯಾರ್ಥಿಗಳು ಶಾಲಾ ಶಿಕ್ಷಣ ಪಡೆಯಲು ಸಿದ್ಧರಾಗಿದ್ದಾರೆ ಎನ್ನುವುದನ್ನು

ಖಚಿತಪಡಿಸಿಕೊಳ್ಳಲು, 1ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ವರ್ಣಮಾಲೆಗಳು, ಶಬ್ದಗಳು, ಪದಗಳು, ಬಣ್ಣಗಳು, ಆಕಾರಗಳ ಕಲಿಕೆಯ ಚಟುವಟಿಕೆಗಳು ಮತ್ತು ಅಭ್ಯಾಸ ಪುಸ್ತಕಗಳನ್ನು ಸಹಪಾಠಿಗಳು ಮತ್ತು ಪೋಷಕರ ಸಹಕಾರದೊಂದಿಗೆ, ಮಧ್ಯಂತರ 3 ತಿಂಗಳ ಆಟ–ಆಧಾರಿತ 'ಶಾಲಾ ತಯಾರಿ ಮಾಡ್ಯೂಲ್' ಗಳನ್ನು NCERT ಮತ್ತು SCERTಗಳು ಅಭಿವೃದ್ಧಿಪಡಿಸುತ್ತವೆ.

2.6 ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನ ಸಂಬಂಧ ಉನ್ನತ–ಗುಣಮಟ್ಟದ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರವು DIKSHA ಡಿಜಿಟಲ್ ವೇದಿಕೆಯಲ್ಲಿ ಲಭ್ಯವಾಗುವಂತೆ ಕ್ರಮವಹಿಸಲಾಗುವುದು. ಶಿಕ್ಷಕರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲು ಮತ್ತು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವೆ ಇರುವ ಯಾವುದೇ ಭಾಷೆಯ ಅಡೆತಡೆಗಳನ್ನು ನಿವಾರಿಸಲು ತಾಂತ್ರಿಕ ಸಹಯೋಗವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಿ ಅನುಷ್ಠಾನಗೊಳಿಸಲಾಗುತ್ತದೆ.

2.7 ಪ್ರಸ್ತುತ ಕಲಿಕೆಯಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ಸಾರ್ವತ್ರಿಕ ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಸಾಧಿಸಲು ಶಿಕ್ಷಕರನ್ನು ಬೆಂಬಲಿಸುವ ಎಲ್ಲಾ ಕಾರ್ಯಸಾಧ್ಯ ವಿಧಾನಗಳನ್ನು ಪರಿಶೋಧಿಸಲಾಗುತ್ತದೆ. ವಿದ್ಯಾರ್ಥಿಗಳು ಪರಸ್ಪರ ಒಬ್ಬರಿಗೊಬ್ಬರು ಬೋಧಿಸುವುದರಿಂದ ಕಲಿಯುವವರಿಗೆ ಮಾತ್ರವಲ್ಲ, ಕಲಿಸುವವರಿಗೂ ಕಲಿಯಲು ಇದು ಅತ್ಯಂತ ಪರಿಣಾಮಕಾರಿ ಎಂದು ಪ್ರಪಂಚದಾದ್ಯಂತ ಕೈಗೊಳ್ಳಲಾದ ಅಧ್ಯಯನಗಳು ತಿಳಿಸುತ್ತವೆ. ಆದ್ದರಿಂದ ತರಬೇತಿ ಪಡೆದ ಶಿಕ್ಷಕರ ಮೇಲ್ವಿಚಾರಣೆಯಲ್ಲಿ, ಸುರಕ್ಷತಾ ಅಂಶಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗಾಗಿ ಸಹಪಾಠಿ ಬೋಧನೆಯನ್ನು ಸ್ವ–ಪ್ರೇರಣೆಯಿಂದ ಸಂತೋಷದಾಯಕ ಚಟುವಟಿಕೆಯಾಗಿ ಕೈಗೊಳ್ಳಬಹುದು. ಇದರಿಂದಾಗಿ ಸ್ಥಳೀಯ ಮತ್ತು ಅದರಾಚೆಯ ಸಮುದಾಯದಿಂದ ತರಬೇತಿ ಪಡೆದ ಸ್ವಯಂಸೇವಕರಿಗೆ ದೊಡ್ಡ ಮಟ್ಟದ ಈ ಅಭಿಯಾನದಲ್ಲಿ ಭಾಗವಹಿಸಲು ಅವಕಾಶವಾಗುತ್ತದೆ. ಸಮುದಾಯದ ಪ್ರತಿಯೊಬ್ಬ ಸಾಕ್ಷರ ಸದಸ್ಯರು ಒಬ್ಬ ವಿದ್ಯಾರ್ಥಿ/ವ್ಯಕ್ತಿಗೆ ಓದು ಬರೆಹ ಕಲಿಸಲು ಸಿದ್ಧರಾಗಬಹುದು. ಹೀಗೆ ಮಾಡುವುದರಿಂದ ದೇಶದ ಚಿತ್ರಣ ಬಹಳ ಬೇಗ ಬದಲಾಗಬಹುದಾಗಿದೆ. ರಾಜ್ಯಗಳು ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನವನ್ನು ಉತ್ತೇಜಿಸುವ ಈ ರಾಷ್ಟ್ರವ್ಯಾಪಿ ಅಭಿಯಾನದಲ್ಲಿ, ಇಂತಹ ಸಹಪಾಠಿ ಬೋಧನೆ ಮತ್ತು ಸ್ವಯಂಸೇವಾ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.

2.8 ಎಲ್ಲಾ ಸ್ಥಳೀಯ ಮತ್ತು ಭಾರತೀಯ ಭಾಷೆಗಳಲ್ಲಿ ಉತ್ತಮ–ಗುಣಮಟ್ಟದ ಅನುವಾದ ಸೇರಿದಂತೆ ಎಲ್ಲಾ ಹಂತದ ವಿದ್ಯಾರ್ಥಿಗಳಿಗೆ ಆನಂದದಾಯಕ ಮತ್ತು ಸ್ಫೂರ್ತಿದಾಯಕ ಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಈ ಪುಸ್ತಕಗಳು ಶಾಲಾ ಮತ್ತು ಸ್ಥಳೀಯ ಸಾರ್ವಜನಿಕ ಗ್ರಂಥಾಲಯಗಳಲ್ಲಿ ವ್ಯಾಪಕವಾಗಿ ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತದೆ. ದೇಶಾದ್ಯಂತ ಓದುವ ಸಂಸ್ಕೃತಿಯನ್ನು ಬೆಳೆಸಲು ಸಾರ್ವಜನಿಕ ಮತ್ತು ಶಾಲಾ ಗ್ರಂಥಾಲಯಗಳನ್ನು ವಿಸ್ತರಿಸಲಾಗುವುದು. ಡಿಜಿಟಲ್ ಗ್ರಂಥಾಲಯಗಳನ್ನೂ ಸ್ಥಾಪಿಸಲಾಗುವುದು. ಶಾಲೇತರ ಸಮಯದಲ್ಲಿ ಸಮುದಾಯಕ್ಕೆ ಸೇವೆ ಸಲ್ಲಿಸಲು ವಿಶೇಷವಾಗಿ ಹಳ್ಳಿಗಳಲ್ಲಿ ಶಾಲಾ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು ಮತ್ತು ವ್ಯಾಪಕ ಓದುವಿಕೆಯನ್ನು ಮತ್ತಷ್ಟು ಸುಗಮಗೊಳಿಸಲು ಮತ್ತು ಉತ್ತೇಜಿಸಲು ಸಾರ್ವಜನಿಕ / ಶಾಲಾ ಗ್ರಂಥಾಲಯಗಳಲ್ಲಿ ಪುಸ್ತಕ ಕ್ಲಬ್‌ಗಳನ್ನು ತೆರೆಯಲಾಗುವುದು. ರಾಷ್ಟ್ರೀಯ ಪುಸ್ತಕ ಪ್ರಚಾರ ನೀತಿಯನ್ನು ರೂಪಿಸಲಾಗುವುದು.

2.9 ಮಕ್ಕಳು ಅಪೌಷ್ಟಿಕತೆಯಿಂದ ಅಥವಾ ಅನಾರೋಗ್ಯದಿಂದ ಬಳಲುತ್ತಿರುವಾಗ ಉತ್ತಮವಾಗಿ ಕಲಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಮಕ್ಕಳ ಪೋಷಣೆ ಮತ್ತು ಆರೋಗ್ಯವನ್ನು (ಮಾನಸಿಕ ಆರೋಗ್ಯವನ್ನು ಒಳಗೊಂಡಂತೆ) ಆರೋಗ್ಯಕರ ಊಟ ಒದಗಿಸುವದರ ಮೂಲಕ ಕಾಪಾಡಲಾಗುವುದು. ಇದಕ್ಕಾಗಿ ಸುಶಿಕ್ಷಿತ ಸಾಮಾಜಿಕ ಕಾರ್ಯಕರ್ತರು, ಸಲಹೆಗಾರರು ಮತ್ತು ಶಾಲಾ ವ್ಯವಸ್ಥೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ ಬೆಳಗಿನ ಪೌಷ್ಟಿಕ ಉಪಾಹಾರದ ನಂತರದ ಸಮಯವು ಜ್ಞಾನಾತ್ಮಕವಾಗಿ ಹೆಚ್ಚು ಅಗತ್ಯವಿರುವ ವಿಷಯಗಳ ಅಧ್ಯಯನಕ್ಕೆ ಸೂಕ್ತವಾಗಿರುತ್ತದೆ ಎಂದು ಸಂಶೋಧನೆಯಿಂದ ತಿಳಿದುಬಂದಿರುತ್ತದೆ. ಆದ್ದರಿಂದ ಮಧ್ಯಾಹ್ನ ಊಟಕ್ಕೆ ಹೆಚ್ಚುವರಿಯಾಗಿ, ಸರಳವಾದ ಆದರೆ ಶಕ್ತಿಯುತವಾದ ಉಪಹಾರವನ್ನು ಒದಗಿಸಲಾಗುವುದು. ಬಿಸಿಯಾದ ಊಟ ಒದಗಿಸಲು ಸಾಧ್ಯವಿರದ ಸ್ಥಳಗಳಲ್ಲಿ, ಸರಳವಾದ ಆದರೆ ಪೌಷ್ಟಿಕ ಊಟ, ಅಂದರೆ ನೆಲಗಡಲೆ / ಚಿಕ್ಕಿ / ಅಥವಾ ಸ್ಥಳೀಯವಾಗಿ ಲಭ್ಯವಿರುವ ಹಣ್ಣುಗಳ ಇತ್ಯಾದಿಗಳನ್ನು ಕೊಡಬಹುದಾಗಿದೆ. ಶಾಲೆಗಳಲ್ಲಿ ಎಲ್ಲಾ ಮಕ್ಕಳು ವಿಶೇಷವಾಗಿ 100% ರೋಗನಿರೋಧಕತೆಯನ್ನು ಪಡೆಯಲು ನಿಯಮಿತವಾಗಿ ಆರೋಗ್ಯ ತಪಾಸಣೆಗೆ ಒಳಗಾಗಬೇಕು. ಇದರ ಮೇಲ್ವಿಚಾರಣೆಗಾಗಿ ಆರೋಗ್ಯ ಕಾರ್ಡ್‌ಗಳನ್ನು ನೀಡಲಾಗುವುದು.

**ಚಿಂತನಾಶೀಲ ಪ್ರಶ್ನೆಗಳು**

4. ಆರಂಭಿಕ ಹಂತದಲ್ಲಿ ಭಾಷಾ ಕಲಿಕೆ ಮತ್ತು ಗಣಿತದ ಸಾಕ್ಷರತೆಗೆ ಹೆಚ್ಚು ಒತ್ತನ್ನು ನೀಡಲು ಕಾರಣಗಳೇನು?
5. ಪೌಷ್ಟಿಕತೆ ಮತ್ತು ಉತ್ತಮ ಆರೋಗ್ಯ ಆರಂಭಿಕ ಕಲಿಕೆಯನ್ನು ಹೇಗೆ ಪ್ರಚೋದಿಸುತ್ತದೆ?

# ಅಧ್ಯಾಯ – 03

## ಶಾಲೆ ಬಿಡುವ ಮಕ್ಕಳ ದರವನ್ನು ಕಡಿಮೆಗೊಳಿಸುವುದು ಮತ್ತು ಎಲ್ಲಾ ಹಂತಗಳಲ್ಲಿ ಶಿಕ್ಷಣದ ಸಾರ್ವತ್ರಿಕ ಲಭ್ಯತೆಯನ್ನು ಖಚಿತಪಡಿಸುವುದು


### ಈ ಅಧ್ಯಾಯದಲ್ಲಿ. . . . .

ಶಾಲಾ ವ್ಯವಸ್ಥೆಯಲ್ಲಿ ಮಕ್ಕಳು ಶಾಲೆಗೆ ದಾಖಲಾಗುವುದು ಮತ್ತು ಹಾಜರಾತಿಯನ್ನು ಸಂಪೂರ್ಣವಾಗಿ ಸಾಧಿಸುವ ಕ್ರಮಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಶಾಲಾ ಪೂರ್ವ ಹಂತದಿಂದ 12ನೇ ತರಗತಿಯವರೆಗೆ ಸಾರ್ವತ್ರಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಗುಣಮಟ್ಟದ ಶಿಕ್ಷಣದ ಅವಕಾಶವನ್ನು ಒದಗಿಸುವುದು, ಮಾಧ್ಯಮಿಕ ಹಂತದಲ್ಲಿ 100%ರಷ್ಟು ಹಾಜರಾತಿಯನ್ನು ಸಾಧಿಸಲು ಕೈಗೊಳ್ಳಲಾಗುವ ಸಂಯೋಜಿತ ಕ್ರಮಗಳು ಇವುಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಶಿಕ್ಷಣ ಮತ್ತು ಕಲಿಕೆಗೆ ಒತ್ತನ್ನು ನೀಡುವ ಸಲುವಾಗಿ ಸಾರ್ವಜನಿಕ ಸೇವಾ ಮನೋಭಾವದ ಸಂಸ್ಥೆಗಳಿಗೂ ಅವಕಾಶವನ್ನು ಒದಗಿಸಲಾಗುತ್ತದೆ ಹಾಗೂ ಅಪೇಕ್ಷಿತ ಕಲಿಕಾ ಫಲಿತಾಂಶಗಳ ಕಲಿಕೆಗೆ ಒತ್ತು ನೀಡುವ ಬಗ್ಗೆ ಪ್ರಸ್ತಾಪಿಸಲಾಗಿದೆ.

**ಉದ್ದೇಶ:** 3 ರಿಂದ 18 ವರ್ಷ ವಯಸ್ಸಿನ ಎಲ್ಲಾ ಮಕ್ಕಳು 2030ರೊಳಗೆ ಉಚಿತ ಮತ್ತು ಕಡ್ಡಾಯ ಗುಣಮಟ್ಟದ ಶಾಲಾ ಶಿಕ್ಷಣದಲ್ಲಿ ಭಾಗವಹಿಸುವಂತೆ ಮಾಡುವುದು ಮತ್ತು ಶಾಲಾ ಲಭ್ಯತೆಯನ್ನು ಒದಗಿಸುವುದು.

3.1 ಶಾಲಾ ವ್ಯವಸ್ಥೆಯಲ್ಲಿ ಮಕ್ಕಳು ಶಾಲೆಗೆ ದಾಖಲಾಗಿದ್ದಾರೆಯೇ ಮತ್ತು ಹಾಜರಾಗುತ್ತಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಪ್ರಾಥಮಿಕ ಶಿಕ್ಷಣದ ಮುಖ್ಯ ಗುರಿ. ಸರ್ವ ಶಿಕ್ಷಣ ಅಭಿಯಾನ (ಈಗ ಸಮಗ್ರ ಶಿಕ್ಷಣ) ಮತ್ತು ಶಿಕ್ಷಣ ಹಕ್ಕು ಕಾಯ್ದೆಯಂತಹ ಉಪಕ್ರಮಗಳ ಮೂಲಕ ಭಾರತವು ಇತ್ತೀಚಿನ ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರಿಕ ದಾಖಲಾತಿಯನ್ನು ಸಾಧಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಆದಾಗ್ಯೂ, ನಂತರದ ತರಗತಿಗಳಲ್ಲಿನ ವಿದ್ಯಾರ್ಥಿ ಸಂಬಂಧಿತ ದತ್ತಾಂಶಗಳು ಮಕ್ಕಳನ್ನು ಶಾಲಾ ವ್ಯವಸ್ಥೆಯಲ್ಲಿ ಉಳಿಸಿಕೊಳ್ಳುವಲ್ಲಿ ಎದುರಿಸುತ್ತಿರುವ ಕೆಲವು ಗಂಭೀರ ಸಮಸ್ಯೆಗಳನ್ನು ಸೂಚಿಸುತ್ತಿವೆ. 6–8ನೇ ತರಗತಿಗಳಿಗೆ GER (ದಾಖಲಾತಿ ಅನುಪಾತ) 90.9% ಆಗಿದ್ದರೆ, 9–10 ಮತ್ತು 11–12 ತರಗತಿಗಳಿಗೆ ಇದು ಕ್ರಮವಾಗಿ 79.3% ಮತ್ತು 56.5% ಮಾತ್ರ ಇದೆ. ದಾಖಲಾದ ವಿದ್ಯಾರ್ಥಿಗಳಲ್ಲಿ ಗಮನಾರ್ಹ ಪ್ರಮಾಣದ ವಿದ್ಯಾರ್ಥಿಗಳು 5ನೇ ತರಗತಿಯ ನಂತರ ಮತ್ತು ವಿಶೇಷವಾಗಿ 8ನೇ ತರಗತಿಯ ನಂತರ ಶಾಲೆಯಿಂದ ಹೊರಗುಳಿಯುತ್ತಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ.

2017–18 ರಲ್ಲಿ NSSO ನಡೆಸಿದ 75ನೇ ಸುತ್ತಿನ ಗೃಹ ಸಮೀಕ್ಷೆಯ ಪ್ರಕಾರ, 6 ರಿಂದ 17 ವರ್ಷದೊಳಗಿನ ಶಾಲಾ ಮಕ್ಕಳ ಸಂಖ್ಯೆ 3.22 ಕೋಟಿ ಇದೆ. 2030ರ ವೇಳೆಗೆ ಪೂರ್ವ ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತದವರೆಗೆ 100% ಒಟ್ಟು ದಾಖಲಾತಿ ಅನುಪಾತವನ್ನು ಸಾಧಿಸುವುದು ಹಾಗೂ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯುವುದನ್ನು ತಡೆಯುವುದು ಮೊದಲ ಆದ್ಯತೆಯಾಗಿದೆ. ಶಾಲಾ ಪೂರ್ವ ಹಂತದಿಂದ 12ನೇ ತರಗತಿಯವರೆಗೆ ಸಾರ್ವತ್ರಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಮತ್ತು ವೃತ್ತಿಪರ ಶಿಕ್ಷಣ ಸೇರಿದಂತೆ ಗುಣಮಟ್ಟದ ಸಮಗ್ರ ಶಿಕ್ಷಣದ ಅವಕಾಶವನ್ನು ಎಲ್ಲ ಮಕ್ಕಳಿಗೆ ಒದಗಿಸಲು ಸಮಗ್ರ ಪ್ರಯತ್ನವನ್ನು ರಾಷ್ಟ್ರ ಮಟ್ಟದಲ್ಲಿ ಮಾಡಲಾಗುವುದು.



3.2 ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಮತ್ತು ಇನ್ನು ಮುಂದೆ ಹೆಚ್ಚಿನ ಮಕ್ಕಳು ಶಾಲೆ ಬಿಡದಂತೆ ತಡೆಯಲು ಎರಡು ಉಪಕ್ರಮಗಳನ್ನು ಕೈಗೊಳ್ಳಲಾಗುವುದು. ಮೊದಲನೆಯದು, ಎಲ್ಲಾ ವಿದ್ಯಾರ್ಥಿಗಳಿಗೆ ಪೂರ್ವ ಪ್ರಾಥಮಿಕ ಶಾಲೆಯಿಂದ 12ನೇ ತರಗತಿಯವರೆಗೆ ಎಲ್ಲಾ ಹಂತಗಳಲ್ಲಿ ಸುರಕ್ಷಿತ ಮತ್ತು ಗುಣಮಟ್ಟದ ಶಾಲಾ ಶಿಕ್ಷಣ ದೊರಕುವಂತೆ ಮಾಡಲು ಪರಿಣಾಮಕಾರಿ ಮತ್ತು ಅಗತ್ಯ ಪ್ರಮಾಣದ ಮೂಲಸೌಕರ್ಯಗಳನ್ನು ಒದಗಿಸುವುದು. ಪ್ರತಿ ಹಂತದಲ್ಲೂ ನಿಯಮಿತವಾಗಿ ತರಬೇತಿ ಪಡೆದ ಶಿಕ್ಷಕರನ್ನು ಒದಗಿಸುವುದರ ಜೊತೆಗೆ, ಯಾವುದೇ ಶಾಲೆಯಲ್ಲಿ ಮೂಲಸೌಕರ್ಯಗಳ ಕೊರತೆಯಾಗದಂತೆ ವಿಶೇಷ ಕಾಳಜಿ ವಹಿಸುವುದು. ಸರ್ಕಾರಿ ಶಾಲೆಗಳ ವಿಶ್ವಾಸಾರ್ಹತೆಯನ್ನು ಪುನಃ ಸ್ಥಾಪಿಸಲಾಗುವುದು.

ಎಲ್ಲಾ ಮಕ್ಕಳು ಶಾಲೆಗೆ ಹಾಜರಾಗಲು ಮತ್ತು ಸೂಕ್ತ ಹಂತದಲ್ಲಿ ಕಲಿಯಲು ಅವಕಾಶವಾಗುವಂತೆ ಈಗಾಗಲೇ ಅಸ್ತಿತ್ವದಲ್ಲಿರುವ ಶಾಲೆಗಳನ್ನು ನವೀಕರಿಸುವುದು. ಇದರೊಂದಿಗೆ ಶಾಲೆಗಳಿಲ್ಲದ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿ ಗುಣಮಟ್ಟದ ಶಾಲೆಗಳನ್ನು ಆರಂಭಿಸುವ ಮೂಲಕ ಹಾಗೂ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಸುರಕ್ಷಿತ ಮತ್ತು ಸೂಕ್ತವಾದ ಸಂಚಾರಿ ಸೌಲಭ್ಯವನ್ನು ಮತ್ತು ವಸತಿ ಶಾಲೆಗಳನ್ನು ಒದಗಿಸಲಾಗುತ್ತದೆ. ವಲಸೆ ಕಾರ್ಮಿಕರ ಮಕ್ಕಳು ಮತ್ತು ವಿವಿಧ ಸನ್ನಿವೇಶಗಳಿಂದಾಗಿ ಶಾಲೆಯಿಂದ ಹೊರಗುಳಿಯುತ್ತಿರುವ ಇತರ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ಮರಳಿ ತರಲು ನಾಗರಿಕ ಸಮಾಜದ ಸಹಕಾರದೊಂದಿಗೆ ಪರ್ಯಾಯ ಮತ್ತು ನವೀನ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ಪ್ರಾಥಮಿಕ ಶಾಲೆಗೆ ದಾಖಲಾತಿ ಪಡೆದ ಮಕ್ಕಳು ಶಾಲೆಗೆ ಹಾಜರಾಗುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು ಶಾಲಾ ವ್ಯವಸ್ಥೆಯ ಒಂದು ಪ್ರಮುಖ ಗುರಿಯಾಗಿದೆ. ಸರ್ವ ಶಿಕ್ಷಣ ಅಭಿಯಾನ (ಪ್ರಸ್ತುತ ಸಮಗ್ರ ಶಿಕ್ಷಣ) ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಯ ಮೂಲಕ ಭಾರತವು ಇತ್ತೀಚಿನ ವರ್ಷಗಳಲ್ಲಿ ಹಾಜರಾತಿಯನ್ನು ಉತ್ತಮಪಡಿಸುವಲ್ಲಿ ಗಣನೀಯ ಸಾಧನೆ ಮಾಡಿದೆ. ಆದರೂ, ಮುಂದಿನ ಹಂತಗಳಲ್ಲಿ ಮಕ್ಕಳನ್ನು ಶಾಲಾ ವ್ಯವಸ್ಥೆಯಲ್ಲಿ ಉಳಿಸಿಕೊಳ್ಳುವಲ್ಲಿ ಇರುವ ಕೆಲವು ಗಂಭೀರ ಅಂಶಗಳನ್ನು – ನಿವ್ವಳ ದಾಖಲಾತಿ (ಜಿ.ಇ.ಆರ್) 6 – 8 ನೇ ಗ್ರೇಡ್‌ಗಳಲ್ಲಿ 90.9%, 9 – 10 ನೇ ಗ್ರೇಡ್ ಮತ್ತು 11 – 12ನೇ ಗ್ರೇಡ್‌ಗಳಲ್ಲಿ ಕೇವಲ 79.3% ಇರುವುದನ್ನು ಲಭ್ಯವಿರುವ ದತ್ತಾಂಶಗಳು ಸೂಚಿಸುತ್ತಿವೆ. 5ನೇ ಗ್ರೇಡ್ ನಂತರದಲ್ಲಿ ಅದರಲ್ಲೂ ವಿಶೇಷವಾಗಿ 8ನೇ ಗ್ರೇಡ್ ನಂತರದಲ್ಲಿ ದಾಖಲಾದ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿರುವುದು ಗಮನಾರ್ಹವಾಗಿದೆ.

ಮಾಧ್ಯಮಿಕ ಹಂತದಲ್ಲಿ 2030ರ ವೇಳೆಗೆ 100% ರಷ್ಟು GER ಗುರಿಯನ್ನು ಸಾಧಿಸಬೇಕಾಗಿದೆ. ಪೂರ್ವ ಶಾಲಾ ಹಂತದಿಂದ 12ನೇ ಗ್ರೇಡ್ ವರೆಗೆ ಸಾರ್ವತ್ರಿಕದಾಖಲಾತಿಯನ್ನು ಮತ್ತು ಹಾಜರಾತಿಯನ್ನು ಖಾತರಿಪಡಿಸಲು ರಾಷ್ಟ್ರಮಟ್ಟದಿಂದ ಸಂಯೋಜಿತ ಪ್ರಯತ್ನಗಳನ್ನು ಮಾಡಲಾಗುತ್ತದೆ.

ಶಿಕ್ಷಣ ನೀತಿಗಳು ಸಮಯದೊಂದಿಗೆ ಬದಲಾಗುತ್ತವೆ. ಎನ್.ಇ.ಪಿ 1986 ರಿಂದ ಎನ್.ಇ.ಪಿ 2020 ಗೆ ಪರಿವರ್ತನೆಯಲ್ಲಿ ಸಂದರ್ಭದಲ್ಲಿ ಈ ಬದಲಾವಣೆಯು ಸ್ಪಷ್ಟವಾಗುತ್ತದೆ.

ಉದಾ: ಎನ್.ಇ.ಪಿ 1986 ರಲ್ಲಿ ಪ್ರಸ್ತಾಪಿಸಲಾದ ಶಾಲಾ ಸಂರಚನೆ 10+2+3 ಆಗಿದ್ದರೆ, ಎನ್.ಇ.ಪಿ 2020 ಶಾಲಾ ವಿನ್ಯಾಸ 5+3+3+4 ಆಗಿದೆ.

ಈ ಹೊಸ ಶಾಲಾ ಶಿಕ್ಷಣ ವಿನ್ಯಾಸದ ಬಗ್ಗೆ ನಿಮ್ಮ ತಿಳಿವಳಿಕೆ ಏನು? ಎಂದು ನಿಮ್ಮ ಸಹ ಶಿಬಿರಾರ್ಥಿಯೊಂದಿಗೆ ಚರ್ಚಿಸಿ ಹಾಗೂ ಎರಡೂ ನೀತಿಯಲ್ಲಿನ ಇನ್ನೊಂದು ವ್ಯತ್ಯಾಸವನ್ನು ಹಂಚಿಕೊಳ್ಳಿ.

3.3 ಎರಡನೆಯ ಉಪಕ್ರಮವೆಂದರೆ, ವಿದ್ಯಾರ್ಥಿಗಳು (ಎ) ಶಾಲೆಗೆ ದಾಖಲಾಗಿದ್ದಾರೆ ಮತ್ತು ಶಾಲೆಗೆ ಹಾಜರಾಗುತ್ತಾರೆ. (ಬಿ) ಅವರು ಕಲಿಕೆಯಲ್ಲಿ ಹಿಂದುಳಿದಿದ್ದರೆ ಅಥವಾ ಶಾಲೆಯಿಂದ ಹೊರಗುಳಿದಿದ್ದರೆ, ಶಾಲೆಗೆ ಪುನಃ ಪ್ರವೇಶ ಪಡೆಯಲು ಅವಕಾಶಗಳಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಇದಕ್ಕಾಗಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಸೂಕ್ತವಾಗಿ ಗುರ್ತಿಸಲಾಗುತ್ತದೆ ಮತ್ತು ಶಾಲಾ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶಗಳನ್ನು ಒದಗಿಸಲಾಗುತ್ತದೆ. ಬುನಾದಿ ಹಂತದಿಂದ 12ನೇ ತರಗತಿಯವರೆಗೆ, 18 ವರ್ಷ ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೆ ಸಮಾನ ಮತ್ತು ಗುಣಮಟ್ಟದ ಶಿಕ್ಷಣವನ್ನು ಒದಗಿಸಲು, ಸೂಕ್ತವಾದ ಸೌಲಭ್ಯಗಳನ್ನು ಒದಗಿಸಬೇಕು. ಶಾಲೆಗಳು / ಶಾಲಾ ಸಂಕೀರ್ಣಗಳು ಮತ್ತು ಶಿಕ್ಷಕರರೊಂದಿಗೆ ಬಾಂಧವ್ಯ ಹೊಂದಿರುವ ಆಪ್ತ ಸಲಹೆಗಾರರು ಅಥವಾ ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಅವರ ಪೋಷಕರೊಂದಿಗೆ ನಿರಂತರವಾಗಿ ಕೆಲಸ ಮಾಡುತ್ತಾರೆ. ಇವರು ಎಲ್ಲಾ ಶಾಲಾ–ವಯಸ್ಸಿನ ಮಕ್ಕಳು ಶಾಲೆಗೆ ದಾಖಲಾಗಿದ್ದಾರೆ ಮತ್ತು ಕಲಿಯುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಮುದಾಯದೊಂದಿಗೆ ಸಂಪರ್ಕದಲ್ಲಿರುತ್ತಾರೆ.

3.4 ಶಿಕ್ಷಣಕ್ಕಾಗಿ ಮೂಲಸೌಕರ್ಯಗಳನ್ನು ಒದಗಿಸುವುದು ಮತ್ತು ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವಲ್ಲಿ ಕಲಿಕೆಯ ಗುಣಮಟ್ಟ ಪ್ರಮುಖ ಪಾತ್ರವಹಿಸುತ್ತದೆ. ಇದರಿಂದ ಅವರು (ವಿಶೇಷವಾಗಿ ಬಾಲಕಿಯರು ಮತ್ತು ಇತರ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಗುಂಪುಗಳ ವಿದ್ಯಾರ್ಥಿಗಳು) ಶಾಲೆಗೆ ಆಸಕ್ತಿಯಿಂದ ಹಾಜರಾಗುವುದನ್ನು ಖಚಿತಪಡಿಸಿಕೊಳ್ಳುವುದು. ಸ್ಥಳೀಯ ಭಾಷಾ ಜ್ಞಾನ ಹೊಂದಿರುವ ಶಿಕ್ಷಕರನ್ನು ಹೆಚ್ಚಿನ ಡ್ರಾಪ್ ಔಟ್ ದರವಿರುವ ಪ್ರದೇಶಗಳಿಗೆ ನಿಯೋಜಿಸುವುದು.

3.5 ಎಲ್ಲಾ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವಂತೆ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಗುಂಪುಗಳಿಗೆ (SEDG) ವಿಶೇಷ ಒತ್ತು ನೀಡುವುದರೊಂದಿಗೆ, ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ವಿಧಾನಗಳನ್ನು ಒಳಗೊಂಡಂತೆ, ಕಲಿಕೆಯ ವಿವಿಧ ಮಾರ್ಗಗಳನ್ನು ಸುಲಭಗೊಳಿಸಲು ಶಾಲಾ ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು. ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆ (NIOS) ಮತ್ತು ರಾಜ್ಯ ಮುಕ್ತ ಶಾಲಾ ಸಂಸ್ಥೆ ನೀಡುವ ಮುಕ್ತ ಮತ್ತು ದೂರಶಿಕ್ಷಣ (ODL) ಕಾರ್ಯಕ್ರಮಗಳನ್ನು ಭೌತಿಕವಾಗಿ ಶಾಲೆಯಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದ ಭಾರತದ ಯುವಜನರ ಕಲಿಕೆಯ ಅಗತ್ಯಗಳನ್ನು ಪೂರೈಸಲು ವಿಸ್ತರಿಸಲಾಗುವುದು ಮತ್ತು ಬಲಪಡಿಸಲಾಗುವುದು. ಪ್ರಸ್ತುತ ಇರುವ ಕಾರ್ಯಕ್ರಮಗಳಿಗೆ ಹೆಚ್ಚುವರಿಯಾಗಿ NIOS ಮತ್ತು ರಾಜ್ಯ ಮುಕ್ತ ಶಾಲಾ ಸಂಸ್ಥೆಗಳೂ ಈ ಕಾರ್ಯಕ್ರಮಗಳನ್ನು ನೀಡುತ್ತವೆ: ಔಪಚಾರಿಕ ಶಾಲಾ ವ್ಯವಸ್ಥೆಯ 3, 5 ಮತ್ತು 8ನೇ ತರಗತಿಗಳಿಗೆ ಸಮಾನವಾದ ಎ, ಬಿ ಮತ್ತು ಸಿ ಹಂತಗಳು; 10 ಮತ್ತು 12 ತರಗತಿಗಳಿಗೆ ಸಮಾನವಾದ ಮಾಧ್ಯಮಿಕ ಶಿಕ್ಷಣ ಕಾರ್ಯಕ್ರಮಗಳು; ವೃತ್ತಿಪರ ಮತ್ತು ಶಿಕ್ಷಣ ಕಾರ್ಯಕ್ರಮಗಳು; ಮತ್ತು ವಯಸ್ಕರ ಸಾಕ್ಷರತೆ ಮತ್ತು ಜೀವನ–ಪುಷ್ಟೀಕರಣ ಕಾರ್ಯಕ್ರಮಗಳು.

3.6 ಸರ್ಕಾರಿ ಮತ್ತು ಸರ್ಕಾರೇತರ ಸಾರ್ವಜನಿಕ ಸೇವಾ ಮನೋಭಾವದ ಸಂಸ್ಥೆಗಳೂ ಶಾಲೆಗಳನ್ನು ಸ್ಥಾಪಿಸಲು, ಇರಬೇಕಾದ ಅಗತ್ಯತೆಗಳ ನಿರ್ಬಂಧಗಳನ್ನು ಕಡಿಮೆ ಮಾಡಲಾಗುವುದು. ಇದಕ್ಕಾಗಿ ಸಂಸ್ಕೃತಿ, ಭೌಗೋಳಿಕತೆ ಮತ್ತು ಸ್ಥಳೀಯ ವೈವಿಧ್ಯತೆಯನ್ನು ಉತ್ತೇಜಿಸಲಾಗುವುದು ಹಾಗೂ ಪರ್ಯಾಯ ಶಿಕ್ಷಣ ಮಾದರಿಗಳನ್ನು ಈ ಶಾಲೆಗಳು ಅಳವಡಿಸಿಕೊಳ್ಳಲು ಅನುಮತಿಸಲಾಗುವುದು. ಅಪೇಕ್ಷಿತ ಕಲಿಕೆಯ ಫಲಿತಾಂಶಗಳಿಗೆ ಸಂಬಂಧಿಸಿದ ಸಾಮರ್ಥ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು. ಸಾರ್ವಜನಿಕ ಸೇವಾ ಮನೋಭಾವ ಹೊಂದಿರುವ ವ್ಯಕ್ತಿ ಅಥವಾ ಸಂಸ್ಥೆಗಳ ಸಹಭಾಗಿತ್ವ ಇರುವ ಶಾಲೆಗಳನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತದೆ.

3.7 ಶಾಲೆಗಳಲ್ಲಿ ವೈಯಕ್ತಿಕ (one-on-one) ಬೋಧನೆ; ಅಕ್ಷರ ಜ್ಞಾನದ ಬೋಧನೆ ಮತ್ತು ಹೆಚ್ಚುವರಿ ಅವಧಿಗಳನ್ನು ತೆಗೆದುಕೊಳ್ಳುವುದು; ಬೋಧಕರಿಗೆ ಬೆಂಬಲ ಮತ್ತು ಮಾರ್ಗದರ್ಶನ; ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ; ಇತ್ಯಾದಿ ಸೌಲಭ್ಯಗಳನ್ನು ಒದಗಿಸುವ ಮೂಲಕ ಕಲಿಕೆಯನ್ನು ಹೆಚ್ಚಿಸುವ ಸ್ವಯಂ–ಸೇವಕ ಪ್ರಯತ್ನಗಳಲ್ಲಿ ಸಮುದಾಯ ಮತ್ತು ಹಳೆಯ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಪ್ರಯತ್ನಿಸಲಾಗುವುದು. ಈ ನಿಟ್ಟಿನಲ್ಲಿ, ಸಕ್ರಿಯ ಮತ್ತು ಆರೋಗ್ಯವಂತ ಹಿರಿಯ ನಾಗರೀಕರ, ಶಾಲೆಯ ಹಳೆಯ ವಿದ್ಯಾರ್ಥಿಗಳೂ ಮತ್ತು ಸ್ಥಳೀಯ ಸಮುದಾಯದ ಸದಸ್ಯರ ಬೆಂಬಲವನ್ನು ಸೂಕ್ತವಾಗಿ ಪಡೆಯಲಾಗುವುದು. ಈ ಉದ್ದೇಶಕ್ಕಾಗಿ ಸಾಕ್ಷರ ಸ್ವಯಂಸೇವಕರು, ನಿವೃತ್ತ ವಿಜ್ಞಾನಿಗಳು / ಸರ್ಕಾರಿ / ಅರೆ ಸರ್ಕಾರಿ ನೌಕರರು, ಹಳೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ದತ್ತಾಂಶವನ್ನು ಸಂಗ್ರಹಿಸಲಾಗುವುದು.

### ಈ ಅಧ್ಯಾಯದಲ್ಲಿ ಕಲಿತ ಮುಖ್ಯ ಅಂಶಗಳು

- 2030ರ ವೇಳೆಗೆ ಪೂರ್ವ ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತದವರೆಗೆ 100% ದಾಖಲಾತಿಯನ್ನು ಸಾಧಿಸುವುದು.
- ಶಿಕ್ಷಣಕ್ಕಾಗಿ ಮೂಲ ಸೌಕರ್ಯಗಳನ್ನು ಒದಗಿಸಿ, ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವುದು.
- ಸ್ಥಳೀಯ ಭಾಷಾ ಜ್ಞಾನ ಹೊಂದಿರುವ ಶಿಕ್ಷಕರನ್ನು ಹೆಚ್ಚಿನ ಡ್ರಾಪ್ ಔಟ್ ದರವಿರುವ ಪ್ರದೇಶಗಳಿಗೆ ನಿಯೋಜಿಸುವುದು.
- ಪ್ರಸ್ತುತ ಕಾರ್ಯಕ್ರಮಗಳಿಗೆ ಹೆಚ್ಚುವರಿಯಾಗಿ NIOS ಮತ್ತು ರಾಜ್ಯ ಮುಕ್ತ ಶಾಲಾ ಸಂಸ್ಥೆಗಳೂ ಔಪಚಾರಿಕ ಮತ್ತು ಅನೌಪಚಾರಿಕ ಕಲಿಕೆಯ ವಿಧಾನಗಳನ್ನು ಒದಗಿಸುತ್ತವೆ.

# ಅಧ್ಯಾಯ – 04

# ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ವಿಧಾನ

## ಈ ಅಧ್ಯಾಯದಲ್ಲಿ . . . . .

ಕಲಿಕೆ ಸಂಪೂರ್ಣ, ಸಮಗ್ರ ಆಹ್ಲಾದಕರವಾಗಿ ಹಾಗೂ ಭಾಗವಹಿಸುವಿಕೆಯಿಂದ ಕೂಡಿರಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು, 21ನೇ ಶತಮಾನದ ಕೌಶಲಗಳ ಕಲಿಕೆಗೆ ಒತ್ತನ್ನು ನೀಡುವ ಬಗ್ಗೆ ಹಲವಾರು ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಹೊಸ 5 + 3 + 3 + 4 ವಿನ್ಯಾಸದಲ್ಲಿ ಶಾಲಾ ಪಠ್ಯಕ್ರಮ ಮತ್ತು ಬೋಧನಾ ವಿಧಾನವನ್ನು ಪುನಾರಚಿಸುವುದು, ಇ.ಸಿ.ಸಿ.ಇ. ಹಂತದಲ್ಲಿ ನಮ್ಯವಾದ ಬಹುಹಂತದ ಚಟುವಟಿಕೆ ಆಧಾರಿತ ಕಲಿಕೆಯನ್ನು ಒದಗಿಸುವುದರ ಬಗ್ಗೆ ತಿಳಿಸಲಾಗಿದೆ. ವಿಮರ್ಶಾತ್ಮಕ ಚಿಂತನೆಯನ್ನು ಹೆಚ್ಚಿಸಲು ಕೈಗೊಳ್ಳಲಾಗುವ ವಿವಿಧ ಉಪಕ್ರಮಗಳ ಬಗ್ಗೆ ಹಾಗೂ ಪಠ್ಯಕ್ರಮದ ವಿಷಯವನ್ನು ಕಡಿಮೆ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಕಲಾ ಸಮ್ಮಿಳಿತ ಕಲಿಕೆ, ಕ್ರೀಡಾ ಸಂಯೋಜಿತ ಕಲಿಕೆಯ ಬಗೆಗೆ ಒತ್ತನ್ನು ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಭಾಷಾ ಕಲಿಕೆಗೆ ಪ್ರಾಧಾನ್ಯತೆ, ಶಾಸ್ತ್ರೀಯ ಭಾಷೆಗಳಲ್ಲಿ ಜ್ಞಾನಪಡೆದುಕೊಳ್ಳುವುದು ಇತ್ಯಾದಿ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಪಠ್ಯಕ್ರಮದಲ್ಲಿ ಅಗತ್ಯ ವಿಷಯಗಳು, ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಹೇಗೆ ಸಂಯೋಜಿಸಬೇಕು ಎಂಬುದನ್ನು ತಿಳಿಸಲಾಗಿದೆ. ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟುಗಳನ್ನು ರೂಪಿಸುವ ಬಗೆಗೂ ತಿಳಿಸಲಾಗಿದೆ. ಮೌಲ್ಯಮಾಪನ ಸಂಬಂಧಿತ ಅಂಶಗಳೂ ಇಲ್ಲಿವೆ.

4. **ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ವಿಧಾನ: ಕಲಿಕೆಯು ಸಂಪೂರ್ಣ, ಸಮಗ್ರ ಆಹ್ಲಾದಕರ ಮತ್ತು ಭಾಗವಹಿಸುವಿಕೆಯಿಂದ ಕೂಡಿರಬೇಕು**

## ಹೊಸ 5 + 3 + 3 + 4 ವಿನ್ಯಾಸದಲ್ಲಿ ಶಾಲಾ ಪಠ್ಯಕ್ರಮ ಮತ್ತು ಬೋಧನಾ ವಿಧಾನವನ್ನು ಪುನಾರಚಿಸುವುದು


4.1 ಶಾಲಾ ಶಿಕ್ಷಣದ ಪಠ್ಯಕ್ರಮ ಮತ್ತು ಬೋಧನಾ ವಿಧಾನದ ಸ್ವರೂಪವನ್ನು 3 ರಿಂದ 8, 8 ರಿಂದ 11, 11 ರಿಂದ 14 ಮತ್ತು 14 ರಿಂದ 18 ವರ್ಷ ವಯಸ್ಸಿಗೆ ಅನುಗುಣವಾಗಿ, ವಿವಿಧ ಬೆಳವಣಿಗೆಯ ಹಂತಗಳಲ್ಲಿ ಕಲಿಕಾರ್ಥಿಯ ವಿಕಾಸದ ಅಗತ್ಯತೆಗಳು ಹಾಗೂ ಆಸಕ್ತಿಗಳಿಗೆ ಸ್ಪಂದಿಸುವಂತೆ ಸೂಕ್ತವಾಗಿ ಪುನಾರಚಿಸಲಾಗುತ್ತದೆ.

ಪಠ್ಯಕ್ರಮ ಮತ್ತು ಬೋಧನಾ ವಿಧಾನದ ರಚನೆ ಮತ್ತು ಶಾಲಾ ಶಿಕ್ಷಣದ ಪಠ್ಯಕ್ರಮದ ಚೌಕಟ್ಟನ್ನು 5 + 3 + 3 + 4 ವಿನ್ಯಾಸದಲ್ಲಿ ರೂಪಿಸಲಾಗುತ್ತದೆ. ಇದು ಬುನಾದಿ ಹಂತ (ಎರಡು ಭಾಗಗಳಲ್ಲಿ, ಅಂದರೆ 3 ವರ್ಷಗಳ ಅಂಗನವಾಡಿ/ಶಾಲಾಪೂರ್ವ + ಪ್ರಾಥಮಿಕ ಶಾಲೆಯಲ್ಲಿ 2 ವರ್ಷಗಳ 1 – 2ನೇ ತರಗತಿಗಳು; 3 – 8 ವಯಸ್ಸಿನ ಮಕ್ಕಳು) ಪೂರ್ವ ಸಿದ್ಧತಾ ಹಂತ (3 – 5ನೇ ತರಗತಿಗಳು, 8 – 11 ವಯಸ್ಸಿನ ಮಕ್ಕಳು), ಮಾಧ್ಯಮಿಕ ಹಂತ (6 – 8ನೇ ತರಗತಿಗಳು, 11 – 14 ವಯಸ್ಸಿನವರು). ಪ್ರೌಢ ಹಂತಗಳನ್ನು (ಎರಡು ಹಂತಗಳಲ್ಲಿ 9 – 12 ತರಗತಿಗಳು, ಅಂದರೆ ಮೊದಲ ಹಂತವು 9 ಮತ್ತು 10 ಹಾಗೂ ಎರಡನೆಯದರಲ್ಲಿ 11 ಮತ್ತು 12, 14 – 18 ವಯಸ್ಸಿನವರನ್ನು ಒಳಗೊಂಡಿರುತ್ತದೆ) ಒಳಗೊಂಡಿರುತ್ತದೆ.

4.2 ಬುನಾದಿ ಹಂತವು ಐದು ವರ್ಷಗಳ ECCE ನಮ್ಯವಾದ, ಬಹುಹಂತದ, ಆಟ/ಚಟುವಟಿಕೆ ಆಧಾರಿತ ಕಲಿಕೆ ಮತ್ತು ಪಠ್ಯಕ್ರಮ ಹಾಗೂ ಬೋಧನಾ ವಿಧಾನವನ್ನು ಒಳಗೊಂಡಿರುತ್ತದೆ. ಪೂರ್ವ ಸಿದ್ಧತಾ ಹಂತವು ಬುನಾದಿ ಹಂತದ ನಾಟಕ, ಅನ್ವೇಷಣೆ ಮತ್ತು ಚಟುವಟಿಕೆ ಆಧಾರಿತ ಬೋಧನಾ ವಿಧಾನ ಮತ್ತು ಪಠ್ಯಕ್ರಮ ಶೈಲಿಯಲ್ಲಿ ರೂಪಿಸಲಾದ ಮೂರು ವರ್ಷಗಳ ಶಿಕ್ಷಣವನ್ನು ಒಳಗೊಂಡಿರುತ್ತದೆ. ಓದುವುದು, ಬರೆಯುವುದು, ಮಾತನಾಡುವುದು, ದೈಹಿಕ ಶಿಕ್ಷಣ, ಕಲೆ, ಭಾಷೆಗಳು, ವಿಜ್ಞಾನ ಮತ್ತು ಗಣಿತ ಸೇರಿದಂತೆ ದೃಢವಾದ ಬುನಾದಿಯನ್ನು ಒದಗಿಸುವ ದೃಷ್ಟಿಯಿಂದ ಕೆಲವು ಲಘು ಪಠ್ಯ ಪುಸ್ತಕಗಳು ಮತ್ತು ಹೆಚ್ಚು ಔಪಚಾರಿಕ ಆದರೆ, ಸಂವಹನಾತ್ಮಕ ತರಗತಿ ಕಲಿಕೆಯ ಅಂಶಗಳನ್ನು ಈ ಹಂತದಲ್ಲಿ ಸಂಯೋಜಿಸಲಾಗುತ್ತದೆ. ಮಾಧ್ಯಮಿಕ ಹಂತವು ಪೂರ್ವ ಸಿದ್ಧತಾ ಹಂತದ ಬೋಧನಾ ವಿಧಾನ ಮತ್ತು ಪಠ್ಯಕ್ರಮದ ಶೈಲಿಯ ಮೇಲೆ ರೂಪಿಸಲಾದ ಮೂರು ವರ್ಷಗಳ ಶಿಕ್ಷಣವನ್ನು ಒಳಗೊಂಡಿರುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ, ಗಣಿತ, ಕಲೆ, ಸಾಮಾಜಿಕ ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ಹೆಚ್ಚು ಅಮೂರ್ತ ಪರಿಕಲ್ಪನೆಗಳನ್ನು ವಿಷಯ ಶಿಕ್ಷಕರ ಮೂಲಕ ಕಲಿಸಲು ಪ್ರಾರಂಭಿಸಲಾಗುತ್ತದೆ.

ಪ್ರತಿ ವಿಷಯದಲ್ಲಿ ಅನುಭವಾತ್ಮಕ ಕಲಿಕೆ ಮತ್ತು ವಿವಿಧ ವಿಷಯಗಳ ನಡುವಿನ ಸಂಬಂಧಗಳನ್ನು ಪರಿಶೋಧಿಸಲು ಪ್ರೋತ್ಸಾಹಿಸಲಾಗುತ್ತದೆ. ಪ್ರೌಢ ಹಂತವು ಬೋಧನಾಶಾಸ್ತ್ರ ಮತ್ತು ಪಠ್ಯಕ್ರಮ ಶೈಲಿಯ ಮೇಲೆ ರೂಪಿಸಲಾದ ನಾಲ್ಕು ವಿಷಯಗಳ ಬಹು ಅಂಶದ ಅಧ್ಯಯನವನ್ನು ಒಳಗೊಂಡಿರುತ್ತದೆ. ಈ ಹಂತವು ಹೆಚ್ಚಿನ ಆಳ, ಹೆಚ್ಚಿನ ವಿಮರ್ಶಾತ್ಮಕ ಚಿಂತನೆ, ಜೀವನ ಆಕಾಂಕ್ಷೆಗಳಿಗೆ ಹೆಚ್ಚಿನ ಗಮನ, ಹೆಚ್ಚಿನ ನಮ್ಯತೆ ಮತ್ತು ವಿದ್ಯಾರ್ಥಿಗಳ ಆಯ್ಕೆಯ ವಿಷಯಗಳನ್ನು ಒಳಗೊಂಡಿರುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, 10ನೇ ತರಗತಿಯ ನಂತರ ನಿರ್ಗಮಿಸುವ ಆಯ್ಕೆಯನ್ನು ಮತ್ತು ವಿದ್ಯಾರ್ಥಿಗಳು ಬಯಸಿದಲ್ಲಿ, ವಿಶೇಷ ಶಾಲೆಯೂ ಸೇರಿದಂತೆ 11–12 ನೇ ತರಗತಿಯಲ್ಲಿ ಲಭ್ಯವಿರುವ ವೃತ್ತಿಪರ ಅಥವಾ ಇನ್ನಾವುದೇ ಕೋರ್ಸ್‌ಗಳನ್ನು ಮುಂದುವರಿಸಲು

ಮತ್ತು ಮುಂದಿನ ಹಂತದಲ್ಲಿ ಪುನಃ ಪ್ರವೇಶಿಸುವ ಆಯ್ಕೆಯನ್ನೂ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.




4.3 ಮೇಲೆ ವಿವರಿಸಿದ ಹಂತಗಳು ಸಂಪೂರ್ಣವಾಗಿ ಪಠ್ಯಕ್ರಮ ಮತ್ತು ಬೋಧನೆಗೆ ಸೀಮಿತವಾಗಿದ್ದು, ಮಕ್ಕಳ ಜ್ಞಾನಾತ್ಮಕ ಬೆಳವಣಿಗೆಯ ಆಧಾರದ ಮೇಲೆ ವಿದ್ಯಾರ್ಥಿಗಳಲ್ಲಿ ಅತ್ಯುತ್ತಮ ಕಲಿಕೆ ಉಂಟಾಗುವಂತೆ ವಿನ್ಯಾಸಗೊಳಿಸಲಾಗಿದೆ; ಪ್ರತಿ ಹಂತದಲ್ಲಿ ಅನುಸರಿಸಬೇಕಾದ ರಾಷ್ಟ್ರೀಯ ಮತ್ತು ರಾಜ್ಯ ಪಠ್ಯಕ್ರಮ ಅಭಿವೃದ್ಧಿ ಮತ್ತು ಬೋಧನಾ-ಕಲಿಕಾ ಕಾರ್ಯತಂತ್ರಗಳ ಕುರಿತು ಈ ಹಂತಗಳು ವಿವರಣೆ ನೀಡುತ್ತವೆ.

## ಕಲಿಕಾರ್ಥಿಗಳ ಸರ್ವತೋಮುಖ ಬೆಳವಣಿಗೆ

4.4 ಎಲ್ಲಾ ಹಂತಗಳಲ್ಲಿನ ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರದಲ್ಲಿನ ಸುಧಾರಣೆಯ ಪ್ರಮುಖ ಉದ್ದೇಶ, ಶಿಕ್ಷಣ ವ್ಯವಸ್ಥೆಯನ್ನು ನೈಜ ತಿಳಿವಳಿಕೆಯೆಡೆಗೆ ರೂಪಿಸುವುದು, ಕಲಿಯುವುದು ಹೇಗೆ ಎಂಬುದನ್ನು ತಿಳಿಸುವುದು ಹಾಗೂ ಯಾಂತ್ರಿಕ ಕಲಿಕಾ ಪದ್ಧತಿಗಳಿಂದ ದೂರವಿರುವುದು. ಶಿಕ್ಷಣದ ಗುರಿ ಜ್ಞಾನಾತ್ಮಕ ಬೆಳವಣಿಗೆಯಷ್ಟೇ ಅಲ್ಲ, ಚಾರಿತ್ರ್ಯ ನಿರ್ಮಾಣ ಮತ್ತು 21ನೇ ಶತಮಾನದ ಪ್ರಮುಖ ಕೌಶಲಗಳನ್ನು ರೂಢಿಸಿಕೊಂಡಿರುವ ಸಂಪೂರ್ಣ ಮತ್ತು ಸರ್ವತೋಮುಖ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಗಳನ್ನು ರೂಪಿಸುವುದಾಗಿದೆ.

ಈ ನಿರ್ಣಾಯಕ ಗುರಿಗಳನ್ನು ಸಾಧಿಸಲು ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರದ ಎಲ್ಲಾ ಅಂಶಗಳನ್ನು ಮರು ಹೊಂದಾಣಿಕೆ ಮಾಡಲಾಗುತ್ತದೆ ಹಾಗೂ ಪರಿಷ್ಕರಿಸಲಾಗುತ್ತದೆ. ಶಾಲಾ ಪೂರ್ವ ಹಂತದಿಂದ ಉನ್ನತ ಶಿಕ್ಷಣದವರೆಗೆ ಕಲಿಕೆಯ ಪ್ರತಿ ಹಂತದಲ್ಲೂ ಅಳವಡಿಸಲು ನಿರ್ದಿಷ್ಟ ಕೌಶಲ ಮತ್ತು ಮೌಲ್ಯಗಳನ್ನು ಗುರುತಿಸಲಾಗುತ್ತದೆ. ಬೋಧನೆ ಮತ್ತು ಕಲಿಕೆಯ ಸಹಭಾಗಿತ್ವ ಪ್ರಕ್ರಿಯೆಗಳ ಮೂಲಕ ಈ ಕೌಶಲಗಳು ಮತ್ತು ಮೌಲ್ಯಗಳನ್ನು ಬೆಳೆಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಪಠ್ಯಕ್ರಮದ ಚೌಕಟ್ಟು ಮತ್ತು ಬೋಧನಾ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಪೂರ್ವ ಬಾಲ್ಯಾವಸ್ಥೆ ಮತ್ತು ಶಾಲಾ ಶಿಕ್ಷಣಕ್ಕಾಗಿ ಅಗತ್ಯವಿರುವ ಕೌಶಲಗಳನ್ನು NCERT ಗುರುತಿಸಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ಅವುಗಳ ಬೋಧನೆಗೆ ಸೂಕ್ತ ಕಾರ್ಯವಿಧಾನಗಳನ್ನು ಸೇರ್ಪಡೆ ಮಾಡುತ್ತದೆ.

## ಅಗತ್ಯ ಕಲಿಕೆ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಹೆಚ್ಚಿಸಲು ಪಠ್ಯಕ್ರಮದ ವಿಷಯವನ್ನು ಕಡಿಮೆ ಮಾಡುವುದು

4.5 ವಿಮರ್ಶಾತ್ಮಕ ಚಿಂತನೆ, ಸಮಗ್ರ ವಿಚಾರಣಾ-ಆಧಾರಿತ, ಆವಿಷ್ಕಾರ-ಆಧಾರಿತ, ಚರ್ಚಾ-ಆಧಾರಿತ ಮತ್ತು ವಿಶ್ಲೇಷಣೆ-ಆಧಾರಿತ ಕಲಿಕೆಗೆ ಅವಕಾಶ ಕಲ್ಪಿಸಲು ಪ್ರತಿ ವಿಷಯದಲ್ಲೂ ಪಠ್ಯಕ್ರಮದ ವಿಷಯವನ್ನು ಅದರಲ್ಲಿನ ಪ್ರಮುಖ ಅಂಶಗಳಿಗೆ ಸೀಮಿತಗೊಳಿಸಿ, ಕಡಿಮೆ ಮಾಡಲಾಗುತ್ತದೆ. ಪ್ರತಿ ವಿಷಯವು ಪ್ರಮುಖ ಪರಿಕಲ್ಪನೆಗಳು, ಚಿಂತನೆಗಳು, ಅನ್ವಯಿಕಗಳು ಮತ್ತು ಸಮಸ್ಯಾ ಪರಿಹಾರದ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಬೋಧನೆ ಮತ್ತು ಕಲಿಕೆಯನ್ನು ಹೆಚ್ಚು ಸಂವಹನಾತ್ಮಕವಾಗಿ ನಡೆಸಲಾಗುವುದು. ಪ್ರಶ್ನೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ವಿದ್ಯಾರ್ಥಿಗಳಲ್ಲಿ ಆಳವಾದ ಮತ್ತು ಹೆಚ್ಚು ಅನುಭವದ ಕಲಿಕೆಗಾಗಿ ತರಗತಿಯ ಅವಧಿಗಳು ಹೆಚ್ಚು ಆಹ್ಲಾದಕರ, ಸೃಜನಶೀಲ, ಸಹಕಾರಿ ಮತ್ತು ಪರಿಶೋಧನಾ ಚಟುವಟಿಕೆಗಳನ್ನು ಒಳಗೊಂಡಿರುತ್ತವೆ.

## ಅನುಭವಾತ್ಮಕ ಕಲಿಕೆ

4.6 ಎಲ್ಲಾ ಹಂತಗಳಲ್ಲಿಯೂ, ವಿಷಯದ ಪ್ರಮಾಣಿತ ಬೋಧನಾ ವಿಧಾನವಾಗಿ ಮತ್ತು ವಿವಿಧ ವಿಷಯಗಳ ನಡುವಿನ ಸಂಬಂಧಗಳ ಪರಿಶೋಧನೆಯೊಂದಿಗೆ ಕಲಿಕೆ, ಕಲೆ-ಸಂಯೋಜಿತ ಮತ್ತು ಕ್ರೀಡಾ-ಸಂಯೋಜಿತ ಶಿಕ್ಷಣ, ಕಥೆ ಹೇಳುವಿಕೆ ಇತ್ಯಾದಿಗಳನ್ನು ಆಧರಿಸಿದ ಅನುಭವಾತ್ಮಕ ಕಲಿಕೆಯನ್ನು ಅಳವಡಿಸಿಕೊಳ್ಳಲಾಗುವುದು. ಕಲಿಕಾ ಫಲಗಳ ಸಾಧನೆಯಲ್ಲಿನ

ಅಂತರವನ್ನು ಕಡಿಮೆ ಮಾಡಲು ತರಗತಿಯ ಪ್ರಕ್ರಿಯೆಗಳು ಮತ್ತು ಸಾಮರ್ಥ್ಯ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲಾಗುವುದು. ಪ್ರತಿ ವಿಷಯಕ್ಕೆ ಸಂಬಂಧಿಸಿದ ಕಲಿಕಾ ಫಲಗಳು ಮತ್ತು ಮೌಲ್ಯಮಾಪನ ಪರಿಕರಗಳನ್ನು ('ಕಲಿಕೆಯಾಗಿ ಮೌಲ್ಯಮಾಪನ", "ಕಲಿಕೆಯ ಮೌಲ್ಯಮಾಪನ", ಕಲಿಕೆಗಾಗಿ ಮೌಲ್ಯಮಾಪನ", ಸೇರಿದಂತೆ) ಸಾಮರ್ಥ್ಯಗಳನ್ನು ಆಧರಿಸಿ ಹೊಂದಿಸಲಾಗುವುದು.

**ಚಿಂತನಾಶೀಲ ಪ್ರಶ್ನೆಗಳು**

1. ತರಗತಿಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಕುರಿತು ನಿಮ್ಮ ಅಭಿಪ್ರಾಯವೇನು?
2. ಪಠ್ಯಪುಸ್ತಕಗಳನ್ನು ಮೀರಿದ ಬೋಧನಾ ಅನುಭವದಲ್ಲಿ ಮಕ್ಕಳು ಹೇಗೆ ಕಲಿಯುವರು?
3. ವಿಮರ್ಶಾತ್ಮಕ ಚಿಂತನಾ ಕ್ರಮಗಳನ್ನು ಕಲಿಕಾ ಪ್ರಕ್ರಿಯೆಗಳಲ್ಲಿ ಹೇಗೆ ಬಳಸಿಕೊಳ್ಳುವಿರಿ?

ಚರ್ಚಿಸುವ ಅಂಶಗಳು: ಎನ್.ಇ..ಪಿ 2020 ಬೋಧನಾ ಮಾಧ್ಯಮದಿಂದ ಉದ್ಭವಿಸುವ ಸರ್ವಸಮ್ಮತ (equity) ಸಮಸ್ಯೆಯನ್ನು ಸಮರ್ಪಕವಾಗಿ ನಿಭಾಯಿಸುತ್ತದೆಯೇ?

4.7 ಕಲಾ ಸಮ್ಮಿಳಿತ ಶಿಕ್ಷಣವು ವಿವಿಧ ವಿಷಯಗಳಲ್ಲಿನ ಪಠ್ಯಾಂಶಗಳ ಬೋಧನಾ ಕ್ರಮವಾಗಿದೆ. ಎಲ್ಲಾ ವಿಷಯಗಳಲ್ಲಿನ ಪರಿಕಲ್ಪನೆಗಳನ್ನು ಕಲಿಯಲು ಇದು ಕಲೆ ಮತ್ತು ಸಂಸ್ಕೃತಿಯ ವಿವಿಧ ಅಂಶಗಳನ್ನು ಮತ್ತು ಸ್ವರೂಪಗಳನ್ನು ಆಧಾರವಾಗಿ ಬಳಸಿಕೊಳ್ಳುತ್ತದೆ. ಅನುಭವಾತ್ಮಕ ಕಲಿಕೆಯ ಒಂದು ಭಾಗವಾಗಿ, ಪ್ರತಿ ಹಂತದಲ್ಲೂ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಜೋಡಿಸುವ ಮೂಲಕ ಕಲಾ-ಸಂಯೋಜಿತ ಶಿಕ್ಷಣವು ತರಗತಿಯ ಪ್ರಕ್ರಿಯೆಯಲ್ಲಿ ಸಂತೋಷದಾಯಕ ಚಟುವಟಿಕೆಗಳನ್ನು ಒದಗಿಸುವುದಲ್ಲದೆ, ಭಾರತೀಯ ತತ್ತ್ವಗಳನ್ನು ಅಳವಡಿಸಿಕೊಳ್ಳುವುದಕ್ಕೂ ಸಹಕಾರಿಯಾಗುತ್ತದೆ. ಈ ಕಲಾ-ಸಂಯೋಜಿತ ಕ್ರಮವು ಶಿಕ್ಷಣ ಮತ್ತು ಸಂಸ್ಕೃತಿಯ ನಡುವಿನ ಸಂಪರ್ಕವನ್ನು ಬಲಪಡಿಸುತ್ತದೆ.

4.8 ಕ್ರೀಡಾ ಸಂಯೋಜನೆಯು ಮತ್ತೊಂದು ವಿಧಾನವಾಗಿದೆ. ಇದರಲ್ಲಿ ಸಹಯೋಗ, ಸ್ವ-ಉಪಕ್ರಮ, ಸ್ವ-ನಿರ್ದೇಶನ ಸ್ವಯಂ-ಶಿಸ್ತು, ತಂಡದ ಕಾರ್ಯ, ಜವಾಬ್ದಾರಿ, ಪೌರತ್ವ ಇತ್ಯಾದಿ ಕೌಶಲಗಳನ್ನು ಬೆಳೆಸಲು, ಸ್ಥಳೀಯ ಕ್ರೀಡೆಗಳು ಸೇರಿದಂತೆ ಇತರ ದೈಹಿಕ ಚಟುವಟಿಕೆಗಳನ್ನು ಅಳವಡಿಸಲಾಗುವುದು. ವಿದ್ಯಾರ್ಥಿಗಳು ತಮ್ಮ ದೈಹಿಕ ದೃಢತೆಯನ್ನು ಜೀವನಪರ್ಯಂತ ಅಳವಡಿಸಿಕೊಳ್ಳಲು ಮತ್ತು 'ಫಿಟ್ ಇಂಡಿಯಾ' ಆಂದೋಲನದಲ್ಲಿ ಹೇಳಲಾದ ದೈಹಿಕ ದೃಢತೆಯ ಹಂತಗಳ ಜೊತೆಗೆ ಜೀವನ ಕೌಶಲಗಳ ಸಾಧನೆಗೆ ಸಹಾಯ ಮಾಡಲು, ತರಗತಿ ಬೋಧನೆಯಲ್ಲಿ ಕ್ರೀಡಾ-ಸಂಯೋಜಿತ ಕಲಿಕೆಯನ್ನು ಪ್ರೋತ್ಸಾಹಿಸಲಾಗುವುದು. ಜ್ಞಾನಾತ್ಮಕ ಸಾಮರ್ಥ್ಯಗಳನ್ನು ಹೆಚ್ಚಿಸುವುದರೊಂದಿಗೆ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಉತ್ತೇಜಿಸುವ ಮೂಲಕ ಸಮಗ್ರ ವಿಕಾಸವನ್ನು ಸಾಧಿಸಲಾಗುವುದು

ವಿದ್ಯಾರ್ಥಿಗಳಿಗೆ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದು

4.9 ವಿದ್ಯಾರ್ಥಿಗಳಿಗೆ, ಅದರಲ್ಲೂ ನಿರ್ದಿಷ್ಟವಾಗಿ ಮಾಧ್ಯಮಿಕ ಹಂತದಲ್ಲಿ ದೈಹಿಕ ಶಿಕ್ಷಣ, ಕಲೆ ಮತ್ತು ಕರಕೌಶಲ ಹಾಗೂ ವೃತ್ತಿಪರ ಕೌಶಲಗಳನ್ನು ಒಳಗೊಂಡಂತೆ, ನಮ್ಯತೆ ಮತ್ತು ಅಧ್ಯಯನಕ್ಕಾಗಿ ವಿಷಯಗಳ ಆಯ್ಕೆಯನ್ನು ನೀಡಲಾಗುವುದು. ಇದರಿಂದ ಅವರು ತಮ್ಮದೇ ಅಧ್ಯಯನ ಮಾರ್ಗಗಳು ಮತ್ತು ಯೋಜನೆಗಳನ್ನು ರೂಪಿಸಿಕೊಳ್ಳಬಹುದು. ವರ್ಷದಿಂದ ವರ್ಷಕ್ಕೆ ಸಮಗ್ರ ಅಭಿವೃದ್ಧಿ ಮತ್ತು ವ್ಯಾಪಕವಾದ ವಿಷಯಗಳು ಮತ್ತು ಕೋರ್ಸ್‌ಗಳ ಪರಿಚಯ ಮಾಡುವುದು ಮಾಧ್ಯಮಿಕ ಶಾಲಾ ಶಿಕ್ಷಣದ ಹೊಸ ವಿಶಿಷ್ಟ ಲಕ್ಷಣವಾಗಿದೆ. 'ಪಠ್ಯ', 'ಪಠ್ಯೇತರ' ಅಥವಾ 'ಸಹ-ಪಠ್ಯಕ್ರಮ'ಗಳ ನಡುವೆ, 'ಕಲೆಗಳು', ಮಾನವಿಕ ವಿಷಯಗಳು' ಮತ್ತು 'ವಿಜ್ಞಾನಗಳ' ನಡುವೆ ಅಥವಾ 'ವೃತ್ತಿಪರ' ಅಥವಾ 'ಶೈಕ್ಷಣಿಕ' ವಿಭಾಗಗಳ ನಡುವೆ ಬಿಗಿಯಾದ ಪ್ರತ್ಯೇಕತೆ ಇರುವುದಿಲ್ಲ. ಪ್ರತಿ ವಯಸ್ಸಿಗೆ ಸೂಕ್ತವಾದ ಆಸಕ್ತಿದಾಯಕ ಮತ್ತು ಸುರಕ್ಷಿತ ಅಂಶಗಳನ್ನು ಪರಿಗಣಿಸುತ್ತಾ ವಿಜ್ಞಾನ, ಮಾನವಿಕ ವಿಷಯಗಳು ಮತ್ತು ಗಣಿತಶಾಸ್ತ್ರದ ಜೊತೆಗೆ ದೈಹಿಕ ಶಿಕ್ಷಣ, ಕಲೆ ಮತ್ತು ಕರಕೌಶಲ್ಯ ವಸ್ತುಗಳು ಹಾಗೂ ವೃತ್ತಿಪರ ಕೌಶಲಗಳನ್ನು ಶಾಲಾ ಪಠ್ಯಕ್ರಮದಲ್ಲಿ ಸಂಯೋಜಿಸಲಾಗುವುದು.

4.10. ಶಾಲಾ ಶಿಕ್ಷಣದ ನಾಲ್ಕು ಹಂತಗಳಲ್ಲಿ ಪ್ರತಿ ಹಂತವನ್ನು ವಿವಿಧ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಹೇಗೆ ಸಾಧ್ಯವಾಗುತ್ತದೆಯೋ ಅದಕ್ಕೆ ಅನುಗುಣವಾಗಿ, ವಿಷಯಗಳ ಅನುಭವ ಮತ್ತು ನಮ್ಯತೆಯನ್ನು ಒದಗಿಸಲಾಗುವುದು. ಇದಕ್ಕಾಗಿ ಮುಂದಿನ ದಿನಗಳಲ್ಲಿ ಕಲಿಸಬಹುದಾದ ಚಿಕ್ಕ ಮಾಡ್ಯೂಲ್ ಅಥವಾ ಕೋರ್ಸ್‌ಗಳನ್ನು ಒದಗಿಸಲಾಗುವುದು. ಕಲೆಗಳು, ವಿಜ್ಞಾನಗಳು, ಮಾನವಿಕ ವಿಷಯಗಳು, ಭಾಷೆಗಳು, ಕ್ರೀಡೆಗಳು ಮತ್ತು ವೃತ್ತಿಪರ ವಿಷಯಗಳು ಸೇರಿದಂತೆ ವಿವಿಧ ವಿಷಯಗಳಿಗೆ ಹೆಚ್ಚಿನ ನಮ್ಯತೆ ಮತ್ತು ಅನುಭವ ಒದಗಿಸಲು ಮತ್ತು ಆ ವಿಷಯಗಳನ್ನು ಉಲ್ಲಾಸಿತವಾಗಿ ಕಲಿಯುವ ಗುರಿಗಳನ್ನು ಸಾಧಿಸಲು ರಾಜ್ಯಗಳು ನವೀನ ವಿಧಾನಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.

## ಬಹುಭಾಷೀಯತೆ ಮತ್ತು ಭಾಷೆಯ ಶಕ್ತಿ

4.11. ಚಿಕ್ಕ ಮಕ್ಕಳು ಸಣ್ಣ ಸಣ್ಣ ಪರಿಕಲ್ಪನೆಗಳನ್ನು ತಮ್ಮ ಮಾತೃಭಾಷೆಯಲ್ಲಿ / ಮನೆಯ ಭಾಷೆಯಲ್ಲಿ ತ್ವರಿತವಾಗಿ ಕಲಿಯುತ್ತಾರೆ ಮತ್ತು ಗ್ರಹಿಸುತ್ತಾರೆ. ಮನೆ ಭಾಷೆ ಸಾಮಾನ್ಯವಾಗಿ ಮಾತೃಭಾಷೆಯಾಗಿರುತ್ತದೆ ಅಥವಾ ಸ್ಥಳೀಯ ಸಮುದಾಯಗಳು ಮಾತನಾಡುವ ಭಾಷೆಯಾಗಿರುತ್ತದೆ. ಆದಾಗ್ಯೂ, ಬಹುಭಾಷಾ ಕುಟುಂಬಗಳಲ್ಲಿ ಕೆಲವೊಮ್ಮೆ, ಕುಟುಂಬದ ಇತರ ಸದಸ್ಯರು ಮಾತನಾಡುವ ಮಾತೃಭಾಷೆ ಸ್ಥಳೀಯ ಭಾಷೆಯಿಂದ ಭಿನ್ನವಾಗಿರಬಹುದು. ಸಾಧ್ಯವಾದಲ್ಲೆಲ್ಲಾ, ಕನಿಷ್ಠ 5ನೇ ತರಗತಿಯವರೆಗೆ, (8ನೇ ತರಗತಿಯವರೆಗೆ ಮತ್ತು ನಂತರದ ಹಂತಗಳವರೆಗೆ ಮಾಡಿದರೆ ಉತ್ತಮ) ಬೋಧನಾ ಮಾಧ್ಯಮವು ಮನೆ ಭಾಷೆ / ಮಾತೃಭಾಷೆ / ಸ್ಥಳೀಯ ಭಾಷೆ / ಪ್ರಾದೇಶಿಕ ಭಾಷೆಯಾಗಿರುತ್ತದೆ. ನಂತರ, ಮನೆ / ಸ್ಥಳೀಯ ಭಾಷೆಯನ್ನು ಸಾಧ್ಯವಾದಲ್ಲೆಲ್ಲಾ ಒಂದು ಭಾಷೆಯಾಗಿ ಕಲಿಸಲಾಗುತ್ತದೆ. ಸರ್ಕಾರಿ ಮತ್ತು ಖಾಸಗಿ ಶಾಲೆಗಳೂ ಈ ಕ್ರಮವನ್ನು ಅನುಸರಿಸಲಿವೆ. ವಿಜ್ಞಾನ ಸೇರಿದಂತೆ ಎಲ್ಲಾ ವಿಷಯಗಳ ಉನ್ನತ-ಗುಣಮಟ್ಟದ ಪಠ್ಯಪುಸ್ತಕಗಳನ್ನು ಮನೆ ಭಾಷೆಗಳಲ್ಲಿ / ಮಾತೃಭಾಷೆಯಲ್ಲಿ ಒದಗಿಸಲಾಗುವುದು. ಮಗು ಮಾತನಾಡುವ ಭಾಷೆ ಮತ್ತು ಬೋಧನಾ ಮಾಧ್ಯಮದ ನಡುವೆ ಯಾವುದೇ ಅಂತರವಿಲ್ಲದಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಗುವುದು. ಮನೆ ಭಾಷೆ / ಮಾತೃಭಾಷೆಯ ಪಠ್ಯಪುಸ್ತಕಗಳು ಲಭ್ಯವಿಲ್ಲದ ಸಂದರ್ಭಗಳಲ್ಲಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನದ ಭಾಷೆ ಸಾಧ್ಯವಾದಲ್ಲೆಲ್ಲಾ ಮಾತೃಬಾಷೆಯಾಗಿಯೇ ಇರುತ್ತದೆ. ಬೋಧನಾ ಮಾಧ್ಯಮಕ್ಕಿಂತ ಭಿನ್ನವಾಗಿರುವ ಮನೆ ಭಾಷೆ ಇರುವ ವಿದ್ಯಾರ್ಥಿಗಳಿಗೆ ದ್ವಿಭಾಷಾ ಬೋಧನಾ-ಕಲಿಕಾ ಸಾಮಗ್ರಿಗಳು ಸೇರಿದಂತೆ ದ್ವಿಭಾಷಾ ವಿಧಾನವನ್ನು ಪ್ರೋತ್ಸಾಹಿಸಲಾಗುತ್ತದೆ. ಎಲ್ಲಾ ಭಾಷೆಗಳನ್ನು ಉತ್ತಮ ಗುಣಮಟ್ಟದೊಂದಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ.

4.12 2 ರಿಂದ 8 ವರ್ಷದೊಳಗಿನ ಮಕ್ಕಳು ಭಾಷೆಗಳನ್ನು ತ್ವರಿತವಾಗಿ ಕಲಿಯುತ್ತಾರೆ. ಬಹುಭಾಷಾ ಸಿದ್ಧಾಂತವು ಯುವ ವಿದ್ಯಾರ್ಥಿಗಳಿಗೆ ಉತ್ತಮ ಜ್ಞಾನಾತ್ಮಕ ಪ್ರಯೋಜನೆಗಳನ್ನು ಒದಗಿಸುತ್ತದೆ ಎಂಬುದನ್ನು ಸಂಶೋಧನೆಗಳು ತಿಳಿಸಿವೆ. ಬುನಾದಿ ಹಂತದಿಂದಲೇ ಮಕ್ಕಳಿಗೆ ವಿವಿಧ ಭಾಷೆಗಳನ್ನು ಪರಿಚಯಿಸಲಾಗುತ್ತದೆ. (ಮಾತೃಭಾಷೆಗೆ ನಿರ್ದಿಷ್ಟ ಮಹತ್ವ ನೀಡಲಾಗುತ್ತದೆ). 3ನೇ ತರಗತಿ ಮತ್ತು ನಂತರದಲ್ಲಿ, ಹಾಗೂ ಆರಂಭಿಕ ವರ್ಷಗಳಲ್ಲಿ ಮಾತೃಭಾಷೆಯಲ್ಲಿ ಓದುವುದನ್ನು ಮತ್ತು ನಂತರ ಬರೆಯುವುದನ್ನು ಕಲಿಸಲಾಗುತ್ತದೆ. ಇತರ ಭಾಷೆಗಳಲ್ಲಿ ಓದು ಮತ್ತು ಬರೆಹವನ್ನು ಸಂವಹನಾತ್ಮಕ ಶೈಲಿಯಲ್ಲಿ ಕಲಿಸಲಾಗುತ್ತದೆ. ದೇಶದ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಮತ್ತು ನಿರ್ದಿಷ್ಟವಾಗಿ ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಉಲ್ಲೇಖಿಸಲಾದ ಎಲ್ಲಾ ಭಾಷೆಗಳಲ್ಲಿ ಹೆಚ್ಚಿನ ಸಂಖ್ಯೆಯ ಭಾಷಾ ಶಿಕ್ಷಕರನ್ನು ನೇಮಕ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಮುಖ ಪ್ರಯತ್ನಗಳನ್ನು ಮಾಡಲಿವೆ. ಎಲ್ಲಾ ರಾಜ್ಯಗಳು, ವಿಶೇಷವಾಗಿ ಭಾರತದ ವಿವಿಧ ಪ್ರದೇಶಗಳ ರಾಜ್ಯಗಳು, ಪರಸ್ಪರ ಹೆಚ್ಚಿನ ಸಂಖ್ಯೆಯಲ್ಲಿ ಬೇರೆ ಭಾಷೆಯ ಶಿಕ್ಷಕರನ್ನು ನೇಮಿಸಿಕೊಳ್ಳಬಹುದು. ಇದಕ್ಕಾಗಿ ಆಯಾ ರಾಜ್ಯಗಳಲ್ಲಿ ತ್ರಿ-ಭಾಷಾ ಸೂತ್ರವನ್ನು ಅನುಸರಿಸಲು ಮತ್ತು ದೇಶಾದ್ಯಂತ ಭಾರತೀಯ ಭಾಷೆಗಳ ಅಧ್ಯಯನವನ್ನು ಉತ್ತೇಜಿಸಲು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ಇದಕ್ಕಾಗಿ ತಂತ್ರಜ್ಞಾನದ ವ್ಯಾಪಕ ಬಳಕೆಯನ್ನು ಮಾಡಲಾಗುವುದು.

4.13 ಸಾಂವಿಧಾನಿಕ ನಿಬಂಧನೆಗಳು, ಜನರು, ಪ್ರದೇಶಗಳು, ಒಕ್ಕೂಟದ ಆಕಾಂಕ್ಷೆಗಳು ಮತ್ತು ಬಹುಭಾಷಾ ಸಿದ್ಧಾಂತವನ್ನು ಉತ್ತೇಜಿಸುವ ಜೊತೆಗೆ ರಾಷ್ಟ್ರೀಯ ಏಕತೆಯನ್ನು ಉತ್ತೇಜಿಸುವ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ತ್ರಿ-ಭಾಷಾ ಸೂತ್ರವನ್ನು ಜಾರಿಗೆ ತರಲಾಗುವುದು. ಆದಾಗ್ಯೂ, ತ್ರಿ-ಭಾಷಾ ಸೂತ್ರದಲ್ಲಿ ಹೆಚ್ಚಿನ ನಮ್ಯತೆ ಇರುತ್ತದೆ ಮತ್ತು ಯಾವುದೇ ರಾಜ್ಯದ ಮೇಲೆ ಯಾವುದೇ ಭಾಷೆಯನ್ನು ಒತ್ತಾಯಪೂರ್ವಕವಾಗಿ ಹೇರಲಾಗುವುದಿಲ್ಲ. ಮೂರು ಭಾಷೆಗಳಲ್ಲಿ ಕನಿಷ್ಠ ಎರಡು ಭಾಷೆಗಳು ಭಾರತದ ಸ್ಥಳೀಯ ಭಾಷೆಗಳಾಗಿರುವಂತೆ, ಕಲಿಯುವ ಮೂರು ಭಾಷೆಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಮಾಧ್ಯಮಿಕ ಶಾಲೆಯ ಕೊನೆಯಲ್ಲಿ ವಿದ್ಯಾರ್ಥಿಗಳೂ ಮೂರೂ ಭಾಷೆಗಳಲ್ಲಿ ಮೂಲ ಪ್ರಾವೀಣ್ಯತೆಯನ್ನು ಪ್ರದರ್ಶಿಸಲು ಸಾಧ್ಯವಿರುವವರೆಗೆ, (ಸಾಹಿತ್ಯ ಹಂತದಲ್ಲಿ ಭಾರತದ ಒಂದು ಭಾಷೆ ಸೇರಿದಂತೆ) ಅವರು ಇಚ್ಛಿಸಿದ್ದಲ್ಲಿ 6 ಅಥವಾ 7ನೇ ತರಗತಿಯಲ್ಲಿ ತಾವು ಕಲಿಯುತ್ತಿರುವ ಮೂರು ಭಾಷೆಗಳಲ್ಲಿ ಒಂದು ಅಥವಾ ಹೆಚ್ಚಿನದನ್ನು ಬದಲಾಯಿಸಬಹುದಾಗಿದೆ.

4.14 ಉನ್ನತ ಗುಣಮಟ್ಟದ ದ್ವಿಭಾಷಾ ಪಠ್ಯಪುಸ್ತಕಗಳು ಮತ್ತು ವಿಜ್ಞಾನ ಮತ್ತು ಗಣಿತದಲ್ಲಿ ಬೋಧನಾ-ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಇದರಿಂದಾಗಿ ವಿದ್ಯಾರ್ಥಿಗಳು ಎರಡೂ ವಿಷಯಗಳ ಬಗ್ಗೆ ತಮ್ಮ ಮಾತೃಭಾಷೆ ಮತ್ತು ಇಂಗ್ಲಿಷ್‌ನಲ್ಲಿ ಯೋಚಿಸಲು ಮತ್ತು ಮಾತನಾಡಲು ಸಾಧ್ಯವಾಗುತ್ತದೆ.

4.15 ವಿಶ್ವಾದ್ಯಂತ ಅನೇಕ ಅಭಿವೃದ್ಧಿ ಹೊಂದಿದ ದೇಶಗಳ ಅನುಭವಗಳನ್ನು ಗಮನಿಸಿದಾಗ, ತಮ್ಮ ಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯಗಳ ಶಿಕ್ಷಣ ಪಡೆಯುವುದರಿಂದ, ಯಾವುದೇ ಹಾನಿಯಿಲ್ಲದೆ ಶೈಕ್ಷಣಿಕ, ಸಾಮಾಜಿಕ ಮತ್ತು ತಾಂತ್ರಿಕ ಪ್ರಗತಿಗೆ ಸಾಕಷ್ಟು ಪ್ರಯೋಜನವಾಗಿರುವುದು ಕಂಡುಬಂದಿದೆ. ಭಾರತದ ರಾಷ್ಟ್ರೀಯ ವಿಶಿಷ್ಟ ಗುರುತು ಮತ್ತು ಸಂಪತ್ತನ್ನು ರೂಪಿಸಲು ಸಹಾಯ ಮಾಡುವ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯ (ಗದ್ಯ ಮತ್ತು ಕವನ ಎರಡೂ), ಚಲನಚಿತ್ರ ಮತ್ತು ಸಂಗೀತದೊಂದಿಗೆ ಭಾರತದ ಭಾಷೆಗಳು ವಿಶ್ವದ ಅತ್ಯಂತ ಶ್ರೀಮಂತ, ಅತ್ಯಂತ ವೈಜ್ಞಾನಿಕ, ಅತ್ಯಂತ ಸುಂದರವಾದ ಮತ್ತು ಹೆಚ್ಚು ಅಭಿವ್ಯಕ್ತಿಶೀಲ ಭಾಷೆಗಳಾಗಿವೆ.

ಸಾಂಸ್ಕೃತಿಕ ಪುಷ್ಟೀಕರಣ ಮತ್ತು ರಾಷ್ಟ್ರೀಯ ಭಾವೈಕ್ಯತೆಯ ಉದ್ದೇಶಗಳಿಗಾಗಿ, ಎಲ್ಲಾ ಯುವ ಭಾರತೀಯರು ತಮ್ಮ ದೇಶದ ಶ್ರೀಮಂತ ಮತ್ತು ವಿಶಾಲವಾದ ಭಾಷೆಗಳ ಬಗ್ಗೆ ಮತ್ತು ಆ ಭಾಷೆಗಳು ಒಳಗೊಂಡಿರುವ ಸಾಹಿತ್ಯ ಸಂಪತ್ತಿನ ಬಗ್ಗೆ ತಿಳಿದಿರಬೇಕು.

4.16 ಹೀಗಾಗಿ, ದೇಶದ ಪ್ರತಿ ವಿದ್ಯಾರ್ಥಿ 6 ರಿಂದ 8ನೇ ತರಗತಿಯಲ್ಲಿರುವಾಗ ಯಾವಾಗಲಾದರೂ ಒಮ್ಮೆ 'ಭಾರತೀಯ ಭಾಷೆ' ಗಳ ಮೋಜಿನ ಯೋಜನೆ / ಚಟುವಟಿಕೆಯಲ್ಲಿ ಭಾಗವಹಿಸುತ್ತಾನೆ/ಳೆ. ಉದಾಹರಣೆಗೆ, 'ಏಕ್ ಭಾರತ್ ಶ್ರೇಷ್ಠ ಭಾರತ್' ಉಪಕ್ರಮದಡಿಯಲ್ಲಿ ಇದನ್ನು ಆಯೋಜಿಸಬಹುದು. ಈ ಯೋಜನೆ/ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು, ಸಾಮಾನ್ಯ ಉಚ್ಚಾರಣೆ ಮತ್ತು ವೈಜ್ಞಾನಿಕವಾಗಿ ಜೋಡಿಸಲಾದ ವರ್ಣಮಾಲೆಗಳು ಮತ್ತು ಲಿಪಿಗಳು, ಅವುಗಳ ಸಾಮಾನ್ಯ ವ್ಯಾಕರಣ ರಚನೆಗಳು, ಸಂಸ್ಕೃತಿ ಮತ್ತು ಇತರ ಶಾಸ್ತ್ರೀಯ ಶಬ್ದಕೋಶಗಳ ಸಹಾಯದಿಂದ ಭಾಷೆಗಳ ಮೂಲವನ್ನು ತಿಳಿಯುತ್ತಾರೆ. ಜೊತೆಗೆ ಅವುಗಳ ಶ್ರೀಮಂತವಾದ ಅಂತರ್–ಪ್ರಭಾವಗಳು ಮತ್ತು ವ್ಯತ್ಯಾಸಗಳಿಂದ ಆರಂಭಿಸಿ, ಪ್ರಮುಖ ಭಾರತೀಯ ಭಾಷೆಗಳ ಗಮನಾರ್ಹವಾದ ಏಕತೆಯ ಬಗ್ಗೆ ಕಲಿಯುತ್ತಾರೆ.

ಅಲ್ಲದೇ, ಯಾವ ಭೌಗೋಳಿಕ ಪ್ರದೇಶಗಳಲ್ಲಿ ಯಾವ ಭಾಷೆಗಳನ್ನು ಮಾತನಾಡಲಾಗುತ್ತದೆ ಎಂಬುದನ್ನು ಕಲಿಯುತ್ತಾರೆ. ಬುಡಕಟ್ಟು ಭಾಷೆಗಳ ಸ್ವರೂಪ ಮತ್ತು ರಚನೆಯ ಅರಿವನ್ನು ಪಡೆದುಕೊಳ್ಳುತ್ತಾರೆ. ಭಾರತದ ಪ್ರತಿಯೊಂದು ಪ್ರಮುಖ ಭಾಷೆಯಲ್ಲಿ ಸಾಮಾನ್ಯವಾಗಿ ಮಾತನಾಡುವ ನುಡಿಗಟ್ಟುಗಳು ಮತ್ತು ವಾಕ್ಯಗಳನ್ನು ಹೇಳಲು ಕಲಿಯುತ್ತಾರೆ ಮತ್ತು ಪ್ರತಿ ಶ್ರೀಮಂತ ಸಾಹಿತ್ಯದ ಬಗ್ಗೆ ಸ್ವಲ್ಪ ಕಲಿಯುತ್ತಾರೆ. ಅಂತಹ ಚಟುವಟಿಕೆಯು ವಿದ್ಯಾರ್ಥಿಗಳಿಗೆ ಐಕ್ಯತೆ ಮತ್ತು ಸುಂದರವಾದ ಸಾಂಸ್ಕೃತಿಕ ಪರಂಪರೆ ಹಾಗೂ ಭಾರತದ ವೈವಿಧ್ಯತೆಯ ಬಗ್ಗೆ ಪ್ರಜ್ಞೆಯನ್ನು ಮೂಡಿಸುತ್ತದೆ ಹಾಗೂ ಅವರು ಮುಂದಿನ ದಿನಗಳಲ್ಲಿ ಭಾರತದ ಇತರ ಭಾಗಗಳ ಜನರನ್ನು ಭೇಟಿಯಾಗುವುದರಿಂದ, ಅವರ ಜೀವನದುದ್ದಕ್ಕೂ ಜನರೊಂದಿಗೆ ಸಂವಹನ ಮಾಡುವಾಗ ಈ ಜ್ಞಾನ ಸಹಾಯಕವಾಗುತ್ತದೆ. ಈ ಯೋಜನೆ / ಚಟುವಟಿಕೆಯು ಸಂತೋಷದಾಯಕ ಚಟುವಟಿಕೆಯಾಗಿರುತ್ತದೆ ಮತ್ತು ಯಾವುದೇ ರೀತಿಯ ಮೌಲ್ಯಮಾಪನ ಇರುವುದಿಲ್ಲ.

4.17 ಭಾರತೀಯ ಶಾಸ್ತ್ರೀಯ ಭಾಷೆಗಳಲ್ಲಿ ಸಾಹಿತ್ಯದ ಪ್ರಾಮುಖ್ಯತೆ, ಪ್ರಸ್ತುತತೆ ಮತ್ತು ಸೌಂದರ್ಯವನ್ನು ಕಡೆಗಣಿಸಲಾಗುವುದಿಲ್ಲ. ಸಂಸ್ಕೃತವು ಭಾರತದ ಸಂವಿಧಾನದ ಎಂಟನೇ ಪರಿಚ್ಛೇಧದಲ್ಲಿ ಉಲ್ಲೇಖಿಸಲಾದ ಒಂದು ಪ್ರಮುಖ ಆಧುನಿಕ ಭಾಷೆಯಾಗಿದ್ದು, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಶಾಸ್ತ್ರೀಯ ಸಾಹಿತ್ಯವನ್ನು ಹೊಂದಿದೆ. ಇದು ಸಾವಿರಾರು ವರ್ಷಗಳಿಂದ ವಿವಿಧ ಮತ ಪಂಥಗಳಿಗೆ ಸೇರಿದ ಜನರು ಹಾಗೂ ವೈವಿಧ್ಯಮಯ ಸಾಮಾಜಿಕ–ಆರ್ಥಿಕ ಹಿನ್ನೆಲೆಗಳ ಜನರು ಬರೆದಿರುವ ಗಣಿತ, ತತ್ವಶಾಸ್ತ್ರ, ವ್ಯಾಕರಣ, ಸಂಗೀತ, ರಾಜಕೀಯ, ವೈದ್ಯಕೀಯ, ವಾಸ್ತುಶಿಲ್ಪ, ಲೋಹಶಾಸ್ತ್ರ, ನಾಟಕ, ಕವನ, ಕಥೆ ಹೇಳುವಿಕೆ ಮತ್ತು ಇನ್ನೂ ಹೆಚ್ಚಿನ ಸಂಪತ್ತನ್ನು ('ಸಂಸ್ಕೃತ ಜ್ಞಾನ ವ್ಯವಸ್ಥೆಗಳು' ಎಂದು ಕರೆಯಲಾಗುತ್ತದೆ) ಒಳಗೊಂಡಿದೆ. ತ್ರಿಭಾಷಾ ಸೂತ್ರದಲ್ಲಿನ ಒಂದು ಆಯ್ಕೆಯೂ ಸೇರಿದಂತೆ ವಿದ್ಯಾರ್ಥಿಗಳಿಗೆ ಒಂದು ಪ್ರಮುಖ, ಸಂಪದ್ಭರಿತ ಆಯ್ಕೆಯಾಗಿ ಶಾಲೆ ಮತ್ತು ಉನ್ನತ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಂಸ್ಕೃತವನ್ನು ಪರಿಚಯಿಸಲಾಗುವುದು. ಇದನ್ನು ಆಸಕ್ತಿದಾಯಕ, ಅನುಭವಾತ್ಮಕ ಮತ್ತು ಸಮಕಾಲೀನವಾಗಿ ಪ್ರಸ್ತುತವಾಗುವ ರೀತಿಯಲ್ಲಿ ಕಲಿಸಲಾಗುತ್ತದೆ. ಸಂಸ್ಕೃತದ ಮೂಲಕ ಸಂಸ್ಕೃತವನ್ನು (STS) ಕಲಿಸಲು ಮತ್ತು ಅದರ ಅಧ್ಯಯನವನ್ನು ಆನಂದಿಸುವಂತೆ ಮಾಡಲು ಮತ್ತು ಮಾಧ್ಯಮಿಕ ಶಾಲಾ ಹಂತದಲ್ಲಿ ಸಂಸ್ಕೃತ ಪಠ್ಯಪುಸ್ತಕಗಳನ್ನು ಸರಳ, ಗುಣಮಟ್ಟದ ಸಂಸ್ಕೃತ (SSS) ದಲ್ಲಿ ಬರೆಯಬಹುದು.

4.18 ತಮಿಳು, ತೆಲುಗು, ಕನ್ನಡ, ಮಲಯಾಳಂ, ಒಡಿಯಾ ಸೇರಿದಂತೆ ಇತರ ಶಾಸ್ತ್ರೀಯ ಭಾಷೆಗಳಲ್ಲಿ ಭಾರತವು ಅತ್ಯಂತ ಶ್ರೀಮಂತ ಸಾಹಿತ್ಯವನ್ನು ಹೊಂದಿದೆ. ಈ ಶಾಸ್ತ್ರೀಯ ಭಾಷೆಗಳ ಜೊತೆಗೆ ಪಾಲಿ, ಪರ್ಷಿಯನ್ ಮತ್ತು ಪ್ರಾಕೃತ ಭಾಷೆಗಳು ಮತ್ತು ಆ ಭಾಷೆಗಳ ಸಾಹಿತ್ಯ ಕೃತಿಗಳನ್ನು ಅವುಗಳ ಶ್ರೀಮಂತಿಕೆ ಮತ್ತು ಪುಷ್ಟೀಕರಣಕ್ಕಾಗಿ ಸಂರಕ್ಷಿಸಬೇಕು. ಭಾರತವು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ದೇಶವಾಗುತ್ತಿದ್ದಂತೆ, ಮುಂದಿನ ಪೀಳಿಗೆಯು ಭಾರತದ ವ್ಯಾಪಕ ಮತ್ತು ಸುಂದರವಾದ ಶಾಸ್ತ್ರೀಯ ಸಾಹಿತ್ಯದಲ್ಲಿ ಪಾಲ್ಗೊಳ್ಳಲು ಮತ್ತು ಶ್ರೀಮಂತವಾಗಲು ಬಯಸುತ್ತದೆ. ಸಂಸ್ಕೃತದ ಜೊತೆಗೆ, ಇತರ ಭಾಷೆ ಮತ್ತು ಸಾಹಿತ್ಯವು ಜೀವಂತವಾಗಿ ಮತ್ತು ರೋಮಾಂಚಕವಾಗಿರುವುದನ್ನು ಖಚಿತಪಡಿಸಿಕೊಳ್ಳಲು ತಮಿಳು, ತೆಲುಗು, ಕನ್ನಡ, ಮಲಯಾಳಂ, ಒಡಿಯಾ, ಪಾಲಿ, ಪರ್ಷಿಯನ್ ಮತ್ತು ಪ್ರಾಕೃತ ಸೇರಿದಂತೆ, ಭಾರತದ ಇತರ ಶಾಸ್ತ್ರೀಯ ಭಾಷೆಗಳು ಮತ್ತು ಸಾಹಿತ್ಯಗಳು ಬಹುಶಃ ಅಂತರ್ಜಾಲದಲ್ಲಿ ಲಭ್ಯವಾಗುವ ಆಟಗಳಂತೆ (ಆನ್‌ಲೈನ್ ಮಾಡ್ಯೂಲ್) ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಆಯ್ಕೆಗಳಾಗಿ, ಅನುಭವಾತ್ಮಕ ಮತ್ತ ನವೀನ ವಿಧಾನಗಳ ಮೂಲಕ ವ್ಯಾಪಕವಾಗಿ ಲಭ್ಯವಾಗಲಿವೆ. ಶ್ರೀಮಂತವಾದ ಮೌಖಿಕ ಮತ್ತು ಲಿಖಿತ ಸಾಹಿತ್ಯ, ಸಾಂಸ್ಕೃತಿಕ ಸಂಪ್ರದಾಯಗಳು ಮತ್ತು ಜ್ಞಾನವನ್ನು ಹೊಂದಿರುವ ಎಲ್ಲಾ ಭಾರತೀಯ ಭಾಷೆಗಳಿಗೂ ಇದೇ ರೀತಿಯ ಪ್ರಯತ್ನಗಳನ್ನು ಮಾಡಲಾಗುವುದು.

4.19 ಮಕ್ಕಳ ಜ್ಞಾನದ ಹೆಚ್ಚಳಕ್ಕಾಗಿ, ಈ ಶ್ರೀಮಂತ ಭಾಷೆಗಳ ಕಲಾತ್ಮಕ ಸಂಪತ್ತಿನ ಸಂರಕ್ಷಣೆಗಾಗಿ, ಸಾರ್ವಜನಿಕ ಅಥವಾ ಖಾಸಗಿ ಸೇರಿದಂತೆ ಎಲ್ಲಾ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳು, 6–12ನೇ ತರಗತಿಗಳಲ್ಲಿ, ಮಾಧ್ಯಮಿಕ ಹಂತದಿಂದ ಮತ್ತು ಅದಕ್ಕೂ ಮೀರಿದ ಹಂತದಿಂದ ಕನಿಷ್ಠ ಎರಡು ವರ್ಷ ಭಾರತದ ಶಾಸ್ತ್ರೀಯ ಭಾಷೆ ಮತ್ತು ಅದಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಕಲಿಯುವ

ಆಯ್ಕೆಯನ್ನು ಪಡೆಯುತ್ತಾರೆ. ಈ ಅವಕಾಶವನ್ನು ತಂತ್ರಜ್ಞಾನದ ಸಂಯೋಜನೆ ಸೇರಿದಂತೆ ಅನುಭವಾತ್ಮಕ ಮತ್ತು ನವೀನ ವಿಧಾನಗಳ ಮೂಲಕ ಒದಗಿಸಲಾಗುವುದು.

4.20 ಭಾರತೀಯ ಭಾಷೆಗಳಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಉತ್ತಮ ಗುಣಮಟ್ಟದ ಬೋಧನೆಯ ಜೊತೆಗೆ, ಪ್ರೌಢ ಹಂತದಲ್ಲಿ ವಿದ್ಯಾರ್ಥಿಗಳ ಆಸಕ್ತಿಗಳು ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ ಪ್ರಪಂಚದ ಸಂಸ್ಕೃತಿಗಳ ಬಗ್ಗೆ ತಿಳಿಯಲು ಅವಕಾಶ ಮಾಡಿಕೊಡಲಾಗುವುದು. ಇದಕ್ಕಾಗಿ ಜಾಗತಿಕ ಜ್ಞಾನ ಹಾಗೂ ಚಲನಶೀಲತೆಯನ್ನು ಉತ್ಕೃಷ್ಟಗೊಳಿಸಲು ವಿದೇಶಿ ಭಾಷೆಗಳಾದ ಕೊರಿಯನ್, ಜಪನೀಸ್, ಥಾಯ್, ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಪೋರ್ಚುಗೀಸ್ ಮತ್ತು ರಷ್ಯನ್ ಮುಂತಾದ ಭಾಷೆಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುವುದು.

4.21 ಎಲ್ಲಾ ಭಾಷೆಗಳ ಬೋಧನೆಯನ್ನು ಅಂತರ್ಜಾಲದ ಆಟ ಮತ್ತು ಆ್ಯಪ್‌ಗಳ ಮೂಲಕ ಹಾಗೂ ಚಲನಚಿತ್ರಗಳು, ರಂಗಭೂಮಿ. ಕಥೆ ಹೇಳುವಿಕೆ, ಕವನ ಹಾಗೂ ಸಂಗೀತದಂತಹ ಭಾಷೆಗಳ ಸಾಂಸ್ಕೃತಿಕ ಅಂಶಗಳನ್ನು ಸಂಯೋಜಿಸುವ ಮೂಲಕ ಕೈಗೊಳ್ಳಲಾಗುವುದು. ಇದರೊಂದಿಗೆ ವಿವಿಧ ಸಂಬಂಧಿತ ವಿಷಯಗಳನ್ನು ನಿಜ ಜೀವನದ ಅನುಭವಗಳೊಂದಿಗೆ ಸಮೀಕರಿಸಿ, ನವೀನ ಮತ್ತು ಪ್ರಾಯೋಗಿಕ ವಿಧಾನಗಳನ್ನೂ ಬಳಸಲಾಗುವುದು. ಹೀಗೆ ಭಾಷಾ ಬೋಧನೆಯೂ ಅನುಭವಾತ್ಮಕ ವಿಧಾನವನ್ನು ಆಧರಿಸಿರುತ್ತದೆ.

4.22 ಶ್ರವಣದೋಷವುಳ್ಳ ವಿದ್ಯಾರ್ಥಿಗಳ ಬಳಕೆಗಾಗಿ ಭಾರತೀಯ ಸಂಕೇತ ಭಾಷೆ (ISL) ಯನ್ನು ದೇಶಾದ್ಯಂತ ಪ್ರಮಾಣೀಕರಿಸಲಾಗುವುದು ಮತ್ತು ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮದ ಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುವುದು. ಇದರೊಂದಿಗೆ ಸ್ಥಳೀಯ ಸಂಕೇತ ಭಾಷೆಗಳನ್ನು ಗೌರವಿಸಲಾಗುತ್ತದೆ ಹಾಗೂ ಕಲಿಸಲಾಗುತ್ತದೆ.

**ಚಿಂತನಾಶೀಲ ಪ್ರಶ್ನೆಗಳು**

1. ಕಲಿಕಾ ಪ್ರಕ್ರಿಯೆಯಲ್ಲಿ ಭಾಷೆಯ ಮಹತ್ವ ಏನು?
2. ಭಾಷಾ ಕಲಿಕೆ ಮಕ್ಕಳ ಸಾಮರ್ಥ್ಯಗಳನ್ನು ಬೆಳೆಸಲು ಹೇಗೆ ಸಹಾಯ ಮಾಡುತ್ತದೆ?

## ಪಠ್ಯಕ್ರಮದಲ್ಲಿ ಅಗತ್ಯ ವಿಷಯಗಳು, ಕೌಶಲಗಳು ಮತ್ತು ಸಾಮರ್ಥ್ಯಗಳ ಸಂಯೋಜನೆ

4.23 ವಿದ್ಯಾರ್ಥಿಗಳು ತಮ್ಮ ಅಗತ್ಯತೆಗೆ ಪೂರಕವಾಗಿ ಪಠ್ಯಕ್ರಮವನ್ನು ಆಯ್ಕೆಮಾಡುವಲ್ಲಿ ಹೆಚ್ಚಿನ ಪ್ರಮಾಣದ ನಮ್ಯತೆಯನ್ನು ಹೊಂದಿರಲೇಬೇಕು. ಆದರೆ ವೇಗವಾಗಿ ಬದಲಾಗುತ್ತಿರುವ ಇಂದಿನ ಜಗತ್ತಿನಲ್ಲಿ ಉತ್ತಮ, ಯಶಸ್ವಿ, ನವೀನ, ಹೊಂದಿಕೊಳ್ಳಬಲ್ಲ ಮತ್ತು ಉತ್ಪಾದಕ ವ್ಯಕ್ತಿಗಳಾಗಲು, ಎಲ್ಲಾ ವಿದ್ಯಾರ್ಥಿಗಳು ಕೆಲವು ವಿಷಯಗಳು, ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಕಲಿಯಬೇಕಾಗಿದೆ. ಭಾಷೆಗಳಲ್ಲಿ ಪ್ರಾವೀಣ್ಯತೆಯ ಜೊತೆಗೆ, ಈ ಕೌಶಲಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಸಾಕ್ಷ್ಯಾಧಾರಿತ ಚಿಂತನೆ; ಸೃಜನಶೀಲತೆ ಮತ್ತು ನವೀನತೆ; ಸೌಂದರ್ಯ ಮತ್ತು ಕಲಾ ಪ್ರಜ್ಞೆ; ಮೌಖಿಕ ಮತ್ತು ಲಿಖಿತ ಸಂವಹನ; ಆರೋಗ್ಯ ಮತ್ತು ಪೋಷಣೆ; ದೈಹಿಕ ಶಿಕ್ಷಣ, ಕ್ಷಮತೆ, ಕ್ಷೇಮ ಮತ್ತು ಕ್ರೀಡೆ; ಸಹಯೋಗ ಮತ್ತು ತಂಡ ಮನೋಭಾವ, ಸಮಸ್ಯೆ ಪರಿಹಾರ ಮತ್ತು ತಾರ್ಕಿಕ ನಿರ್ಣಯ; ವೃತ್ತಿಪರ ಅನುಭವ ಮತ್ತು ಕೌಶಲಗಳು; ಡಿಜಿಟಲ್ ಸಾಕ್ಷರತೆ, ಕೋಡಿಂಗ್ ಮತ್ತು ಲೆಕ್ಕಾಚಾರದ ಚಿಂತನೆ; ನೈತಿಕ ನಿರ್ಣಯ; ಮಾನವಿಕ ಮತ್ತು ಸಾಂವಿಧಾನಿಕ ಮೌಲ್ಯಗಳ ಜ್ಞಾನ ಮತ್ತು ಅಭ್ಯಾಸ; ಲಿಂಗ ಸಂವೇದನೆ; ಮೂಲಭೂತ ಕರ್ತವ್ಯಗಳು; ಪೌರತ್ವ ಕೌಶಲ ಮತ್ತು ಮೌಲ್ಯಗಳು; ಭಾರತದ ಜ್ಞಾನ; ನೀರು ಮತ್ತು ಸಂಪನ್ಮೂಲ ಸಂರಕ್ಷಣೆ, ನೈರ್ಮಲ್ಯ ಮತ್ತು ಸ್ವಚ್ಛತೆ ಸೇರಿದಂತೆ ಪರಿಸರ ಜಾಗೃತಿ; ಪ್ರಸ್ತುತ ವ್ಯವಹಾರಗಳು ಮತ್ತು ಸ್ಥಳೀಯ ಸಮುದಾಯಗಳು, ರಾಜ್ಯಗಳು, ದೇಶ ಮತ್ತು ಪ್ರಪಂಚವು ಎದುರಿಸುತ್ತಿರುವ ನಿರ್ಣಾಯಕ ವಿಷಯಗಳ ಜ್ಞಾನವು ಸೇರಿರುತ್ತದೆ.

4.24 ಸಮಕಾಲೀನ ವಿಷಯಗಳಾದ ಕೃತಕ ಬುದ್ಧಿಮತ್ತೆ, Design Thinking ಎಂದು ಹೆಸರಾದ ಚಿಂತನ ಪ್ರಕ್ರಿಯೆ, ವಿನ್ಯಾಸ ಚಿಂತನೆ, ಸಂಪೂರ್ಣ ಆರೋಗ್ಯ, ಸಾವಯವ ಜೀವನ, ಪರಿಸರ ಶಿಕ್ಷಣ, ಜಾಗತಿಕ ಪೌರತ್ವ ಶಿಕ್ಷಣ (GCED) ಇತ್ಯಾದಿಗಳನ್ನು ಸೂಕ್ತ ಹಂತಗಳಲ್ಲಿ ಪರಿಚಯಿಸುವುದು ಸೇರಿದಂತೆ, ಎಲ್ಲ ಹಂತದ ವಿದ್ಯಾರ್ಥಿಗಳಲ್ಲಿ ವಿವಿಧ ಪ್ರಮುಖ ಕೌಶಲಗಳನ್ನು ಬೆಳೆಸಲು, ಸಂಯೋಜಿತ ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರ ಉಪಕ್ರಮಗಳನ್ನು ಕೈಗೊಳ್ಳಲಾಗುವುದು.

4.25 ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ ಮತ್ತು ದತ್ತಾಂಶ ವಿಜ್ಞಾನ ಇತ್ಯಾದಿಗಳನ್ನು ಒಳಗೊಂಡಿರುವ ಹಲವಾರು ಭವಿಷ್ಯದ ಕ್ಷೇತ್ರಗಳು ಮತ್ತು ವೃತ್ತಿಗಳಲ್ಲಿ ಭಾರತದ ಭವಿಷ್ಯ ಮತ್ತು ನಾಯಕತ್ವದ ಪಾತ್ರಕ್ಕೆ ಗಣಿತ ಮತ್ತು ಗಣಿತೀಯ ಚಿಂತನೆ ಬಹಳ ಮುಖ್ಯ ಎಂದು ಗುರುತಿಸಲಾಗಿದೆ. ಹೀಗಾಗಿ, ಗಣಿತದ ಚಿಂತನೆಯನ್ನು ಹೆಚ್ಚು ಆಹ್ಲಾದಕರ ಮತ್ತು ಆಕರ್ಷಕವಾಗಿ ಮಾಡುವ ಪದಬಂಧಗಳು ಮತ್ತು ಆಟಗಳ ನಿಯಮಿತ ಬಳಕೆ ಸೇರಿದಂತೆ, ವಿವಿಧ ಪ್ರಕಾರದ ನವೀನ ವಿಧಾನಗಳ ಮೂಲಕ,

ಆರಂಭಿಕ ಹಂತದಿಂದ ಪ್ರಾರಂಭಿಸಿ, ಶಾಲಾ ಅವಧಿಯುದ್ದಕ್ಕೂ ಗಣಿತ ಮತ್ತು ಲೆಕ್ಕಾಚಾರದ ಚಿಂತನೆಯ ಮೇಲೆ ಹೆಚ್ಚಿನ ಒತ್ತು ನೀಡಲಾಗುವುದು. ಕೋಡಿಂಗ್ ಒಳಗೊಂಡ ಚಟುವಟಿಕೆಗಳನ್ನು ಮಾಧ್ಯಮಿಕ ಹಂತದಲ್ಲಿ ಪರಿಚಯಿಸಲಾಗುವುದು.

4.26 ಪ್ರತಿ ವಿದ್ಯಾರ್ಥಿ 6 ರಿಂದ 8ನೇ ತರಗತಿಯ ಅವಧಿಯಲ್ಲಿ, ರಾಜ್ಯಗಳು ಮತ್ತು ಸ್ಥಳೀಯ ಸಮುದಾಯಗಳು ನಿರ್ಧರಿಸಿದಂತೆ ಹಾಗೂ ಸ್ಥಳೀಯ ಕೌಶಲಗಳಿಗೆ ಪೂರಕವಾಗಿರುವಂತೆ ಮರಗೆಲಸ, ವಿದ್ಯುತ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ ಮುಂತಾದ ಪ್ರಮುಖ ವೃತ್ತಿಪರ ಕರಕೌಶಲಗಳ ಸಮೀಕ್ಷೆ ಮತ್ತು ಪ್ರಾಯೋಗಿಕವಾಗಿ ಮಾಡಿ ನೋಡುವ ಅನುಭವವನ್ನು ನೀಡುವ ಒಂದು ಮೋಜಿನ ಕೋರ್ಸ್ ತೆಗೆದುಕೊಳ್ಳುತ್ತಾನೆ/ಳೆ. NCFSE 2020–21ರ ಚೌಕಟ್ಟನ್ನು ರೂಪಿಸುವಾಗ 6–8ನೇ ತರಗತಿಗಳಿಗಾಗಿ ಅಭ್ಯಾಸ ಆಧಾರಿತ ಪಠ್ಯಕ್ರಮವನ್ನು NCERT ಸೂಕ್ತವಾಗಿ ವಿನ್ಯಾಸಗೊಳಿಸುತ್ತದೆ. 6–8ನೇ ತರಗತಿಯ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿಗಳು 10 ದಿನಗಳ ಬ್ಯಾಗ್ ರಹಿತ ಅವಧಿಯಲ್ಲಿ ಭಾಗವಹಿಸುತ್ತಾರೆ. ಅಲ್ಲಿ ಅವರು ಸ್ಥಳೀಯ ವೃತ್ತಿಪರ ತಜ್ಞರಾದ ಬಡಗಿಗಳು, ತೋಟಗಾರರು, ಕುಂಬಾರರು, ಕಲಾವಿದರು ಮುಂತಾದವರೊಂದಿಗೆ ತರಬೇತಿ ಪಡೆಯುತ್ತಾರೆ. ವೃತ್ತಿಪರ ವಿಷಯಗಳನ್ನು ಕಲಿಯಲು ಇದೇ ರೀತಿಯ ತರಬೇತಿ (Internship) ಅವಕಾಶಗಳು, (ರಜಾ ಅವಧಿಗಳು ಸೇರಿದಂತೆ) 6–12ನೇ ತರಗತಿಗಳ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಮಾಡಬಹುದು. ಆನ್‌ಲೈನ್ ವಿಧಾನದಲ್ಲಿಯೂ ಸಹ ವೃತ್ತಿಪರ ಕೋರ್ಸಗಳು ಲಭ್ಯವಾಗುವಂತೆ ಮಾಡಲಾಗುವುದು. ಕಲೆ, ರಸಪ್ರಶ್ನೆಗಳು, ಕ್ರೀಡೆಗಳು ಮತ್ತು ವೃತ್ತಿಪರ ಕರಕೌಶಲವನ್ನು ಒಳಗೊಂಡ ವಿವಿಧ ರೀತಿಯ ಪುಷ್ಟೀಕರಣ ಚಟುವಟಿಕೆಗಳಿಗಾಗಿ ವರ್ಷವಿಡೀ ಬ್ಯಾಗ್ ರಹಿತ ದಿನಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಪ್ರಾಮುಖ್ಯತೆಯ ಸ್ಥಳಗಳು / ಸ್ಮಾರಕಗಳಿಗೆ ಭೇಟಿ ನೀಡುವುದು, ಸ್ಥಳೀಯ ಕಲಾವಿದರು ಮತ್ತು ಕುಶಲಕರ್ಮಿಗಳನ್ನು ಭೇಟಿ ಮಾಡುವುದು ಮತ್ತು ಅವರ ಗ್ರಾಮ / ತಹಸಿಲ್ / ಜಿಲ್ಲೆ / ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನಿಯಮಿತವಾಗಿ ಭೇಟಿ ನೀಡುವ ಮೂಲಕ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲಾಗುವುದು.

4.27 "ಭಾರತದ ಜ್ಞಾನ" ವು ಪ್ರಾಚೀನ ಭಾರತೀಯ ಜ್ಞಾನ ಮತ್ತು ಆಧುನಿಕ ಭಾರತಕ್ಕೆ ಅದು ನೀಡಿದ ಕೊಡುಗೆಗಳು, ಯಶಸ್ಸು ಮತ್ತು ಸವಾಲುಗಳು, ಶಿಕ್ಷಣ, ಆರೋಗ್ಯ, ಪರಿಸರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಭಾರತದ ಭವಿಷ್ಯದ ಆಕಾಂಕ್ಷೆಗಳ ಸ್ಪಷ್ಟ ಪ್ರಜ್ಞೆಯನ್ನು ಒಳಗೊಂಡಿರುತ್ತದೆ. ಶಾಲಾ ಪಠ್ಯಕ್ರಮದಾದ್ಯಂತ ಈ ಅಂಶಗಳನ್ನು ಸಮಂಜಸವಾಗಿ ನಿಖರ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಯೋಜಿಸಲಾಗುವುದು; ನಿರ್ದಿಷ್ಟವಾಗಿ ಹೇಳುವುದಾದರೆ, ಬುಡಕಟ್ಟು ಜ್ಞಾನ ಮತ್ತು ಸ್ಥಳೀಯ ಹಾಗೂ ಸಾಂಪ್ರದಾಯಿಕ ಕಲಿಕೆಯ ವಿಧಾನಗಳನ್ನು ಒಳಗೊಂಡಂತೆ, ಭಾರತೀಯ ಜ್ಞಾನ ವ್ಯವಸ್ಥೆಗಳನ್ನು ಗಣಿತ, ಖಗೋಳವಿಜ್ಞಾನ, ತತ್ತ್ವಶಾಸ್ತ್ರ, ಯೋಗ, ವಾಸ್ತು ಶಿಲ್ಪ, ವೈದ್ಯಕೀಯಶಾಸ್ತ್ರ, ಕೃಷಿ, ಎಂಜಿನಿಯರಿಂಗ್, ಭಾಷಾಶಾಸ್ತ್ರ, ಸಾಹಿತ್ಯ, ಕ್ರೀಡೆ, ಆಟಗಳು, ಆಡಳಿತ, ರಾಜಕೀಯ, ಪರಿಸರ ಸಂರಕ್ಷಣೆಯಲ್ಲಿ ಸೇರ್ಪಡೆ ಮಾಡಲಾಗುವುದು. ಬುಡಕಟ್ಟು ಜನಾಂಗೀಯ–ವೈದ್ಯಕೀಯ ಅಭ್ಯಾಸಗಳು, ಅರಣ್ಯ ನಿರ್ವಹಣೆ, ಸಾಂಪ್ರದಾಯಿಕ ಕೃಷಿ, ನೈಸರ್ಗಿಕ ಕೃಷಿ ಇತ್ಯಾದಿ ನಿರ್ದಿಷ್ಟ ಕೋರ್ಸ್‌ಗಳನ್ನೂ ಸಹ ಪ್ರಾರಂಭಿಸಲಾಗುವುದು. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಭಾರತೀಯ ಜ್ಞಾನ ವ್ಯವಸ್ಥೆಗಳ ಬಗ್ಗೆ ಒಂದು ಐಚ್ಛಿಕ ಕೋರ್ಸ್ ಲಭ್ಯವಿರುತ್ತದೆ. ಮೋಜಿನ ಮತ್ತು ಸ್ಥಳೀಯ ಆಟಗಳ ಮೂಲಕ ವಿವಿಧ ಅಂಶಗಳು ಮತ್ತು ವಿಷಯಗಳನ್ನು ಕಲಿಯಲು ಶಾಲೆಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಬಹುದು. ಪ್ರಾಚೀನ ಮತ್ತು ಆಧುನಿಕ, ವಿಜ್ಞಾನ ಮತ್ತು ಅದರಾಚೆಗಿನ ಭಾರತದ ಸ್ಫೂರ್ತಿದಾಯಕ ವ್ಯಕ್ತಿಗಳ ಕುರಿತ ಸಾಕ್ಷ್ಯಚಿತ್ರಗಳನ್ನು ಶಾಲಾ ಪಠ್ಯಕ್ರಮದಾದ್ಯಂತ ಸೂಕ್ತ ಹಂತಗಳಲ್ಲಿ ತೋರಿಸಲಾಗುತ್ತದೆ. ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳ ಭಾಗವಾಗಿ ವಿವಿಧ ರಾಜ್ಯಗಳಿಗೆ ಭೇಟಿ ನೀಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ.

4.28 "ಸರಿಯಾದದ್ದನ್ನು ಮಾಡುವ" ಕಾರ್ಯಕ್ಕೆ ಪ್ರಾಮುಖ್ಯತೆ ನೀಡುವುದನ್ನು ಚಿಕ್ಕ ವಯಸ್ಸಿನಲ್ಲಿಯೇ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತದೆ ಮತ್ತು ನೈತಿಕ ನಿರ್ಧಾರಗಳನ್ನು ತೆಗೆದುಕೊಳ್ಳಲು ತಾರ್ಕಿಕ ಆಧಾರವನ್ನು ಒದಗಿಸಲಾಗುತ್ತದೆ. ನಂತರದ ವರ್ಷಗಳಲ್ಲಿ ಮಕ್ಕಳು ತಮ್ಮ ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು, ನೈತಿಕ ವಿಷಯದ ಬಗ್ಗೆ ವಿವಿಧ ದೃಷ್ಟಿಕೋನಗಳಿಂದ ವಾದ/ನಿಲುವು ತಾಳಲು ಮತ್ತು ಎಲ್ಲಾ ಕೆಲಸಗಳಲ್ಲಿ ನೈತಿಕ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಅನುಕೂಲವಾಗುವಂತೆ ಮೋಸ, ಹಿಂಸೆ, ಕೃತಿ ಚೌರ್ಯ, ಮಲಿನಗೊಳಿಸುವಿಕೆ, ಸಹಿಷ್ಣುತೆ, ಸಮಾನತೆ, ಪರಾನುಭೂತಿ ಇತ್ಯಾದಿ ವಿಷಯಗಳಿಗೆ ಮೌಲ್ಯ ಶಿಕ್ಷಣವನ್ನು ವಿಸ್ತರಿಸಲಾಗುವುದು. ಅಂತಹ ಮೂಲಭೂತ ನೈತಿಕ ತಾರ್ಕಿಕತೆಯ ಪರಿಣಾಮಗಳಾಗಿ, ಸಾಂಪ್ರದಾಯಿಕ ಭಾರತೀಯ ಮೌಲ್ಯಗಳು ಮತ್ತು ಎಲ್ಲಾ ಮೂಲಭೂತ ಮಾನವೀಯ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು (ಉದಾಹರಣೆಗೆ ಸೇವೆ, ಅಹಿಂಸೆ, ಸ್ವಚ್ಛತೆ, ಸತ್ಯ, ನಿಷ್ಕಾಮ ಕರ್ಮ, ಶಾಂತಿ, ತ್ಯಾಗ, ಸಹನೆ, ವೈವಿಧ್ಯತೆ, ಬಹುತ್ವ, ನೀತಿವಂತ ನಡವಳಿಕೆ, ಲಿಂಗ ಸಂವೇದನೆ, ಹಿರಿಯರಿಗೆ ಗೌರವ, ಯಾವುದೇ ಹಿನ್ನೆಲೆಯನ್ನು ಪರಿಗಣಿಸದೇ ಎಲ್ಲ ಜನರು ಮತ್ತು ಅವರ ಅಂತರ್ಗತ ಸಾಮರ್ಥ್ಯಗಳನ್ನು ಗೌರವಿಸುವುದು, ಪರಿಸರವನ್ನು ಗೌರವಿಸುವುದು, ಸಹಾಯ ಮಾಡುವುದು, ಸೌಜನ್ಯ, ತಾಳ್ಮೆ, ಕ್ಷಮೆ, ಪರಾನುಭೂತಿ, ಸಹಾನುಭೂತಿ,ದೇಶಭಕ್ತಿ, ಪ್ರಜಾಪ್ರಭುತ್ವ ದೃಷ್ಟಿಕೋನ, ಸಮಗ್ರತೆ, ಜವಾಬ್ದಾರಿ, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ) ಎಲ್ಲಾ ವಿದ್ಯಾರ್ಥಿಗಳಲ್ಲಿ ಬೆಳೆಸಲಾಗುವುದು.

ಪಂಚತಂತ್ರ, ಜಾತಕ, ಹಿತೋಪದೇಶ ಮತ್ತು ಇತರ ಆನಂದದಾಯಕ ನೀತಿಕಥೆಗಳು ಮತ್ತು ಭಾರತೀಯ ಸಂಪ್ರದಾಯದ

ಸ್ಫೂರ್ತಿದಾಯಕ ಮೂಲ ಕಥೆಗಳನ್ನು ಓದಲು ಮತ್ತು ಕಲಿಯಲು ಹಾಗೂ ಜಾಗತಿಕ ಸಾಹಿತ್ಯದ ಮೇಲೆ ಅವುಗಳ ಪ್ರಭಾವದ ಬಗ್ಗೆ ತಿಳಿಯಲು ಮಕ್ಕಳಿಗೆ ಅವಕಾಶವಿರುತ್ತದೆ.

ಎಲ್ಲಾ ವಿದ್ಯಾರ್ಥಿಗಳು ಭಾರತೀಯ ಸಂವಿಧಾನದ ಆಯ್ದ ಭಾಗಗಳನ್ನು ಓದುವುದೂ ಸಹ ಅಗತ್ಯ ಎಂದು ಪರಿಗಣಿಸಲಾಗುತ್ತದೆ. ಮುನ್ನೆಚ್ಚರಿಕೆಯ ಆರೋಗ್ಯ ಕ್ರಮಗಳು, ಮಾನಸಿಕ ಆರೋಗ್ಯ, ಉತ್ತಮ ಪೋಷಣೆ, ವೈಯಕ್ತಿಕ ಮತ್ತು ಸಾರ್ವಜನಿಕ ನೈರ್ಮಲ್ಯ, ವಿಪತ್ತು ನಿರ್ವಹಣೆ ಮತ್ತು ಪ್ರಥಮ ಚಿಕಿತ್ಸೆ ಸೇರಿದಂತೆ ಆರೋಗ್ಯದ ಕುರಿತು ಮೂಲಭೂತ ತರಬೇತಿಯನ್ನು ಪಠ್ಯಕ್ರಮದಲ್ಲಿ ಸೇರಿಸಲಾಗುವುದು. ಜೊತೆಗೆ ಮದ್ಯಪಾನ, ತಂಬಾಕು ಮತ್ತು ಇತರ ಮಾದಕ ದ್ರವ್ಯಗಳ ಹಾನಿಕಾರಕ ಪರಿಣಾಮಗಳ ವೈಜ್ಞಾನಿಕ ವಿವರಣೆಗಳನ್ನೂ ಸಹ ಸೇರಿಸಲಾಗುವುದು.

4.29 ಶಿಕ್ಷಣವು ನಮ್ಮ ವಿದ್ಯಾರ್ಥಿಗಳಿಗೆ ಅತ್ಯಧಿಕವಾಗಿ, ವಿಷಯಾಧಾರಿತ, ಆಸಕ್ತಿದಾಯಕ ಮತ್ತು ಪರಿಣಾಮಕಾರಿಯಾಗಿರುವುದನ್ನು ಖಚಿತಪಡಿಸಬೇಕಾಗುತ್ತದೆ. ಇದಕ್ಕಾಗಿ ಬುನಾದಿ ಹಂತದಿಂದ ಎಲ್ಲಾ ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರವು ಸಂಸ್ಕೃತಿ, ಸಂಪ್ರದಾಯಗಳು, ಪರಂಪರೆ, ಪದ್ಧತಿಗಳು, ಭಾಷೆ, ತತ್ವಶಾಸ್ತ್ರ, ಭೌಗೋಳಿಕತೆ, ಪ್ರಾಚೀನ ಮತ್ತು ಸಮಕಾಲೀನ ಜ್ಞಾನ, ಸಾಮಾಜಿಕ ಮತ್ತು ವೈಜ್ಞಾನಿಕ ಅಗತ್ಯತೆಗಳು, ಸ್ಥಳೀಯ ಮತ್ತು ಸಾಂಪ್ರದಾಯಿಕ ಕಲಿಕೆಯ ವಿಧಾನಗಳು ಇತ್ಯಾದಿಗಳನ್ನು ಭಾರತೀಯ ಮತ್ತು ಸ್ಥಳೀಯ ಸನ್ನಿವೇಶ ಮತ್ತು ನೀತಿ ತತ್ವಗಳಲ್ಲಿ ಬಲವಾಗಿ ಬೇರೂರಿರುವಂತೆ ಪುನರ್ ವಿನ್ಯಾಸಗೊಳಿಸಲಾಗುವುದು. ಕಥೆಗಳು, ಕಲೆಗಳು, ಆಟಗಳು, ಕ್ರೀಡೆ, ಉದಾಹರಣೆಗಳು, ಸಮಸ್ಯೆಗಳು ಇತ್ಯಾದಿಗಳನ್ನು ಭಾರತೀಯ ಮತ್ತು ಸ್ಥಳೀಯ ಭೌಗೋಳಿಕ ಸನ್ನಿವೇಶಕ್ಕೆ ಸಾಧ್ಯವಾದಷ್ಟು ಸಂಬಂಧವಿರುವಂತೆ ಆಯ್ಕೆ ಮಾಡಲಾಗುತ್ತದೆ. ಕಲಿಕೆಯು ಹೀಗೆ ಬೇರೂರಿದಾಗ ಮಾತ್ರ ಆಲೋಚನೆಗಳು, ಅಮೂರ್ತತೆಗಳು ಮತ್ತು ಸೃಜನಶೀಲತೆಯು ಉತ್ತಮವಾಗಿ ಬೆಳವಣಿಗೆಯಾಗುತ್ತವೆ.

## ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCFSE)

4.30 ಪಠ್ಯವಿಷಯದಲ್ಲಿ ಕಡಿತ ಮತ್ತು ಶಾಲಾ ಪಠ್ಯಕ್ರಮದಲ್ಲಿ ಹೆಚ್ಚಿನ ನಮ್ಯತೆ ಮತ್ತು ಯಾಂತ್ರಿಕ ಕಲಿಕೆಗಿಂತ ರಚನಾತ್ಮಕತೆಗೆ ಒತ್ತು ನೀಡುವಾಗ, ಶಾಲಾ ಪಠ್ಯಪುಸ್ತಕಗಳಲ್ಲಿ ಅದಕ್ಕೆ ತಕ್ಕಂತೆ ಸಮಾನಾಂತರ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಎಲ್ಲಾ ಪಠ್ಯಪುಸ್ತಕಗಳು ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖವೆಂದು ಪರಿಗಣಿಸಲಾದ ಅಗತ್ಯವಾದ ಪ್ರಮುಖ ವಿಷಯಗಳನ್ನು (ಚರ್ಚೆ, ವಿಶ್ಲೇಷಣೆ, ಉದಾಹರಣೆಗಳು ಮತ್ತು ಅನ್ವಯನದೊಂದಿಗೆ) ಹೊಂದಿರುತ್ತವೆ. ಅದೇ ಸಂದರ್ಭದಲ್ಲಿ ಸ್ಥಳೀಯ ಸಂದರ್ಭಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ಯಾವುದೇ ಅಪೇಕ್ಷಿತ ಸೂಕ್ಷ್ಮ ವ್ಯತ್ಯಾಸಗಳು ಮತು ಪೂರಕ ವಿಷಯಗಳನ್ನೂ ಒಳಗೊಂಡಿರುತ್ತವೆ. ಸಾಧ್ಯವಾದರೆ, ರಾಷ್ಟ್ರೀಯ ಮತ್ತು ಸ್ಥಳೀಯ ವಿಷಯಗಳನ್ನು ಒಳಗೊಂಡಿರುವ ಪಠ್ಯಪುಸ್ತಕಗಳ ಗುಂಪಿನಿಂದ ಶಾಲೆಗಳು ಮತ್ತು ಶಿಕ್ಷಕರಿಗೆ ಅಗತ್ಯವಾದ ಪಠ್ಯಸ್ತಕಗಳನ್ನು ಆಯ್ಕೆ ಮಾಡುವ ಅವಕಾಶ ಇರುತ್ತದೆ. ಇದರಿಂದಾಗಿ ಅವರು ತಮ್ಮದೇ ಬೋಧನಾ ಶೈಲಿಗಳಿಗೆ ಸೂಕ್ತವಾದ ರೀತಿಯಲ್ಲಿ ವಿದ್ಯಾರ್ಥಿಗಳು ಮತ್ತು ಸಮುದಾಯಗಳ ಅಗತ್ಯಗಳಿಗೆ ಅನುಗುಣವಾಗಿ ಕಲಿಸಬಹುದು.

4.32 ಪಠ್ಯಪುಸ್ತಕದ ಅತಿಯಾದ ಬೆಲೆಯ ಭಾರವು ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ವ್ಯವಸ್ಥೆಯ ಮೇಲೆ ಆಗದಂತೆ ಗಮನಹರಿಸುವುದಕ್ಕಾಗಿ, ಗುಣಮಟ್ಟದ ಪಠ್ಯಪುಸ್ತಕಗಳನ್ನು ಉತ್ಪಾದನಾ / ಮುದ್ರಣ ವೆಚ್ಚದಲ್ಲಿ ಒದಗಿಸುವ ಉದ್ದೇಶವಿರುತ್ತದೆ. SCERT ಗಳ ಜೊತೆಯಲ್ಲಿ NCERT ಅಭಿವದ್ಧಿಪಡಿಸಿದ ಉತ್ತಮ-ಗುಣಮಟ್ಟದ ಪಠ್ಯಪುಸ್ತಕ ವಸ್ತುಗಳನ್ನು ಬಳಸುವ ಮೂಲಕ ಇದನ್ನು ಸಾಧಿಸಲಾಗುತ್ತದೆ. ಹೆಚ್ಚುವರಿ ಪಠ್ಯಪುಸ್ತಕ ಸಾಮಗ್ರಿಗಳಿಗೆ ಸಾರ್ವಜನಿಕ ಸೇವಾ ಮನೋಭಾವದ ವ್ಯಕ್ತಿ/ಸಂಸ್ಥೆಗಳಿಂದ ಮತ್ತು ಸಾರ್ವಜನಿಕರಿಂದ (CROWD SOURCING) ಧನಸಹಾಯ ಪಡೆಯಬಹುದು. ಇದರಿಂದಾಗಿ ಉತ್ತಮ-ಗುಣಮಟ್ಟದ ಪಠ್ಯಪುಸ್ತಕಗಳನ್ನು ಕಡಿಮೆ ವೆಚ್ಚದಲ್ಲಿ ರಚಿಸಲು ತಜ್ಞರನ್ನು ಪ್ರೇರೇಪಿಸಬಹುದಾಗಿದೆ. ರಾಜ್ಯಗಳು ಅಗತ್ಯಕ್ಕೆ ತಕ್ಕಂತೆ, ರಾಜ್ಯದ ಸ್ಥಳೀಯ ಸನ್ನಿವೇಶಗಳನ್ನು ಆಧರಿಸಿ ತಮ್ಮದೇ ಪಠ್ಯಕ್ರಮವನ್ನು (ಇದು NCERT ಸಿದ್ಧಪಡಿಸಿ NCFSE ಯನ್ನು ಆಧರಿಸಿರಬಹುದು) ಮತ್ತು ಪಠ್ಯಪುಸ್ತಕಗಳನ್ನು ಸಿದ್ದಪಡಿಸುತ್ತವೆ. (ಇದು NCERT ಪಠ್ಯಪುಸ್ತಕ ಸಾಮಗ್ರಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಆಧರಿಸಿರಬಹುದು) ಹಾಗೆ ಮಾಡುವಾಗ, NCERT ಪಠ್ಯಕ್ರಮವನ್ನು ರಾಷ್ಟ್ರೀಯವಾಗಿ ಸ್ವೀಕಾರಾರ್ಹ ಮಾನದಂಡವಾಗಿ ಪರಿಗಣಿಸಬೇಕಾಗುತ್ತದೆ. ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಅಂತಹ ಪಠ್ಯಪುಸ್ತಕಗಳ ಲಭ್ಯತೆಯು ಮೊದಲ ಆದ್ಯತೆಯಾಗಿದ್ದು, ಇದರಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ-ಗುಣಮಟ್ಟದ ಕಲಿಕೆಗೆ ಅವಕಾಶವಿರುತ್ತದೆ. ಶಾಲೆಗಳಲ್ಲಿ ಪಠ್ಯಪುಸ್ತಕಗಳ ಸಮಯೋಚಿತ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಪರಿಸರವನ್ನು ಸಂರಕ್ಷಿಸಲು ಮತ್ತು ಸಾಗಾಣಿಕೆ ಹೊರೆ ಕಡಿಮೆ ಮಾಡಲು, ಎಲ್ಲಾ ರಾಜ್ಯಗಳು ಮತ್ತು NCERT ಯು ಎಲ್ಲಾ ಪಠ್ಯಪುಸ್ತಕಗಳ ಡೌನ್‌ಲೋಡ್ ಮಾಡಬಹುದಾದ ಮತ್ತು ಮುದ್ರಿಸಬಹುದಾದ ಆವೃತ್ತಿಗಳನ್ನು ಒದಗಿಸುತ್ತವೆ.

4.33 NCERT, SCERT ಗಳು, ಶಾಲೆ ಮತ್ತು ಶಿಕ್ಷಣ ತಜ್ಞರೊಡನೆ ಸಮಾಲೋಚಿಸಿ ಪಠ್ಯಕ್ರಮ ಮತ್ತು ಬೋಧನಾ ಶಾಸ್ತ್ರದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುತ್ತವೆ. ಇದರೊಂದಿಗೆ ಶಾಲೆ ಬ್ಯಾಗ್ ಮತ್ತು ಪಠ್ಯಪುಸ್ತಕಗಳ ತೂಕವನ್ನು ಗಣನೀಯವಾಗಿ ಕಡಿಮೆ ಮಾಡಲು ಸಂಯೋಜಿತ ಪ್ರಯತ್ನಗಳನ್ನು ಮಾಡಲಾಗುವುದು.

## ಚಿಂತನಾಶೀಲ ಪ್ರಶ್ನೆಗಳು

1. ರಾಷ್ಟ್ರೀಯ ಪಠ್ಯಕ್ರಮ ನೆಲಗಟ್ಟು ಇದರ ಮಹತ್ವ ಏನು? ಇದು ಏಕೆ ಮುಖ್ಯ?

## ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಮೌಲ್ಯಮಾಪನದ ಸ್ವರೂಪದಲ್ಲಿ ಪರಿವರ್ತನೆ

4.34 ನಮ್ಮ ಶಾಲಾ ವ್ಯವಸ್ಥೆಯಲ್ಲಿ ಮೌಲ್ಯಮಾಪನದ ಗುರಿಯನ್ನು ಸಂಕಲನಾತ್ಮಕ ಮತ್ತು ಕಂಠಪಾಠ ಕೌಶಲಗಳನ್ನು ಪರೀಕ್ಷಿಸುವ ವಿಧಾನದಿಂದ, ಹೆಚ್ಚು ನಿಯಮಿತ ಮತ್ತು ರಚನಾತ್ಮಕವಾದ, ಹೆಚ್ಚು ಸಾಮರ್ಥ್ಯ ಆಧಾರಿತವಾದ ಕಲಿಕೆ ಮತ್ತು ಬೆಳವಣಿಗೆಯನ್ನು ಉತ್ತೇಜಿಸುವ ಮತ್ತು ವಿಶ್ಲೇಷಣೆ, ವಿಮರ್ಶಾತ್ಮಕ ಚಿಂತನೆ ಹಾಗೂ ಪರಿಕಲ್ಪನಾ ಸ್ಪಷ್ಟತೆಯಂತಹ ಉನ್ನತ ಹಂತದ ಕೌಶಲಗಳನ್ನು ಪರೀಕ್ಷಿಸುವ ವಿಧಾನಕ್ಕೆ ಬದಲಾಯಿಸಬೇಕಾಗಿದೆ. ಮೌಲ್ಯಮಾಪನದ ಪ್ರಾಥಮಿಕ ಉದ್ದೇಶ ನಿಜಕ್ಕೂ ಕಲಿಕೆಗಾಗಿ ಇರುತ್ತದೆ. ಇದು ಶಿಕ್ಷಕ, ವಿದ್ಯಾರ್ಥಿ ಮತ್ತು ಇಡೀ ಶಾಲಾ ವ್ಯವಸ್ಥೆಗೆ ಸಹಾಯ ಮಾಡುತ್ತದೆ. ಎಲ್ಲಾ ವಿದ್ಯಾರ್ಥಿಗಳ ಕಲಿಕೆ ಮತ್ತು ಬೆಳವಣಿಗೆಯನ್ನು ಅತ್ಯುತ್ತಮವಾಗಿಸಲು ಬೋಧನಾ-ಕಲಿಕಾ ಪ್ರಕ್ರಿಯೆಗಳನ್ನು ನಿರಂತರವಾಗಿ ಪರಿಷ್ಕರಿಸುತ್ತದೆ. ಶಿಕ್ಷಣದ ಎಲ್ಲಾ ಹಂತಗಳ ಮೌಲ್ಯಮಾಪನಕ್ಕೆ ಇದು ಆಧಾರ ತತ್ವವಾಗಿರುತ್ತದೆ.

4.35 ರಾಜ್ಯಗಳು ಶಾಲಾ-ಆಧಾರಿತ ಮೌಲ್ಯಾಂಕನಕ್ಕಾಗಿ, ಶಾಲೆಗಳಿಂದ ಪೋಷಕರಿಗೆ ನೀಡಲಾಗುವ ವಿದ್ಯಾರ್ಥಿಗಳ ಪ್ರಗತಿ ಪತ್ರವನ್ನು ಪ್ರಸ್ತಾವಿತ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ, NCERT ಮತ್ತು SCERT ಗಳ ಮಾರ್ಗದರ್ಶನದಲ್ಲಿ ಸಂಪೂರ್ಣವಾಗಿ ಮರುವಿನ್ಯಾಸಗೊಳಿಸುತ್ತವೆ. ಈ ಪ್ರಗತಿ ಪತ್ರವು, $360^0$ ಯ ಬಹು ಆಯಾಮದ ವರದಿಯಾಗಿದ್ದು, ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನೋಗತ್ಯಾತ್ಮಕ ವಲಯಗಳಲ್ಲಿ ಪ್ರತಿ ವಿದ್ಯಾರ್ಥಿಯ ವಿಶಿಷ್ಟತೆಯನ್ನು ವಿವರವಾಗಿ ಪ್ರತಿಬಿಂಬಿಸುತ್ತದೆ. ಇದು ಸ್ವಯಂ-ಮೌಲ್ಯಮಾಪನ, ಸಹಪಾಠಿ ಮೌಲ್ಯಮಾಪನ ಮತ್ತು ಶಿಕ್ಷಕರ ಮೌಲ್ಯಮಾಪನದೊಂದಿಗೆ ಯೋಜನಾ-ಆಧಾರಿತ ಮತ್ತು ವಿಚಾರಣೆ-ಆಧಾರಿತ ಕಲಿಕೆ, ರಸಪ್ರಶ್ನೆಗಳು, ಗುಂಪು ಕಾರ್ಯ ಇತ್ಯಾದಿ ಅಂಶಗಳಲ್ಲಿ ಮಗು ಸಾಧಿಸಿದ ಪ್ರಗತಿಯನ್ನು ಒಳಗೊಂಡಿರುತ್ತದೆ. ಈ ಸಮಗ್ರ ಪ್ರಗತಿ ಪತ್ರವು ಮನೆ ಮತ್ತು ಶಾಲೆಯ ನಡುವೆ ಒಂದು ಪ್ರಮುಖ ಕೊಂಡಿಯಾಗಿರುತ್ತದೆ. ಪೋಷಕರು ತಮ್ಮ ಮಕ್ಕಳ ಸರ್ವತೋಮುಖ ಶಿಕ್ಷಣ ಮತ್ತು ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಸಲುವಾಗಿ ಪೋಷಕ-ಶಿಕ್ಷಕರ ಸಭೆಗಳಲ್ಲಿ ಇದರ ಕುರಿತು ಚರ್ಚಿಸಲಾಗುತ್ತದೆ. ಈ ಪ್ರಗತಿ ಪತ್ರವು, ಶಿಕ್ಷಕರು ಮತ್ತು ಪೋಷಕರಿಗೆ ತರಗತಿಯ ಒಳಗೆ ಮತ್ತು ಹೊರಗೆ ಪ್ರತಿ ವಿದ್ಯಾರ್ಥಿಯನ್ನು ಹೇಗೆ ಬೆಂಬಲಿಸಬೇಕು ಎಂಬುದರ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯ, ಆಸಕ್ತ ಕ್ಷೇತ್ರಗಳು ಮತ್ತು ಗಮನ ನೀಡಬೇಕಾದ ಕ್ಷೇತ್ರಗಳ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸುವುದರ ಮೂಲಕ ಅವರಿಗೆ ಸೂಕ್ತವಾದ ವೃತ್ತಿಗಳನ್ನು ಆಯ್ಕೆ ಮಾಡಲು ಆಧಾರವನ್ನು ಒದಗಿಸುತ್ತದೆ. ಪೋಷಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಕಲಿಕೆಯ ದತ್ತಾಂಶ ಮತ್ತು ಸಂವಹನಾತ್ಮಕ ಪ್ರಶ್ನಾವಳಿಗಳ ಆಧಾರದ ಮೇಲೆ ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿಗಳ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸಹಾಯ ಮಾಡುವ ಕೃತಕ ಬುದ್ಧಿಮತ್ತೆ (AI) ಆಧಾರಿತ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಬಳಸಬಹುದು.

4.36 ಬೋರ್ಡ್ ಪರೀಕ್ಷೆಗಳು ಮತ್ತು ಪ್ರವೇಶ ಪರೀಕ್ಷೆಗಳು ಹಾಗೂ ಅವುಗಳ ಪರಿಣಾಮವಾಗಿ ಹುಟ್ಟಿಕೊಂಡ ಇಂದಿನ ಕೋಚಿಂಗ್ ಪದ್ಧತಿಯೂ ಸೇರಿದಂತೆ ಮಾಧ್ಯಮಿಕ ಶಾಲಾ ಪರೀಕ್ಷೆಗಳ ಪ್ರಸ್ತುತ ಸ್ವರೂಪವು ವಿಶೇಷವಾಗಿ ಮಾಧ್ಯಮಿಕ ಶಾಲಾ ಹಂತದಲ್ಲಿ ನಿಜವಾದ ಕಲಿಕೆಗೆ ನೀಡಬೇಕಾದ ಅಮೂಲ್ಯ ಸಮಯಕ್ಕೆ ಬದಲಾಗಿ, ಪರೀಕ್ಷಾ ತರಬೇತಿ ಮತ್ತು ಸಿದ್ಧತೆಗೆ ಅತೀವ ಸಮಯ ನೀಡುವುದರ ಮೂಲಕ ಹೆಚ್ಚಿನ ಹಾನಿಗೆ ಕಾರಣವಾಗುತ್ತಿವೆ. ಈ ಪರೀಕ್ಷೆಗಳು ಭವಿಷ್ಯದ ಶಿಕ್ಷಣ ವ್ಯವಸ್ಥೆಗೆ ತುಂಬಾ ಮಹತ್ವದ್ದಾಗಿರುವ ನಮ್ಯತೆ ಮತ್ತು ಆಯ್ಕೆಯ ಬದಲು, ಒಂದೇ ವಿಭಾಗದಲ್ಲಿ ಅತ್ಯಂತ ಸೀಮಿತ ವಿಷಯಗಳನ್ನು ಕಲಿಯಲು ವಿದ್ಯಾರ್ಥಿಗಳನ್ನು ಒತ್ತಾಯಿಸುತ್ತವೆ.

4.37. 10 ಮತ್ತು 12ನೇ ತರಗತಿಗಳಿಗೆ ಮಂಡಳಿಯ ಪರೀಕ್ಷೆಗಳನ್ನು ಮುಂದುವರಿಸಲಾಗುತ್ತದೆಯಾದರೂ, ಈ ಪರೀಕ್ಷೆಗಳಿಗಾಗಿ ಕೋಚಿಂಗ್ ತೆಗೆದುಕೊಳ್ಳುವುದನ್ನು ನಿವಾರಿಸಲು ಅಸ್ತಿತ್ವದಲ್ಲಿರುವ ಮಂಡಲಿ ಮತ್ತು ಪ್ರವೇಶ ಪರೀಕ್ಷೆಗಳ ವ್ಯವಸ್ಥೆಯಲ್ಲಿ ಸುಧಾರಣೆ ತರಲಾಗುವುದು. ಪ್ರಸ್ತುತ ಮೌಲ್ಯಮಾಪನ ವ್ಯವಸ್ಥೆಯ ಹಾನಿಕಾರಕ ಪರಿಣಾಮಗಳನ್ನು ಹೋಗಲಾಡಿಸಲು, ಸರ್ವತೋಮುಖ ಬೆಳವಣಿಗೆಯನ್ನು ಉತ್ತೇಜಿಸಲು ಮಂಡಳಿಯ ಪರೀಕ್ಷೆಗಳನ್ನು ಮರುವಿನ್ಯಾಸಗೊಳಿಸಲಾಗುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಆಸಕ್ತಿಗಳಿಗೆ ಅನುಗುಣವಾಗಿ ಬೋರ್ಡ್ ಪರೀಕ್ಷೆಗಳಲ್ಲಿ ಅನೇಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಬೋರ್ಡ್ ಪರೀಕ್ಷೆಗಳು ವರ್ಷಪೂರ್ತಿ ಪಡೆದ ತರಬೇತಿ ಮತ್ತು ಕಂಠಪಾಠಕ್ಕಿಂತ ಮುಖ್ಯವಾಗಿ ಪ್ರಮುಖ ಸಾಮರ್ಥ್ಯಗಳನ್ನು ಪರೀಕ್ಷಿಸುತ್ತವೆ ಎಂಬ ಅಂಶವನ್ನು ಆಧಾರವಾಗಿಟ್ಟುಕೊಂಡು ಅವುಗಳನ್ನೂ ಸರಳಗೊಳಿಸಲಾಗುವುದು. ಇದರಿಂದ ಶಾಲಾ ತರಗತಿಗೆ ಹಾಜರಾಗುವ ಮತ್ತು ಕನಿಷ್ಠ ಪ್ರಯತ್ನವನ್ನು ಮಾಡುವ ಯಾವುದೇ ವಿದ್ಯಾರ್ಥಿಯು ಹೆಚ್ಚು ಶ್ರಮವಿಲ್ಲದೆ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳ

ಅಪೇಕ್ಷೆಯ ಮೇರೆಗೆ, ಎಲ್ಲಾ ವಿದ್ಯಾರ್ಥಿಗಳಿಗೆ ಯಾವುದೇ ಶೈಕ್ಷಣಿಕ ವರ್ಷದಲ್ಲಿ ಒಂದು ಮುಖ್ಯ ಪರೀಕ್ಷೆ ಮತ್ತು ಇನ್ನೊಂದು ಸುಧಾರಣೆಗಾಗಿ ಸೇರಿದಂತೆ, ಎರಡು ಸಂದರ್ಭಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುತ್ತದೆ.

4.38 ಹೆಚ್ಚಿನ ನಮ್ಯತೆ, ವಿದ್ಯಾರ್ಥಿಗಳಿಗೆ ಆಯ್ಕೆಯ ಅವಕಾಶ ಮತ್ತು ಎರಡು ಅತ್ಯುತ್ತಮ ಪ್ರಯತ್ನಗಳ ವಿಧಾನವನ್ನು ಪರಿಚಯಿಸುವುದರ ಜೊತೆಗೆ, ಮುಖ್ಯವಾಗಿ ಕೋರ್ ಸಾಮರ್ಥ್ಯಗಳನ್ನು ಪರೀಕ್ಷಿಸುವ ಮೌಲ್ಯಮಾಪನ ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳುವುದು ಎಲ್ಲಾ ಮಂಡಳಿಯ ಪರೀಕ್ಷೆಗಳಲ್ಲಿ ತರಬೇಕಾದ ತಕ್ಷಣದ ಪ್ರಮುಖ ಸುಧಾರಣೆಗಳಾಗಿರಬೇಕು. ಈ ಮಂಡಳಿಗಳು ಕಾಲಾನಂತರದಲ್ಲಿ ಒತ್ತಡ ಮತ್ತು ಕೋಚಿಂಗ್ ಪಿಡುಗನ್ನು ಕಡಿಮೆ ಮಾಡುವ ಬೋರ್ಡ್ ಪರೀಕ್ಷೆಗಳ ಮತ್ತಷ್ಟು ಕಾರ್ಯಸಾಧ್ಯವಾದ ಮಾದರಿಗಳನ್ನು ಅಭಿವೃದ್ಧಿಪಡಿಸಬಹುದು. ಇಂತಹ ಕೆಲವು ಸಾಧ್ಯತೆಗಳೆಂದರೆ: ಪ್ರತಿ ಪರೀಕ್ಷೆಯು ತೀರಾ ಕಡಿಮೆ ಪರೀಕ್ಷಾ ಪಠ್ಯವನ್ನು ಹೊಂದಿರುವಂತೆ ವಾರ್ಷಿಕ / ಸೆಮಿಸ್ಟರ್ / ಮಾಡ್ಯುಲರ್ ಬೋರ್ಡ್ ಪರೀಕ್ಷೆಗಳ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬಹುದು ಮತ್ತು ಇವುಗಳನ್ನು ಶಾಲೆಯಲ್ಲಿ ಅದಕ್ಕೆ ಅನುಗುಣವಾದ ಕೋರ್ಸ್ ಪೂರ್ಣವಾದ ಕೂಡಲೇ ನಡೆಸಬಹುದಾಗಿದೆ. ಇದರಿಂದಾಗಿ ಮಾಧ್ಯಮಿಕ ಹಂತದಲ್ಲಿ ಪರೀಕ್ಷೆಗಳ ಒತ್ತಡವು ಕಡಿಮೆಯಾಗಲು ಸಾಧ್ಯವಿದೆ. ಗಣಿತದೊಂದಿಗೆ ಪ್ರಾರಂಭಿಸಿ, ಎಲ್ಲಾ ವಿಷಯಗಳು ಮತ್ತು ಅವುಗಳಿಗೆ ಅನುಗುಣವಾದ ಮೌಲ್ಯಾಂಕನಗಳನ್ನು ಎರಡು ಹಂತಗಳಲ್ಲಿ ಮಾಡಬಹುದು. ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಪ್ರಮಾಣಿತ ಮತ್ತು ಕೆಲವು ವಿಷಯಗಳಲ್ಲಿ ಉನ್ನತ ಸಾಧನೆ ಮಾಡುತ್ತಾರೆ. ಕೆಲವು ವಿಷಯಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ಎರಡು ಭಾಗಗಳಾಗಿ ಮರುವಿನ್ಯಾಸಗೊಳಿಸಬಹುದು. ಅವುಗಳೆಂದರೆ, ಬಹು–ಆಯ್ಕೆಯ ಪ್ರಶ್ನೆಗಳನ್ನು ಹೊಂದಿರುವ ವಸ್ತುನಿಷ್ಠ ಪ್ರಕಾರದ ಒಂದು ಭಾಗ ಮತ್ತು ವಿವರಣಾತ್ಮಕ ಪ್ರಕಾರದ ಇನ್ನೊಂದು ಭಾಗ.

4.39 ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ SCERT ಗಳು, ಮೌಲ್ಯಮಾಪನ ಮಂಡಳಿಗಳು (BOA ಗಳು), ಪ್ರಸ್ತಾವಿತ ಹೊಸ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ ಇತ್ಯಾದಿ ಪ್ರಮುಖ ಭಾಗೀದಾರರೊಂದಿಗೆ ಸಮಾಲೋಚನೆ ಕೈಗೊಳ್ಳುವ ಮೂಲಕ NCERT ಯಿಂದ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುತ್ತದೆ ಮತ್ತು NCFSE 2020–21ಕ್ಕೆ ಸಂವಾದಿಯಾಗಿ 2022–23ರ ಶೈಕ್ಷಣಿಕ ವರ್ಷದ ವೇಳೆಗೆ ಮೌಲ್ಯಮಾಪನ ವ್ಯವಸ್ಥೆಯಲ್ಲಿ ಪರಿವರ್ತನೆಗೆ ಶಿಕ್ಷಕರನ್ನು ಅಣಿಗೊಳಿಸಲಾಗುತ್ತದೆ.

4.40 ಶಾಲೆಗಳು ಮತ್ತು ಬೋಧನಾ–ಕಲಿಕಾ ಪ್ರಕ್ರಿಯೆಗಳಲ್ಲಿ ಸುಧಾರಣೆಗಳನ್ನು ತರಲು ಹಾಗೂ ಶಾಲಾ ವ್ಯವಸ್ಥೆಯ ಅನುಕೂಲಕ್ಕಾಗಿ 10 ಮತ್ತು 12ನೇ ತರಗತಿಯ ಕೊನೆಯಲ್ಲಿ ಮಾತ್ರವಲ್ಲದೇ, ಶೈಕ್ಷಣಿಕ ವರ್ಷದುದ್ದಕ್ಕೂ ಪ್ರಗತಿಯನ್ನು ಪರಿಶೀಲಿಸಲು ಎಲ್ಲಾ ವಿದ್ಯಾರ್ಥಿಗಳಿಗೆ 3, 5, ಮತ್ತು 8ನೇ ತರಗತಿಗಳಲ್ಲಿ ಸೂಕ್ತ ಪ್ರಾಧಿಕಾರದ ಮೂಲಕ ಶಾಲಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳ ಕಲಿವನ್ನು ಉತ್ತಮಪಡಿಸಲು ಯೋಜನೆಗಳನ್ನು ರೂಪಿಸಿಕೊಳ್ಳಬಹುದು. ಈ ಪರೀಕ್ಷೆಗಳು ಕಂಠಪಾಠಕ್ಕೆ ಒತ್ತು ನೀಡುವ ಬದಲು, ಉನ್ನತ–ಹಂತದ ಕೌಶಲಗಳು ಮತ್ತು ನೈಜ–ಜೀವನದ ಸಂದರ್ಭಗಳಲ್ಲಿ ಅನ್ವಯಿಕ ಜ್ಞಾನದೊಂದಿಗೆ, ರಾಷ್ಟ್ರೀಯ ಮತ್ತು ಸ್ಥಳೀಯ ಪಠ್ಯಕ್ರಮದ ಪ್ರಮುಖ ಪರಿಕಲ್ಪನೆಗಳನ್ನು ಮತ್ತು ಜ್ಞಾನದ ಮೌಲ್ಯಮಾಪನದ ಮೂಲಕ ಮೂಲ ಕಲಿಕಾ ಫಲಗಳ ಸಾಧನೆಯನ್ನು ಪರೀಕ್ಷಿಸುತ್ತವೆ. 3ನೇ ತರಗತಿಯ ಪರೀಕ್ಷೆಯು ನಿರ್ದಿಷ್ಟವಾಗಿ, ಮೂಲ ಅಕ್ಷರಜ್ಞಾನ, ಗಣಿತ ಕೌಶಲ ಮತ್ತು ಇತರ ಬುನಾದಿ ಕೌಶಲಗಳನ್ನು ಪರೀಕ್ಷಿಸುತ್ತದೆ. ಈ ಪರೀಕ್ಷೆಗಳ ಫಲಿತಾಂಶಗಳನ್ನು ಶಾಲೆಯ ಒಟ್ಟಾರೆ (ಅನಾಮಧೇಯ) ವಿದ್ಯಾರ್ಥಿಗಳ ಫಲಿತಾಂಶ ರೂಪದಲ್ಲಿ ಪ್ರಕಟಿಸಲಾಗುತ್ತದೆ. ಇದನ್ನು ಶಾಲಾ ವ್ಯವಸ್ಥೆಯ ನಿರಂತರ ಮೇಲ್ವಿಚಾರಣೆ ಮತ್ತು ಸುಧಾರಣೆಗೆ ಬಳಸಿಕೊಳ್ಳುವುದು ಸೇರಿದಂತೆ ಶಾಲಾ ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿ ಉದ್ದೇಶಗಳಗಾಗಿ ಮಾತ್ರ ಬಳಸಿಕೊಳ್ಳಲಾಗುತ್ತದೆ.

4.41 MHRD ಯ ಮಾರ್ಗದರ್ಶನದಲ್ಲಿ, ಭಾರತದ ಎಲ್ಲಾ ಮಾನ್ಯತೆ ಪಡೆದ ಶಾಲಾ ಮಂಡಳಿಗಳಡಿ ಓದುತ್ತಿರುವ ವಿದ್ಯಾರ್ಥಿಗಳ ಮೌಲ್ಯಾಂಕವನ್ನು ಕೈಗೊಳ್ಳುವ ಸಲುವಾಗಿ ಮಾನಕಗಳು, ಮಾನದಂಡಗಳು ಮತ್ತು ಮಾರ್ಗಸೂಚಿಗಳನ್ನು ನಿಗದಿಪಡಿಸಲು, ರಾಜ್ಯ ಸಾಧನಾ ಸಮೀಕ್ಷೆಗೆ (SAS) ಮಾರ್ಗದರ್ಶನ ಮಾಡಲು ಮತ್ತು ರಾಷ್ಟ್ರೀಯ ಸಾಧನ ಸಮೀಕ್ಷೆ NAS ಕೈಗೊಳ್ಳಲು, ದೇಶದಲ್ಲಿ ಕಲಿಕಾ ಫಲಗಳ ಸಾಧನೆಯನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ.

ಈ ನೀತಿಯಲ್ಲಿ ಹೇಳಲಾದ ಉದ್ದೇಶಗಳಿಗೆ ಅನುಗುಣವಾಗಿ 21ನೇ ಶತಮಾನದ ಕೌಶಲ ಹಾಗೂ ಅಗತ್ಯತೆಗಳನ್ನು ಪೂರೈಸುವ ಉದ್ದೇಶದಿಂದ ಎಲ್ಲಾ ಶಾಲಾ ಮಂಡಳಿಗಳು ತಮ್ಮ ಮೌಲ್ಯಮಾಪನ ವಿಧಾನಗಳಲ್ಲಿ ಬದಲಾವಣೆ ಮಾಡಿಕೊಳ್ಳಲು ಸೂಕ್ತವಾದ ಮಾನಕಗಳನ್ನು ನಿರ್ಧರಿಸಲು ಒಂದು ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ PARAKH - Performance Assessment, Review, and Analysis of Knowledge for Holistic Development (ಸಮಗ್ರ ಅಭಿವೃದ್ಧಿಗಾಗಿ ಕಾರ್ಯಕ್ಷಮತೆಯ ಮೌಲ್ಯಾಂಕನ, ಪುನರವಲೋಕನ ಮತ್ತು ಜ್ಞಾನದ ವಿಶ್ಲೇಷಣೆ) ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕೇಂದ್ರವು ಹೊಸ ಮೌಲ್ಯಾಂಕನ ಮಾದರಿಗಳು ಮತ್ತು ಇತ್ತೀಚಿನ ಸಂಶೋಧನೆಗಳ ಬಗ್ಗೆ ಶಾಲಾ ಮಂಡಳಿಗಳ ನಡುವೆ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಮತ್ತು ಎಲ್ಲಾ ಶಾಲಾ ಮಂಡಳಿಗಳಲ್ಲಿನ ಶೈಕ್ಷಣಿಕ ಮಾನಕಗಳ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ಒಂದು ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ.

4.42 ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಯ ತತ್ವಗಳು ಇದೇ ರೀತಿಯಾಗಿರುತ್ತವೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ಯು,

ಪ್ರತಿ ವರ್ಷ ಎರಡು ಬಾರಿಯಾದರೂ ಉನ್ನತ-ಗುಣಮಟ್ಟದ ಸಾಮಾನ್ಯ ಕ್ಷಮತಾ ಪರೀಕ್ಷೆ ಮತ್ತು ವಿಜ್ಞಾನ, ಮಾನವಿಕ ವಿಷಯಗಳು, ಭಾಷೆ, ಕಲೆ ಮತ್ತು ವೃತ್ತಿಪರ ವಿಷಯಗಳಲ್ಲಿ ವಿಶೇಷ ಸಾಮಾನ್ಯ ವಿಷಯ ಪರೀಕ್ಷೆಗಳನ್ನು ಕೈಗೊಳ್ಳಲು ಕ್ರಮವಹಿಸುತ್ತದೆ. ಈ ಪರೀಕ್ಷೆಗಳು ಪರಿಕಲ್ಪನಾ ತಿಳಿವಳಿಕೆ ಮತ್ತು ಅನ್ವಯಿಕ ಜ್ಞಾನವನ್ನು ಪರೀಕ್ಷಿಸುತ್ತವೆ. ಈ ಪರೀಕ್ಷೆಗಳು ಕೋಚಿಂಗ್ ತೆಗೆದುಕೊಳ್ಳುವ ಅಗತ್ಯವನ್ನು ತೆಗೆದುಹಾಕುವ ಉದ್ದೇಶವನ್ನು ಹೊಂದಿರುತ್ತವೆ. ಪರೀಕ್ಷೆಯನ್ನು ತೆಗೆದುಕೊಳ್ಳುವಾಗ ವಿದ್ಯಾರ್ಥಿಗಳಿಗೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಒದಗಿಸಲಾಗುತ್ತದೆ. ಪ್ರತಿ ವಿಶ್ವವಿದ್ಯಾನಿಲಯವು ಎಲ್ಲಾ ವಿದ್ಯಾರ್ಥಿಗಳ ವೈಯಕ್ತಿಕ ವಿಷಯಾಧಾರಿತ ಕೃತಿಸಂಪುಟವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. ಅಲ್ಲದೆ ವೈಯಕ್ತಿಕ ಆಸಕ್ತಿ ಮತ್ತು ಪ್ರತಿಭೆಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ತಮ್ಮ ಕಾರ್ಯಕ್ರಮಗಳಿಗಾಗಿ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಫೆಲೋಶಿಪ್‌ಗಳಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಲು NTA ಪ್ರಮುಖ, ಪರಿಣಿತ ಮತ್ತು ಸ್ವಾಯತ್ತ ಪರೀಕ್ಷಾ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದೆ. NTA ಪರೀಕ್ಷಾ ಸೇವೆಗಳ ಉತ್ತಮ ಗುಣಮಟ್ಟ, ಶ್ರೇಣಿ ಮತ್ತು ನಮ್ಯತೆಯಿಂದಾಗಿ ನೂರಾರು ವಿಶ್ವವಿದ್ಯಾನಿಲಯಗಳು ತಮ್ಮದೇ ಪ್ರವೇಶ ಪರೀಕ್ಷೆಗಳನ್ನು ನಡೆಸುವ ಬದಲು ಈ ಸಾಮಾನ್ಯ ಪ್ರವೇಶ ಪರೀಕ್ಷೆಗಳ ಫಲಿತಾಂಶಗಳನ್ನೇ ಉಪಯೋಗಿಸಲು ಸಾಧ್ಯವಾಗುತ್ತದೆ. ಇದರಿಂದ ವಿದ್ಯಾರ್ಥಿಗಳ, ವಿಶ್ವವಿದ್ಯಾಲಯಗಳ, ಕಾಲೇಜುಗಳ ಮತ್ತು ಸಂಪೂರ್ಣ ಶಿಕ್ಷಣ ವ್ಯವಸ್ಥೆಯ ಮೇಲಿನ ಭಾರ ತೀವ್ರವಾಗಿ ಕಡಿಮೆಯಾಗುತ್ತದೆ. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ತಮ್ಮ ಪ್ರವೇಶಕ್ಕಾಗಿ NTA ಮೌಲ್ಯಾಂಕನದ ಫಲಿತಾಂಶವನ್ನು ಬಳಸುವ ಆಯ್ಕೆ ಹೊಂದಿರುತ್ತದೆ.

**ಚಿಂತನಾಶೀಲ ಪ್ರಶ್ನೆಗಳು**

1. ಪ್ರಸ್ತುತ ತರಗತಿಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಮೌಲ್ಯಾಂಕನವನ್ನು ಹೇಗೆ ಮಾಡಲಾಗುತ್ತಿದೆ?
2. ಶಿಕ್ಷಣ ನೀತಿಯಲ್ಲಿ ಪ್ರಸ್ತಾಪಿಸುವ ಮೌಲ್ಯಾಂಕನದ ಸ್ವರೂಪ ಹೇಗಿದೆ? ಇದು ಪ್ರಸ್ತುತ ಮೌಲ್ಯಮಾಪನಕ್ಕಿಂತ ಹೇಗೆ ಭಿನ್ನವಾಗಿದೆ?

## ಪ್ರತಿಭಾವಂತ ವಿದ್ಯಾರ್ಥಿಗಳು / ವಿಶೇಷ ಪ್ರತಿಭೆಯ ವಿದ್ಯಾರ್ಥಿಗಳಿಗೆ ಬೆಂಬಲ

4.43 ಪ್ರತಿ ವಿದ್ಯಾರ್ಥಿಯಲ್ಲೂ ಸಹಜ ಪ್ರತಿಭೆಗಳಿವೆ, ಅದನ್ನು ಗುರುತಿಸಬೇಕು, ಪ್ರೋತ್ಸಾಹಿಸಬೇಕು, ಪೋಷಿಸಬೇಕು ಮತ್ತು ವಿಕಸನಗೊಳಿಸಬೇಕು. ವಿಭಿನ್ನ ಆಸಕ್ತಿಗಳು, ನಿಲುವುಗಳು ಮತ್ತು ಸಾಮರ್ಥ್ಯಗಳ ರೂಪದಲ್ಲಿ ಈ ಪ್ರತಿಭೆಗಳು ವ್ಯಕ್ತವಾಗಬಹುದಾಗಿವೆ. ನಿರ್ದಿಷ್ಟ ಕ್ಷೇತ್ರದಲ್ಲಿ ಉನ್ನತ ಆಸಕ್ತಿ ಮತ್ತು ಸಾಮರ್ಥ್ಯಗಳನ್ನು ವ್ಯಕ್ತಪಡಿಸುವ ವಿದ್ಯಾರ್ಥಿಗಳು, ಸಾಮಾನ್ಯ ಶಾಲಾ ಪಠ್ಯಕ್ರಮವನ್ನು ಮೀರಿ ಆ ಕ್ಷೇತ್ರದಲ್ಲಿ ಮುಂದುವರೆಯುವಂತೆ ಪ್ರೋತ್ಸಾಹಿಸಬೇಕು. ಶಿಕ್ಷಕ-ಶಿಕ್ಷಣವು ಅಂತಹ ವಿದ್ಯಾರ್ಥಿಗಳ ಪ್ರತಿಭೆ ಮತ್ತು ಆಸಕ್ತಿಗಳನ್ನು ಗುರುತಿಸುವ ಮತ್ತು ಬೆಳೆಸುವ ವಿಧಾನಗಳನ್ನು ಒಳಗೊಂಡಿರಬೇಕು. ಪ್ರತಿಭಾವಂತ ಮಕ್ಕಳ ಶಿಕ್ಷಣಕ್ಕಾಗಿ NCERT ಮತ್ತು NCTE ಮಾರ್ಗಸೂಚಿಗಳನ್ನು ಸಿದ್ಧಪಡಿಸುತ್ತವೆ. B.Ed., ಕಾರ್ಯಕ್ರಮಗಳೂ ಸಹ ಪ್ರತಿಭಾವಂತ ಮಕ್ಕಳ ಶಿಕ್ಷಣದಲ್ಲಿ ವಿಶೇಷ ಕೋರ್ಸ್ ನೀಡಲು ಅನುಮತಿ ನೀಡಬಹುದು.

4.44 ಶಿಕ್ಷಕರು ತರಗತಿಯಲ್ಲಿ ಅಸಕ್ತಿಗಳು ಮತ್ತು / ಅಥವಾ ಪ್ರತಿಭೆಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಪೂರಕ ಪುಷ್ಟೀಕರಣ ಮತ್ತು ಮಾರ್ಗದರ್ಶನ ನೀಡುವ ಮೂಲಕ ಅವರನ್ನು ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿರುತ್ತಾರೆ. ಶಾಲೆಗಳು, ಶಾಲಾ ಸಂಕೀರ್ಣಗಳು, ಜಿಲ್ಲೆಗಳು ಮತ್ತು ಅದಕ್ಕೂ ಹೆಚ್ಚಿನ ಹಂತದಲ್ಲಿ ವಿಷಯ ಕೇಂದ್ರಿತ ಮತ್ತು ಪ್ರಾಜೆಕ್ಟ್ ಆಧಾರಿತ ಕ್ಲಬ್‌ಗಳು ಮತ್ತು ವಲಯಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ಬೆಂಬಲಿಸಲಾಗುತ್ತದೆ. ವಿಜ್ಞಾನ ವಲಯಗಳು, ಗಣಿತ ವಲಯಗಳು, ಸಂಗೀತ ಮತ್ತು ನೃತ್ಯ ಪ್ರದರ್ಶನ ವಲಯಗಳು, ಚೆಸ್ ವಲಯಗಳು, ಕವನ ವಲಯಗಳು, ಭಾಷಾ ವಲಯಗಳು, ನಾಟಕ ವಲಯಗಳು, ಚರ್ಚಾ ವಲಯಗಳು, ಕ್ರೀಡಾ ವಲಯಗಳೂ, ಪರಿಸರ ಕ್ಲಬ್‌ಗಳು, ಅರೋಗ್ಯ ಮತ್ತು ಸ್ವಾಸ್ಥ್ಯ ಕ್ಲಬ್‌ಗಳು ವಲಯಗಳು ಇವುಗಳಿಗೆ ಉದಾಹರಣೆಗಳಾಗಿವೆ. ಈ ದಿಶೆಯಲ್ಲಿ, ಸಾಮಾಜಿಕ-ಆರ್ಥಿಕವಾಗಿ ಅನುಕೂಲಕರ ಗುಂಪುಗಳು ಸೇರಿದಂತೆ ದೇಶಾದ್ಯಂತ ಅತ್ಯುತ್ತಮ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಆಕರ್ಷಿಸಲಾಗುತ್ತದೆ. ಇದಕ್ಕಾಗಿ ಕಠಿಣ ಅರ್ಹತೆ ಆಧಾರಿತ ಆದರೆ ಸಮಾನ ಪ್ರವೇಶ ಪ್ರಕ್ರಿಯೆಯೊಂದಿಗೆ ವಿವಿಧ ವಿಷಯಗಳಲ್ಲಿ ಉನ್ನತ-ಗುಣಮಟ್ಟದ ರಾಷ್ಟ್ರದ ವಸತಿ ಸಹಿತ ಬೇಸಿಗೆ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಲಾಗುತ್ತದೆ.

4.45 ಎಲ್ಲಾ ವಿದ್ಯಾರ್ಥಿಗಳು ತಾವು ಅರ್ಹರಿರುವ ಎಲ್ಲಾ ಹಂತಗಳಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಲು ಶಾಲೆಯಿಂದ ಸ್ಥಳೀಯ ಹಂತಕ್ಕೆ, ಅಲ್ಲಿಂದ ರಾಜ್ಯ ಹಂತಕ್ಕೆ, ರಾಜ್ಯ ಹಂತದಿಂದ ರಾಷ್ಟ್ರೀಯ ಹಂತಕ್ಕೆ ಸ್ಪಷ್ಟ ಸಮನ್ವಯ ಮತ್ತು ಪ್ರಗತಿಯೊಂದಿಗೆ ದೇಶಾದ್ಯಂತ ವಿವಿಧ ವಿಷಯಗಳಲ್ಲಿ ಒಲಂಪಿಯಾಡ್‌ಗಳು ಮತ್ತು ಸ್ಪರ್ಧೆಗಳನ್ನು ನಡೆಸಲಾಗುವುದು. ಇವುಗಳನ್ನು

ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ನಡೆಸಲು ಪ್ರಯತ್ನಿಸಲಾಗುವುದು. ಐಐಟಿಗಳು ಮತ್ತು ಎನ್‌ಐಟಿಗಳಂತಹ ಪ್ರಧಾನ ಸಂಸ್ಥೆಗಳು ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ತಮ್ಮ ಪದವಿ ಕಾರ್ಯಕ್ರಮಗಳಿಗೆ ಪ್ರವೇಶದ ಮಾನದಂಡಗಳ ಭಾಗವಾಗಿ ರಾಷ್ಟ್ರೀಯ ಕಾರ್ಯಕ್ರಮಗಳ ಫಲಿತಾಂಶಗಳನ್ನು ಬಳಸಲು ಪ್ರೋತ್ಸಾಹಿಸಲಾಗುವುದು.

4.46 ಎಲ್ಲಾ ಮನೆಗಳು ಮತ್ತು / ಅಥವಾ ಶಾಲೆಗಳಲ್ಲಿ ಅಂತರ್ಜಾಲ ಸಂಪರ್ಕಿತ ಸ್ಮಾರ್ಟ್ ಫೋನ್ ಅಥವಾ ಟ್ಯಾಬ್ಲೆಟ್‌ಗಳು ಲಭ್ಯವಾದ ನಂತರ ರಸಪ್ರಶ್ನೆಗಳು, ಸ್ಪರ್ಧೆಗಳು, ಮೌಲ್ಯಮಾಪನಗಳು, ಸಂಪದೀಕರಣ ಸಾಮಗ್ರಿಗಳು ಮತ್ತು ಆನ್‌ಲೈನ್ ಸಮುದಾಯಗಳನ್ನು ಒಳಗೊಂಡ ಅನ್‌ಲೈನ್ ಅಪ್ಲಿಕೇಶನಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಪೋಷಕರು ಹಾಗೂ ಶಿಕ್ಷಕರ ಸೂಕ್ತ ಮೇಲ್ವಿಚಾರಣೆಯೊಂದಿಗೆ ಮೇಲೆ ತಿಳಿಸಲಾದ ಎಲ್ಲಾ ಉಪಕ್ರಮಗಳನ್ನು ವಿದ್ಯಾರ್ಥಿಗಳಿಗೆ ಗುಂಪು ಚಟುವಟಿಕೆಗಳ ರೂಪದಲ್ಲಿ ಪರಿಣಾಮಕಾರಿಯಾಗಿ ಆಯೋಜಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಶಾಲೆಗಳು ಡಿಜಿಟಲ್ ಶಿಕ್ಷಣವನ್ನು ಅಳವಡಿಸಿಕೊಳ್ಳುವುದಕ್ಕಾಗಿ ಮತ್ತು ಆ ಮೂಲಕ ಅನ್‌ಲೈನ್ ಸಂಪನ್ಮೂಲಗಳು ಮತ್ತು ಸಹಯೋಗದೊಂದಿಗೆ ಬೋಧನಾ–ಕಲಿಕ ಪ್ರಕ್ರಿಯೆಯನ್ನು ಸಮೃದ್ಧಗೊಳಿಸಲು ಹಂತ ಹಂತವಾಗಿ ಸ್ಮಾರ್ಟ್ ತರಗತಿಗಳನ್ನು ಅಭಿವೃದ್ಧಿಪಡಿಸುತ್ತವೆ.

### ಈ ಅಧ್ಯಾಯದಲ್ಲಿ ಕಲಿತ ಮುಖ್ಯ ಅಂಶಗಳು

- ಹೊಸ 5 + 3 + 3 + 4 ವಿನ್ಯಾಸದಲ್ಲಿ ಶಾಲಾ ಪಠ್ಯಕ್ರಮ ಮತ್ತು ಬೋಧನಾ ವಿಧಾನವನ್ನು ಪುನರ್ ರಚಿಸಲಾಗುತ್ತದೆ.
- ಬುನಾದಿ ಹಂತದ ಕಲಿವು ನಮ್ಯವಾದ, ಬಹುಹಂತದ ಚಟುವಟಿಕೆ/ಆಟ ಆಧಾರಿತ ಕಲಿಕೆ ಮತ್ತು ಪಠ್ಯಕ್ರಮ ಹಾಗೂ ಬೋಧನಾ ವಿಧಾನವನ್ನು ಒಳಗೊಂಡಿರುತ್ತದೆ.
- ಕಲಿಕೆಯಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಹೆಚ್ಚಿಸಲು ಅನುಭವಾತ್ಮಕ ಕಲಿಕೆಗೆ ಒತ್ತನ್ನು ನೀಡಲಾಗುವುದು.
- ಮಾಧ್ಯಮಿಕ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಒದಗಿಸಲಾಗುವುದು
- ಭಾರತೀಯ ಶಾಸ್ತ್ರೀಯ ಭಾಷೆಗಳ ಪ್ರಾಮುಖ್ಯತೆ, ಪ್ರಸ್ತುತತೆಯನ್ನು ಹೆಚ್ಚಿಸಲು ಅವಕಾಶಗಳನ್ನು ಒದಗಿಸಲಾಗುವುದು.
- ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ನೆಲಗಟ್ಟನ್ನು ರೂಪಿಸಲಾಗುವುದು.
- ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಮೌಲ್ಯಮಾಪನ ಸ್ವರೂಪದಲ್ಲಿ ಬದಲಾವಣೆಗಳನ್ನು ತರುವುದು.
- ಆನ್‌ಲೈನ್ ಸಂಪನ್ಮೂಲಗಳನ್ನು ಒದಗಿಸಿ, ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಸಮೃದ್ಧಗೊಳಿಸಲಾಗುವುದು.

# ಅಧ್ಯಾಯ – 05

# ಶಿಕ್ಷಕರು

### ಈ ಅಧ್ಯಾಯದಲ್ಲಿ . . . . .

ಶಿಕ್ಷಕರ ನೇಮಕಾತಿ ಪ್ರಕ್ರಿಯೆ, ನಿಯೋಜನೆ, ವೃತ್ತಿಪರ ಬೆಳವಣಿಗೆ, ಪ್ರೋತ್ಸಾಹಕಗಳು, ಇತ್ಯಾದಿಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಬೋಧಕ ಚಟುವಟಿಕೆಗಳಲ್ಲಿ ಶಿಕ್ಷಕರನ್ನು ಸಕ್ರಿಯವಾಗಿ ಹೆಚ್ಚಿನ ಸಮಯ ತೊಡಗಿಕೊಳ್ಳಲು ಬೇರೆ ಚಟುವಟಿಕೆಗಳಲ್ಲಿ ಶಿಕ್ಷಕರ ನಿಯೋಜನೆಯನ್ನು ಮಾಡದಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಶಿಕ್ಷಕರ ವೃತ್ತಿ ನಿರ್ವಹಣೆ ಮತ್ತು ಪ್ರಗತಿ, ವೃತ್ತಿಪರ ಮಾನಕಗಳು, ವಿಶೇಷ ಶಿಕ್ಷಕರ ನಿಯೋಜನೆ ಇವುಗಳ ಬಗ್ಗೆ ಚರ್ಚಿಸಲಾಗಿದೆ. ಈ ಬದಲಾವಣೆಗಳನ್ನು ತರಲು ಪೂರಕವಾಗಿ ಶಿಕ್ಷಕರ ಶಿಕ್ಷಣವನ್ನು ಮಾರ್ಪಡಿಸುವ ಬಗೆಗೆ ತಿಳಿಸಲಾಗಿದೆ. 2030ರ ವೇಳೆಗೆ 4 ವರ್ಷಗಳ ಬಿ.ಎಡ್. ಪದವಿಯನ್ನು ಬೋಧನಾ ವೃತ್ತಿ ಕೈಗೊಳ್ಳಲು ಬೇಕಾದ ಕನಿಷ್ಠ ಅಗತ್ಯತೆಯಾಗಿ ಪರಿಗಣಿಸುವ ಬಗೆಗೂ ಪ್ರಸ್ತಾಪಿಸಲಾಗಿದೆ.

5.1 ಶಿಕ್ಷಕರೇ ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವವರು ಹಾಗೂ ಆ ಮೂಲಕ ದೇಶದ ಭವಿಷ್ಯವನ್ನೂ ರೂಪಿಸುತ್ತಾರೆ. ಶಿಕ್ಷಕರ ಈ ಉದಾತ್ತ ಪಾತ್ರದಿಂದಾಗಿಯೇ ಅವರು ಸಮಾಜದ ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ. ಹಿಂದೆ ಅತ್ಯಂತ ಉತ್ತಮ ಮತ್ತು ಹೆಚ್ಚು ಕಲಿತವರು ಮಾತ್ರ ಶಿಕ್ಷಕ ವೃತ್ತಿಯನ್ನು ಕೈಗೊಳ್ಳುತ್ತಿದ್ದರು. ತಮ್ಮ ಜ್ಞಾನ, ಕೌಶಲ ಮತ್ತು ನೀತಿಗಳನ್ನು ವಿದ್ಯಾರ್ಥಿಗಳಿಗೆ ಅತ್ಯುತ್ತಮವಾಗಿ ಕಲಿಸಲು ಶಿಕ್ಷಕರಿಗೆ ಅಗತ್ಯವಾದುದೆಲ್ಲವನ್ನೂ ಸಮಾಜವು ನೀಡಿತು. ಆದರೆ ಇಂದು ಶಿಕ್ಷಕರ ಶಿಕ್ಷಣದ ಗುಣಮಟ್ಟ, ನೇಮಕಾತಿ, ನಿಯೋಜನೆ, ಸೇವಾ ಪರಿಸ್ಥಿತಿ ಮತ್ತು ಶಿಕ್ಷಕರ ಸಬಲೀಕರಣವು ಅಪೇಕ್ಷಿತ ರೀತಿಯಲ್ಲಿ ಇರುವುದಿಲ್ಲ. ಇದರ ಪರಿಣಾಮವಾಗಿ ಶಿಕ್ಷಕರ ಗುಣಮಟ್ಟ ಮತ್ತು ಪ್ರೇರಣೆಯು ಅಪೇಕ್ಷಿತ ಮಾನದಂಡಗಳಿಗೆ ಪೂರಕವಾಗಿಲ್ಲ. ಬೋಧನಾ ವೃತ್ತಿಗೆ ಉತ್ತಮ ವ್ಯಕ್ತಿಗಳು ಪ್ರವೇಶಿಸುವಂತೆ ಪ್ರೇರಣೆಗೊಳಿಸಲು ಶಿಕ್ಷಕರಿಗೆ ಹೆಚ್ಚಿನ ಗೌರವ ಮತ್ತು ಬೋಧನಾ ವೃತ್ತಿಯ ಉನ್ನತ ಸ್ಥಾನಮಾನವನ್ನು ಪುನಃ ಸ್ಥಾಪಿಸಬೇಕಾಗಿದೆ. ನಮ್ಮ ಮಕ್ಕಳಿಗೆ ಮತ್ತು ನಮ್ಮ ರಾಷ್ಟ್ರಕ್ಕೆ ಉತ್ತಮ ಭವಿಷ್ಯವನ್ನು ಖಾತರಿಪಡಿಸಲು ಶಿಕ್ಷಕರ ಪ್ರೇರಣೆ ಮತ್ತು ಸಬಲೀಕರಣ ಅಗತ್ಯವಾಗಿದೆ.

## ನೇಮಕಾತಿ ಮತ್ತು ನಿಯೋಜನೆ

5.2 ಅತ್ಯುತ್ತಮ ವಿದ್ಯಾರ್ಥಿಗಳು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಬೋಧನಾ ವೃತ್ತಿಗೆ ಪ್ರವೇಶಿಸುವುದನ್ನು ಖಚಿತಪಡಿಸಿಕೊಳ್ಳಲು, 4 ವರ್ಷದ ಗುಣಮಟ್ಟದ ಸಮಗ್ರ ಬಿ.ಎಡ್., ಅಧ್ಯಯನಕ್ಕಾಗಿ ದೇಶಾದ್ಯಂತ ಹೆಚ್ಚಿನ ಸಂಖ್ಯೆಯ ಅರ್ಹತೆ ಆಧಾರಿತ ವಿದ್ಯಾರ್ಥಿವೇತನ ನೀಡಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷ ಅರ್ಹತೆ ಆಧಾರಿತ ವಿದ್ಯಾರ್ಥಿವೇತನವನ್ನು ನೀಡಲಾಗುತ್ತದೆ. ಇದರ ಉದ್ದೇಶ, ವಿದ್ಯಾರ್ಥಿಗಳು ಬಿ.ಎಡ್., ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಸ್ಥಳೀಯ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ಉದ್ಯೋಗವನ್ನು ಪಡೆಯುವುದಾಗಿರುತ್ತದೆ. ಅಂತಹ ವಿದ್ಯಾರ್ಥಿವೇತನಗಳು ಸ್ಥಳೀಯ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ವಿದ್ಯಾರ್ಥಿನಿಯರಿಗೆ ಉದ್ಯೋಗಾವಕಾಶಗಳನ್ನು ಸ್ಥಳೀಯವಾಗಿ ಒದಗಿಸುತ್ತದೆ. ಇದರಿಂದಾಗಿ ಈ ವಿದ್ಯಾರ್ಥಿಗಳು ಸ್ಥಳೀಯ–ಪ್ರದೇಶದ ಆದರ್ಶಗಳಿಗನುಗುಣವಾಗಿ ಮತ್ತು ಸ್ಥಳೀಯ ಭಾಷೆಯಲ್ಲಿ ಸಂವಹನ ಮಾಡುವ ಅರ್ಹ ಶಿಕ್ಷಕರಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಗುಣಮಟ್ಟದ ಶಿಕ್ಷಕರ ಕೊರತೆಯನ್ನು ಎದುರಿಸುತ್ತಿರುವ ಪ್ರದೇಶಗಳಲ್ಲಿ ಬೋಧನಾ ವೃತ್ತಿಯನ್ನು ಕೈಗೊಳ್ಳಲು ಪ್ರೋತ್ಸಾಹ ನೀಡಲಾಗುವುದು. ಈ ಪ್ರೋತ್ಸಾಹ ಹಣದ ರೂಪದಲ್ಲಿರುವುದಿಲ್ಲ. ಗ್ರಾಮೀಣ ಶಾಲೆಗಳಲ್ಲಿ ಬೋಧನಾ ವೃತ್ತಿಯನ್ನು ಕೈಗೊಳ್ಳಲು ನೀಡಲಾಗುವ ಒಂದು ಪ್ರಮುಖ ಪ್ರೋತ್ಸಾಹವೆಂದರೆ, ಶಾಲಾ ಆವರಣದ ಬಳಿ ಅಥವಾ ಹತ್ತಿರದಲ್ಲಿ ಶಿಕ್ಷಕರಿಗೆ ವಸತಿಗಳನ್ನು ಒದಗಿಸುವುದು ಅಥವಾ ವಸತಿ ಭತ್ಯೆಯನ್ನು ಹೆಚ್ಚಿಸುವುದು.

5.3 ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಕರ ವರ್ಗಾವಣೆ ಮಾಡುವ ಹಾನಿಕಾರಕ ಅಭ್ಯಾಸವನ್ನು ನಿಲ್ಲಿಸಲಾಗುವುದು. ಇದರಿಂದ ವಿದ್ಯಾರ್ಥಿಗಳಿಗೆ ಆದರ್ಶಗಳನ್ನು ಮುಂದುವರಿಸಿಕೊಂಡು ಹೋಗಲು ಮತ್ತು ಶೈಕ್ಷಣಿಕ ಪರಿಸರದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಬಹಳ ವಿಶೇಷ ಸಂದರ್ಭಗಳಲ್ಲಿ ರಾಜ್ಯ ಸರ್ಕಾರಗಳಿಂದ ರಚನಾತ್ಮಕ ರೀತಿಯಲ್ಲಿ ಸೂಕ್ತವಾಗಿ ರೂಪಿಸಲಾದ ವಿಧಾನದಲ್ಲಿ ಶಿಕ್ಷಕರ ವರ್ಗಾವಣೆಗಳನ್ನು ಮಾಡಲಾಗುತ್ತದೆ. ಇದಲ್ಲದೆ, ಪಾರದರ್ಶಕತೆಯನ್ನು ಖಚಿತಪಡಿಸುವ ಆನ್‌ಲೈನ್ ಗಣಕೀಕೃತ ವ್ಯವಸ್ಥೆಯ ಮೂಲಕ ವರ್ಗಾವಣೆಗಳನ್ನು ಮಾಡಲಾಗುತ್ತದೆ.

5.4 ಪಠ್ಯವಿಷಯ ಮತ್ತು ಬೋಧನಾಶಾಸ್ತ್ರಗಳೆರಡರ ದೃಷ್ಟಿಯಿಂದ ಉತ್ತಮ ಪರೀಕ್ಷಾ ಸಾಮಗ್ರಿಗಳನ್ನು ರೂಪಿಸಲು ಶಿಕ್ಷಕರ ಅರ್ಹತಾ ಪರೀಕ್ಷೆಗಳನ್ನು (TET) ಬಲಪಡಿಸಲಾಗುತ್ತದೆ. ಶಾಲಾ ಶಿಕ್ಷಣದ ಎಲ್ಲಾ ಹಂತಗಳ (ಬುನಾದಿ, ಪೂರ್ವಸಿದ್ಧತಾ, ಮಾಧ್ಯಮಿಕ ಮತ್ತು ಪ್ರೌಢ) ಶಿಕ್ಷಕರ ನೇಮಕಾತಿಗಾಗಿ TET ಯನ್ನು ನಡೆಸಲಾಗುವುದು. ವಿಷಯ ಶಿಕ್ಷಕರ ನೇಮಕಾತಿಗಾಗಿ, ಸಂಬಂಧಿತ ವಿಷಯಗಳಲ್ಲಿ ಪಡೆದ TET ಅಥವಾ NTA ಪರೀಕ್ಷಾ ಅಂಕಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಶಾಲೆಗಳು ಮತ್ತು ಶಾಲಾ ಸಂಕೀರ್ಣಗಳಲ್ಲಿ ಶಿಕ್ಷಕರ ನೇಮಕ ಪ್ರಕ್ರಿಯೆಯಲ್ಲಿ, ಬೋಧನೆಯ ಬಗ್ಗೆ ಒಲವು ಮತ್ತು ಪ್ರೇರಣೆಯನ್ನು ತಿಳಿದುಕೊಳ್ಳಲು, ಬೋಧನಾ ಪ್ರಾತ್ಯಕ್ಷಿತೆ ಅಥವಾ ಸಂದರ್ಶನವನ್ನು ನಡೆಸಲಾಗುತ್ತದೆ. ಈ ಸಂದರ್ಶನವು ಪ್ರತಿ ಶಾಲೆ/ಶಾಲಾ ಸಂಕೀರ್ಣದಲ್ಲಿ ಸ್ಥಳೀಯ ಭಾಷೆ ಅಥವಾ ವಿದ್ಯಾರ್ಥಿಗಳ ಮನೆ ಭಾಷೆಯಲ್ಲಿ ಅವರೊಂದಿಗೆ ಸಂವಹನ ಮಾಡುವ ಕೆಲವು ಶಿಕ್ಷಕರಾದರೂ ನೇಮಕಗೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳಲು ಉಪಯುಕ್ತವಾಗುತ್ತದೆ. ಸಂದರ್ಶನದಲ್ಲಿ ಸ್ಥಳೀಯ ಭಾಷೆಯಲ್ಲಿನ ಶಿಕ್ಷಕರ ಬೋಧನಾ ಸಾಮರ್ಥ್ಯ ಮತ್ತು ಪ್ರಾವೀಣ್ಯತೆಯನ್ನೂ ನಿರ್ಧರಿಸಲಾಗುತ್ತದೆ. ಖಾಸಗಿ ಶಾಲೆಗಳಲ್ಲಿ ಬೋಧಿಸುವ ಶಿಕ್ಷಕರೂ ಸಹ ಇದೇ ರೀತಿ TET ಗಳ ಮೂಲಕ, ಪ್ರಾತ್ಯಕ್ಷಿತೆ / ಸಂದರ್ಶನ ಮತ್ತು ಸ್ಥಳೀಯ ಭಾಷೆ (ಗಳ) ಜ್ಞಾನದ ಅರ್ಹತೆ ಪಡೆದಿರಬೇಕು.

5.5 ಕಲೆ, ದೈಹಿಕ ಶಿಕ್ಷಣ ಮತ್ತು ಭಾಷೆಗಳೂ ಸೇರಿದಂತೆ, ಎಲ್ಲಾ ವಿಷಯಗಳಲ್ಲಿ ಸಾಕಷ್ಟು ಸಂಖ್ಯೆಯ ಶಿಕ್ಷಕರು ದೊರೆಯುವುದನ್ನು ಖಚಿತಪಡಿಸಿಕೊಳ್ಳಲು ಶಿಕ್ಷಕರನ್ನು ಶಾಲೆ ಅಥವಾ ಶಾಲಾ ಸಂಕೀರ್ಣಕ್ಕಾಗಿ ನೇಮಕ ಮಾಡಿಕೊಳ್ಳಬಹುದು. ರಾಜ್ಯ ಸರ್ಕಾರಗಳು ನಿರ್ಧರಿಸಿದ ಶಾಲೆಗಳ ಗುಂಪಿಗೆ/ಸಂಕೀರ್ಣಗಳಿಗೆ ಅನುಸಾರವಾಗಿ ಶಾಲೆಗಳಾದ್ಯಂತ ಶಿಕ್ಷಕರ ಹಂಚಿಕೆಯನ್ನು ಮಾಡಬಹುದು.

5.6 ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಸ್ಥಳೀಯ ಜ್ಞಾನ ಮತ್ತು ವೃತ್ತಿಗಳನ್ನು ಸಂರಕ್ಷಿಸಲು, ಸಾಂಪ್ರದಾಯಿಕ ಸ್ಥಳೀಯ ಕಲೆಗಳು, ವೃತ್ತಿಪರ ಕರಕೌಶಲ, ಉದ್ಯಮಶೀಲತೆ, ಕೃಷಿ, ಅಥವಾ ಸ್ಥಳೀಯ ಪರಿಣತಿ ಇರುವ ಯಾವುದೇ ವಿಷಯದಲ್ಲಿ ಸ್ಥಳೀಯ ಪ್ರಖ್ಯಾತ ವ್ಯಕ್ತಿಗಳನ್ನು ಅಥವಾ ತಜ್ಞರನ್ನು 'ಮಾಸ್ಟರ್ ಬೋಧಕರಾಗಿ' ನೇಮಿಸಿಕೊಳ್ಳಲು ಶಾಲೆಗಳು / ಶಾಲೆ ಸಂಕೀರ್ಣಗಳನ್ನು ಪ್ರೋತ್ಸಾಹಿಸಲಾಗುತ್ತದೆ.

5.7 ಮುಂದಿನ ಎರಡು ದಶಕಗಳಿಗೆ ಅಗತ್ಯವಾದ ವಿಷಯವಾರು ಶಿಕ್ಷಕರ ಹುದ್ದೆಗಳ ನಿರೀಕ್ಷಿತ ಸಂಖ್ಯೆಯನ್ನು ಪೂರ್ವಭಾವಿಯಾಗಿ ನಿರ್ಧರಿಸಲಾಗುತ್ತದೆ. ಇದಕ್ಕಾಗಿ ತಂತ್ರಜ್ಞಾನ ಆಧಾರಿತ ಶಿಕ್ಷಕರ ಅವಶ್ಯಕತೆ ಯೋಜನೆಯನ್ನು ರೂಪಿಸುವ ಪ್ರಯತ್ನವನ್ನು ಪ್ರತಿ ರಾಜ್ಯವು ಕೈಗೊಳ್ಳುತ್ತದೆ. ಎಲ್ಲಾ ಖಾಲಿ ಹುದ್ದೆಗಳನ್ನು ಸ್ಥಳೀಯ ಶಿಕ್ಷಕರು ಸೇರಿದಂತೆ ಅರ್ಹ ಶಿಕ್ಷಕರಿಂದ ಭರ್ತಿ ಮಾಡಲು, ವೃತ್ತಿ ನಿರ್ವಹಣೆ ಮತ್ತು ಪ್ರಗತಿಯ ಸೂಕ್ತ ಪ್ರೋತ್ಸಾಹದೊಂದಿಗೆ, ನೇಮಕಾತಿ ಮತ್ತು ನಿಯೋಜನೆಯಲ್ಲಿ ಮೇಲೆ ವಿವರಿಸಿದ ಉಪಕ್ರಮಗಳನ್ನು ಕಾಲ ಕ್ರಮೇಣ ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಲಾಗುತ್ತದೆ. ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳೂ ಸಹ ಈ ರೀತಿಯಾಗಿ ಪ್ರತಿಫಲಿತವಾಗುವ ಖಾಲಿ ಹುದ್ದೆಗಳೊಂದಿಗೆ ಸಮ್ಮಿಳಿತಗೊಳ್ಳುತ್ತವೆ.

5.8 ಶಾಲೆಗಳ ಸೇವಾ ಪರಿಸರ ಮತ್ತು ಸಂಸ್ಕೃತಿಯನ್ನು ಕೂಲಂಕಷವಾಗಿ ಪರಿಶೀಲಿಸುವ ಪ್ರಾಥಮಿಕ ಉದ್ದೇಶ ತಮ್ಮ ಕೆಲಸಗಳನ್ನು ಪರಿಣಾಮಕಾರಿಯಾಗಿ ಮಾಡುವಂತೆ ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ. ಶಿಕ್ಷಕರು ಮಕ್ಕಳ ಕಲಿಕೆಯನ್ನು ಖಚಿತಪಡಿಸುವ ಗುರಿಯೊಂದಿಗೆ ವಿದ್ಯಾರ್ಥಿಗಳು, ಪೋಷಕರು, ಪ್ರಾಂಶುಪಾಲರು ಮತ್ತು ಇತರ ಸಹಾಯಕ ಸಿಬ್ಬಂದಿಯನ್ನು ಒಳಗೊಂಡ ಸ್ಪಂದನಶೀಲ, ಕಾಳಜಿಯುತ ಸಮುದಾಯದ ಭಾಗವಾಗಿಯೂ ಇರುವುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

5.9 ಈ ದಿಶೆಯಲ್ಲಿನ ಮೊದಲ ಹಂತ, ಶಾಲೆಗಳಲ್ಲಿ ಯೋಗ್ಯ ಮತ್ತು ಆಹ್ಲಾದಕರ ಸೇವಾ ಪರಿಸ್ಥಿತಿಗಳನ್ನು ಖಚಿತಪಡಿಸಿಕೊಳ್ಳುವುದು. ಶಿಕ್ಷಕರು, ವಿಶೇಷಚೇತನ ಮಕ್ಕಳು ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಸುರಕ್ಷಿತ, ಸಮನ್ವಯಿತ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣ ಸೃಷ್ಟಿಸುವುದು. ಇದರೊಂದಿಗೆ ತಮ್ಮ ಶಾಲೆಗಳಲ್ಲಿ ಶಿಕ್ಷಕರು ಕಲಿಸಲು ಮತ್ತು ವಿದ್ಯಾರ್ಥಿಗಳು ಕಲಿಯಲು ಉತ್ಸುಕರಾಗುವುದನ್ನು ಖಚಿತಪಡಿಸಿಕೊಳ್ಳಲು, ಎಲ್ಲಾ ಶಾಲೆಗಳಿಗೆ ಉತ್ತಮ ಶೌಚಾಲಯಗಳು, ಶುದ್ಧ ಕುಡಿಯುವ ನೀರು, ಸ್ವಚ್ಛ ಮತ್ತು ಮನರಂಜನಾತ್ಮಕ ವ್ಯವಸ್ಥೆಗಳು, ವಿದ್ಯುತ್ ಸೌಲಭ್ಯ, ಗಣಕಯಂತ್ರಗಳು, ಇಂಟರ್ನೆಟ್, ಗ್ರಂಥಾಲಯಗಳು ಮತ್ತು ಕ್ರೀಡೆ ಹಾಗೂ ಮನರಂಜನಾ ಸಂಪನ್ಮೂಲಗಳನ್ನು ಒಳಗೊಂಡಂತೆ ಸಾಕಷ್ಟು ಮೂಲಸೌಕರ್ಯಗಳನ್ನು ಒದಗಿಸಲಾಗುವುದು. ಎಲ್ಲಾ ಶಿಕ್ಷಕರುಗಳಿಗೆ ಈ ಸೌಲಭ್ಯಗಳ ಬಗ್ಗೆ ಅರಿವು ಇರುವುದನ್ನು ಖಚಿತಪಡಿಸಿಕೊಳ್ಳಲು, ಸೇವಾ ನಿರತ ಶಿಕ್ಷಕರ ತರಬೇತಿಯಲ್ಲಿ ಶಾಲಾ ಸ್ಥಳದ ಸುರಕ್ಷತೆ, ಆರೋಗ್ಯ ಮತ್ತು ಪರಿಸರದ ಕುರಿತು ಮಾಹಿತಿಯನ್ನು ನೀಡಲಾಗುತ್ತದೆ.

5.10 ಪರಿಣಾಮಕಾರಿ ಶಾಲಾ ಆಡಳಿತ, ಸಂಪನ್ಮೂಲ ಹಂಚಿಕೆ ಮತ್ತು ಸಮುದಾಯ ನಿರ್ಮಾಣ, ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಕುಸಿತವಾಗದಂತೆ ರಾಜ್ಯ ಸರ್ಕಾರಗಳು ಯಾವುದೇ ರೀತಿಯಲ್ಲಿ ಶಾಲಾ ಸಂಕೀರ್ಣಗಳನ್ನು ಯೋಜನಾಬದ್ಧಗೊಳಿಸುವ ನವೀನ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು. ಶಾಲಾ ಸಂಕೀರ್ಣಗಳ ರಚನೆಯು ಉತ್ಸಾಹಿ ಶಿಕ್ಷಕ ಸಮುದಾಯಗಳನ್ನು ನಿರ್ಮಿಸಲು ಸಹಾಯಕವಾಗುತ್ತದೆ. ಶಾಲಾ ಸಂಕೀರ್ಣಗಳಿಗೆ ಶಿಕ್ಷಕರನ್ನು ನೇಮಿಸಿಕೊಳ್ಳುವುದರಿಂದ ಶಾಲಾ ಸಂಕೀರ್ಣದಾದ್ಯಂತ ಶಾಲೆಗಳ ನಡುವೆ ಸ್ವಯಂಚಾಲಿತವಾಗಿ ಸಂಬಂಧಗಳು ಏರ್ಪಡುತ್ತವೆ; ಇದರಿಂದ ಹೆಚ್ಚು ಸ್ಪಂದನಾಶೀಲ ಶಿಕ್ಷಕರ ಜ್ಞಾನದ ನೆಲೆಯನ್ನು ಸೃಷ್ಟಿಸುವುದರೊಂದಿಗೆ ಶಿಕ್ಷಕರ ವಿಷಯವಾರು ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಚಿಕ್ಕ ಶಾಲೆಗಳಲ್ಲಿನ ಶಿಕ್ಷಕರು ಇನ್ನು ಮುಂದೆ ಪ್ರತ್ಯೇಕವಾಗಿ ಉಳಿಯುವುದಿಲ್ಲ. ಎಲ್ಲಾ ಮಕ್ಕಳು ಕಲಿಯುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಚಿಕ್ಕ ಶಾಲೆಗಳು ದೊಡ್ಡದಾದ ಶಾಲಾ ಸಂಕೀರ್ಣದ ಭಾಗವಾಗಬಹುದು ಮತ್ತು ಉತ್ತಮ ಅಭ್ಯಾಸಗಳನ್ನು ಪರಸ್ಪರ ಹಂಚಿಕೊಳ್ಳಬಹುದು ಹಾಗೂ ಸಹಭಾಗಿತ್ವದಲ್ಲಿ ಕೆಲಸ ಮಾಡಬಹುದು. ಶಾಲಾ ಸಂಕೀರ್ಣಗಳು ಶಿಕ್ಷಕರನ್ನು ಮತ್ತಷ್ಟು ಉತ್ತೇಜಿಸಲು ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಸೃಷ್ಟಿಸುವಲ್ಲಿ ಸಹಾಯ ಮಾಡಲು ಸಲಹೆಗಾರರು, ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು, ತಾಂತ್ರಿಕ ಮತ್ತು ನಿರ್ವಹಣಾ ಸಿಬ್ಬಂದಿ ಇತ್ಯಾದಿಗಳ ಸೇವೆಯನ್ನೂ ಸಹ ಹಂಚಿಕೊಳ್ಳಬಹುದು.

5.11 ಪೋಷಕರು ಮತ್ತು ಇತರ ಪ್ರಮುಖ ಸ್ಥಳೀಯ ಭಾಗೀದಾರರ ಸಹಯೋಗದೊಂದಿಗೆ ಶಿಕ್ಷಕರು, ಶಾಲೆಗಳು / ಶಾಲಾ ಸಂಕೀರ್ಣಗಳ ಆಡಳಿತದಲ್ಲಿ (ಶಾಲಾ ನಿರ್ವಹಣಾ ಸಮಿತಿಗಳು / ಶಾಲಾ ಸಂಕೀರ್ಣ ನಿರ್ವಹಣಾ ಸಮಿತಿಗಳ ಸದಸ್ಯರಾಗಿಯೂ ಸಹ) ಹೆಚ್ಚು ತೊಡಗಿಸಿಕೊಳ್ಳುತ್ತಾರೆ.

5.12 ಬೋಧಕೇತರ ಚಟುವಟಿಕೆಗಳಿಗಾಗಿ ಶಿಕ್ಷಕರ ಹೆಚ್ಚಿನ ಸಮಯ ವ್ಯಯವಾಗುತ್ತಿರುವುದನ್ನು ತಡೆಯಲು, ಬೋಧನೆಗೆ ನೇರವಾಗಿ ಸಂಬಂಧಿಸದ ಕೆಲಸದಲ್ಲಿ ಶಿಕ್ಷಕರನ್ನು ಇನ್ನು ಮುಂದೆ ತೊಡಗಿಸಿಕೊಳ್ಳುವುದಿಲ್ಲ; ನಿರ್ದಿಷ್ಟವಾಗಿ ಹೇಳುವುದಾದರೆ, ಶಿಕ್ಷಕರು ಆಡಳಿತಾತ್ಮಕ ಮತ್ತು ಮಧ್ಯಾಹ್ನದ ಬಿಸಿ ಊಟ ಸಂಬಂಧಿತ ಕೆಲಸಗಳಿಗಾಗಿ ಅಗತ್ಯ ಮತ್ತು ತರ್ಕಬದ್ಧವಾದ ಕನಿಷ್ಠ ಸಮಯಕ್ಕಿಂತ ಹೆಚ್ಚಿನ ಸಮಯ ವ್ಯಯಿಸುವುದಿಲ್ಲ. ಇದರಿಂದ ಅವರು ತಮ್ಮ ಬೋಧನೆ ಮತ್ತು ಕಲಿಕೆಯ ಕರ್ತವ್ಯಗಳ ಮೇಲೆ ಸಂಪೂರ್ಣವಾಗಿ ಗಮನಹರಿಸಬಹುದು.

5.13 ಪ್ರಾಂಶುಪಾಲರು ಮತ್ತು ಶಿಕ್ಷಕರಿಂದ ತಮ್ಮ ಶಾಲೆಗಳಲ್ಲಿ ಕಾಳಜಿಯುತ ಮತ್ತು ಸಮನ್ವಯಿತ ಸಂಸ್ಕೃತಿ ನಿರ್ಮಿಸುವುದನ್ನು ನಿರೀಕ್ಷಿಸಲಾಗುತ್ತದೆ. ಇದರಿಂದಾಗಿ ಪರಿಣಾಮಕಾರಿ ಕಲಿಕೆ ಮತ್ತು ಎಲ್ಲಾ ಭಾಗೀದಾರರ ಪ್ರಯೋಜನಕ್ಕಾಗಿ, ಶಾಲೆಗಳು ಸಕಾರಾತ್ಮಕ ಕಲಿಕೆಯ ವಾತಾವರಣ ಉಂಟುಮಾಡುವುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

5.14 ಬೋಧನಾ ವಿಧಾನಗಳನ್ನು ಆಯ್ಕೆಮಾಡಿಕೊಳ್ಳಲು ಶಿಕ್ಷಕರಿಗೆ ಹೆಚ್ಚಿನ ಸ್ವಾಯತ್ತತೆ ನೀಡಲಾಗುವುದು. ಇದರಿಂದಾಗಿ ಅವರು ತಮ್ಮ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಪರಿಣಾಮಕಾರಿ ಎನಿಸುವ ರೀತಿಯಲ್ಲಿ ಕಲಿಸಬಹುದು. ಶಿಕ್ಷಕರು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ನಿರ್ಣಾಯಕ ಅಂಶವಾದ ಸಾಮಾಜಿಕ-ಭಾವನಾತ್ಮಕ ಕಲಿಕೆಯ ಮೇಲೂ ಗಮನಹರಿಸುತ್ತಾರೆ. ಕಲಿಕಾ ಫಲಗಳ ಸುಧಾರಣೆಗಾಗಿ ತಮ್ಮ ತರಗತಿ ಬೋಧನೆಯಲ್ಲಿ ಹೊಸ ವಿಧಾನಗಳನ್ನು ಅನುಸರಿಸುವ ಶಿಕ್ಷಕರನ್ನು ಗುರುತಿಸಲಾಗುತ್ತದೆ.

## ನಿರಂತರ ವೃತ್ತಿಪರ ಅಭಿವೃದ್ಧಿ (ಸಿಪಿಡಿ)

5.15 ಶಿಕ್ಷಕರ ಸ್ವಯಂ ಸುಧಾರಣೆ ಮತ್ತು ಅವರ ವೃತ್ತಿಯಲ್ಲಿನ ಇತ್ತೀಚಿನ ಆವಿಷ್ಕಾರಗಳು ಮತ್ತು ಬೆಳವಣಿಗೆಗಳ ಬಗ್ಗೆ ಕಲಿಯಲು ನಿರಂತರ ಅವಕಾಶಗಳನ್ನು ಒದಗಿಸಲಾಗುವುದು. ಸ್ಥಳೀಯ, ಪ್ರಾದೇಶಿಕ, ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕಾರ್ಯಾಗಾರಗಳು ಮತ್ತು ಆನ್‌ಲೈನ್ ಶಿಕ್ಷಕರ ತರಬೇತಿ ಯೋಜನೆಗಳು ಸೇರಿದಂತೆ ವಿವಿಧ ವಿಧಾನಗಳ ಮೂಲಕ ಇಂತಹ ಅವಕಾಶಗಳನ್ನು ನೀಡಬಹುದಾಗಿದೆ.

ಶಿಕ್ಷಕರು ತಮ್ಮ ವಿಚಾರಗಳನ್ನು ಮತ್ತು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಸೂಕ್ತ ವೇದಿಕೆಗಳನ್ನು (ವಿಶೇಷವಾಗಿ ಆನ್‌ಲೈನ್ ವೇದಿಕೆಗಳು) ಅಭಿವೃದ್ಧಿಪಡಿಸಲಾಗುವುದು. ಪ್ರತಿ ಶಿಕ್ಷಕರು ತಮ್ಮ ಆಸಕ್ತಿಗಳಾಧಾರಿತ ವೃತ್ತಿಪರ ಬೆಳವಣಿಗೆಗಾಗಿ ಪ್ರತಿವರ್ಷ ಕನಿಷ್ಠ 50 ಗಂಟೆಗಳ 'ಸಿಪಿಡಿ' ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಇಂತಹ ಸಿಪಿಡಿ ಕಾರ್ಯಕ್ರಮಗಳು ಬುನಾದಿ ಅಕ್ಷರ ಜ್ಞಾನ ಮತ್ತು ಗಣಿತ ಕೌಶಲ, ಕಲಿಕಾ ಫಲಗಳ ರಚನಾತ್ಮಕ ಮತ್ತು ಹೊಂದಾಣಿಕೆಯ ಮೌಲ್ಯಮಾಪನ, ಸಾಮರ್ಥ್ಯ ಆಧಾರಿತ ಕಲಿಕೆ, ಅನುಭವಾತ್ಮಕ ಕಲಿಕೆ, ಕಲೆ–ಸಂಯೋಜಿತ, ಕ್ರೀಡಾ–ಸಂಯೋಜಿತ ಮತ್ತು ಕಥೆ ಹೇಳುವಿಕೆಯಂತಹ ಬೋಧನಾ ವಿಧಾನಗಳನ್ನು ಒಳಗೊಂಡಿರುತ್ತವೆ.

5.16 ಶಾಲಾ ಪ್ರಾಂಶುಪಾಲರು ಮತ್ತು ಶಾಲಾ ಸಂಕೀರ್ಣದ ಮುಖ್ಯಸ್ಥರು ತಮ್ಮ ನಾಯಕತ್ವ ಮತ್ತು ನಿರ್ವಹಣಾ ಕೌಶಲಗಳನ್ನು ನಿರಂತರವಾಗಿ ಸುಧಾರಿಸಿಕೊಳ್ಳಲು, ಇದೇ ರೀತಿಯ ಯೋಜನೆಗಳನ್ನು ಆಧರಿಸಿದ ನಾಯಕತ್ವ / ನಿರ್ವಹಣಾ ಕಾರ್ಯಾಗಾರಗಳು ಮತ್ತು ಆನ್ಲೈನ್ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ. ಇದರಿಂದ ಅವರೂ ಸಹ ಉತ್ತಮ ಅಭ್ಯಾಸಗಳನ್ನು ಪರಸ್ಪರ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಅಂತಹ ಮುಖ್ಯಸ್ಥರು ವರ್ಷಕ್ಕೆ 50 ಗಂಟೆಗಳ ಅಥವಾ ಅದಕ್ಕಿಂತ ಹೆಚ್ಚಿನ ಸಿಪಿಡಿ ಯೋಜನೆಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಈ ಯೋಜನೆಗಳನ್ನು ನಾಯಕತ್ವ ಮತ್ತು ನಿರ್ವಹಣಾ ಕೌಶಲಗಳು, ಸಾಮರ್ಥ್ಯ ಆಧಾರಿತ ಬೋಧನಾ ವಿಧಾನಗಳ ಸಂಬಂಧ ಯೋಜನೆಗಳನ್ನು ಸಿದ್ಧಪಡಿಸುವುದು ಹಾಗೂ ಪಠ್ಯವಿಷಯ ಮತ್ತು ಬೋಧನಾ ವಿಧಾನಗಳನ್ನು ಆಧರಿಸಿ ಸಿದ್ಧಪಡಿಸಲಾಗುತ್ತದೆ.

## ವೃತ್ತಿ ನಿರ್ವಹಣೆ ಮತ್ತು ಪ್ರಗತಿ (ಸಿಎಂಪಿ)

5.17 ಎಲ್ಲಾ ಶಿಕ್ಷಕರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವಂತೆ ಪ್ರೋತ್ಸಾಹಿಸಲು, ಉತ್ತಮ ಕೆಲಸ ಮಾಡುವ ಶಿಕ್ಷಕರನ್ನು ಗುರುತಿಸಿ ಬಡ್ತಿ ನೀಡಬೇಕು ಮತ್ತು ಅವರ ವೇತನ ಹೆಚ್ಚಳ ಮಾಡಬೇಕು. ಇದಕ್ಕಾಗಿ ಅತ್ಯುತ್ತಮ ಶಿಕ್ಷಕರನ್ನು ಗುರುತಿಸಲು ಮತ್ತು ಉತ್ತೇಜಿಸಲು ಅರ್ಹತೆಯನ್ನು ಆಧರಿಸಿದ ಸೇವಾವಧಿ, ಬಡ್ತಿ ಮತ್ತು ವೇತನ ವ್ಯವಸ್ಥೆಯನ್ನು ರೂಪಿಸಲಾಗುವುದು. ಶಿಕ್ಷಕರ ಕಾರ್ಯನಿರ್ವಹಣೆಯ ಸಮರ್ಪಕ ಮೌಲ್ಯಮಾಪನಕ್ಕಾಗಿ, ಸಹೋದ್ಯೋಗಿಗಳ ವಿಮರ್ಶೆ, ಹಾಜರಾತಿ, ಬದ್ಧತೆ, ಸಿಪಿಡಿಗೆ ವಿನಿಯೋಗಿಸಿದ ಸಮಯ, ಮತ್ತು ಶಾಲೆ ಹಾಗೂ ಸಮುದಾಯಕ್ಕೆ ಇತರ ರೀತಿಯ ಸೇವೆಯನ್ನು ಆಧರಿಸಿದ ಅಥವಾ ಪ್ಯಾರಾ 5.20 ರಲ್ಲಿ ಹೇಳಿದಂತೆ NPST ಯ ಮಾನಕಗಳನ್ನು ಆಧರಿಸಿದ ಅನೇಕ ನಿಯತಾಂಕಗಳ ಒಂದು ವ್ಯವಸ್ಥೆಯನ್ನು ರಾಜ್ಯ ಸರ್ಕಾರಗಳು ಅಭಿವೃದ್ಧಿಪಡಿಸುತ್ತವೆ. ಇಲ್ಲಿ ಸೇವಾವಧಿ ಎಂದರೆ, ಶಿಕ್ಷಕರ ಕಾರ್ಯನಿರ್ವಹಣೆ ಮತ್ತು ಕೊಡುಗೆಗಳ ಸೂಕ್ತ ಮೌಲ್ಯಾಂಕನದ ನಂತರ, 'ಶಾಶ್ವತ ಉದ್ಯೋಗದ ದೃಢೀಕರಣವನ್ನು ಸೂಚಿಸುತ್ತದೆ. 'ಸೇವಾವಧಿಯ ದಾಖಲೆ' ಸೇವಾವಧಿಯ ಹಿಂದಿನ ಪರೀಕ್ಷಾರ್ಥ ಅವಧಿ (Probationary Period)ಯನ್ನು ಸೂಚಿಸುತ್ತದೆ.

5.18 ಇದಲ್ಲದೆ, ಒಂದೇ ಶಾಲಾ ಹಂತದಲ್ಲಿ (ಅಂದರೆ, ಬುನಾದಿ, ಪೂರ್ವಸಿದ್ಧತಾ, ಮಾಧ್ಯಮಿಕ ಅಥವಾ ಪ್ರೌಢ) ಶಿಕ್ಷಕರಿಗೆ ವೃತ್ತಿ ಬೆಳವಣಿಗೆ ಸೌಲಭ್ಯಗಳು (ಸೇವಾವಧಿ, ಬಡ್ತಿ, ವೇತನ ಹೆಚ್ಚಳ, ಇತ್ಯಾದಿ) ಲಭ್ಯವಾಗುವಂತೆ ಮತ್ತು ಆರಂಭಿಕ ಹಂತಗಳ ಶಿಕ್ಷಕರು ನಂತರದ ಹಂತಗಳಿಗೆ ಅಥವಾ ನಂತರದ ಹಂತಗಳ ಶಿಕ್ಷಕರು ಆರಂಭಿಕ ಹಂತಗಳಿಗೆ ಸಾಗಲು ವೃತ್ತಿ ಪ್ರಗತಿಗೆ ಸಂಬಂಧಿಸಿದ ಪ್ರೋತ್ಸಾಹಗಳು (ಶಿಕ್ಷಕರಿಗೆ ಅಂತಹ ಕ್ರಮಕ್ಕಾಗಿ ಬಯಕೆ ಮತ್ತು ಅರ್ಹತೆಗಳು ಇದ್ದಲ್ಲಿ, ಅಂತಹ ಚಲನೆಗಳನ್ನು ಅನುಮತಿಸಲಾಗುವುದು) ಇಲ್ಲದಿರುವಂತೆ ನೋಡಿಕೊಳ್ಳಲಾಗುವುದು. ಶಾಲಾ ಶಿಕ್ಷಣದ ಎಲ್ಲಾ ಹಂತಗಳಿಗೆ ಉನ್ನತ–ಗುಣಮಟ್ಟದ ಶಿಕ್ಷಕರ ಅಗತ್ಯವಿರುತ್ತದೆ. ಯಾವುದೇ ಹಂತವನ್ನು ಇತರ ಹಂತಗಳಿಗಿಂತ ಹೆಚ್ಚು ಮುಖ್ಯವೆಂದು ಪರಿಗಣಿಸಲಾಗುವುದಿಲ್ಲ ಎಂಬುದನ್ನು ಖಚಿತಪಡಿಸಲು ಇದು ಅಗತ್ಯವಾಗಿದೆ.

5.19 ಅರ್ಹತೆಯ ಆಧಾರದ ಮೇಲೆ ಶಿಕ್ಷಕರ ಮೇಲ್ಮುಖ ಚಲನೆಗೂ (Vertical Mobility) ಪ್ರಾತಿನಿಧ್ಯ ನೀಡಲಾಗುತ್ತದೆ. ಶಾಲೆಗಳು, ಶಾಲಾ ಸಂಕೀರ್ಣಗಳು CRC, BRC, BITE, DIET ಮತ್ತು ಸಂಬಂಧಿತ ಸರ್ಕಾರಿ ಇಲಾಖೆಗಳಲ್ಲಿ ಶೈಕ್ಷಣಿಕ ನಾಯಕತ್ವ ಪಾತ್ರ ನಿರ್ವಹಿಸಲು, ನಾಯಕತ್ವ ಮತ್ತು ನಿರ್ವಹಣಾ ಕೌಶಲ ಹೊಂದಿರುವ ಅತ್ಯುತ್ತಮ ಶಿಕ್ಷಕರಿಗೆ ಕಾಲಾನಂತರದಲ್ಲಿ ತರಬೇತಿ ನೀಡಲಾಗುವುದು.

## ಶಿಕ್ಷಕರಿಗೆ ವೃತ್ತಿಪರ ಮಾನಕಗಳು

5.20 ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನಕಗಳ (NPST – National Professional Standards for Teachers) ಸಾಮಾನ್ಯ ಮಾರ್ಗದರ್ಶಿಯನ್ನು 2022 ರ ವೇಳೆಗೆ ರೂಪಿಸಲು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಲಿಯನ್ನು ಸಾಮಾನ್ಯ ಶಿಕ್ಷಣ ಮಂಡಳಿಯ (GEC – General Education Committee) ಅಡಿಯಲ್ಲಿ NCTE – National Council for Teacher Education ಯನ್ನು ವೃತ್ತಿಪರ ಮಾನಕಗಳ ನಿರ್ಧಾರಕ ಮಂಡಳಿಯಾಗಿ (PSSB – Professional Standard Setting Board) ಪುನರ್ರಚಿಸಲಾಗುತ್ತದೆ. NCERT, SCERT ಗಳು, ವಿವಿಧ ಹಂತದ ಮತ್ತು ಪ್ರದೇಶಗಳ ಶಿಕ್ಷಕರು, ಶಿಕ್ಷಕರ ಸಿದ್ಧತೆ ಮತ್ತು ಅಭಿವೃದ್ಧಿಯಲ್ಲಿ ಪರಿಣಿತ ಸಂಸ್ಥೆಗಳು, ವೃತ್ತಿಪರ ಶಿಕ್ಷಣದಲ್ಲಿ ಪರಿಣಿತ ಸಂಸ್ಥೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಸಮಾಲೋಚನೆಯ ಮೂಲಕ ಮಾನಕಗಳನ್ನು ಅಭಿವೃದ್ಧಿಪಡಿಸುತ್ತವೆ. ಈ ಮಾನಕಗಳು, ವಿವಿಧ ಹಂತಗಳಲ್ಲಿ ಶಿಕ್ಷಕರ ಪಾತ್ರ, ನಿರೀಕ್ಷೆಗಳು ಮತ್ತು ಆ ಹಂತಕ್ಕೆ ಅಗತ್ಯವಾದ ಸಾಮರ್ಥ್ಯಗಳನ್ನು ಒಳಗೊಂಡಿರುತ್ತವೆ. ಅಲ್ಲದೇ, ಪ್ರತಿ ಹಂತದ ಕಾರ್ಯನಿರ್ವಹಣೆಯ ಮೌಲ್ಯಾಂಕನಕ್ಕಾಗಿ ಇರುವ ಮಾನಕಗಳನ್ನೂ ಸಹ ಒಳಗೊಂಡಿದ್ದು, ಅದನ್ನು ನಿಯಮಿತವಾಗಿ ನಡೆಸಲಾಗುತ್ತದೆ. ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳ ವಿನ್ಯಾಸವನ್ನೂ NPST ತಿಳಿಸುತ್ತದೆ. ನಂತರದಲ್ಲಿ ಈ ಮಾರ್ಗದರ್ಶಿಯನ್ನು ರಾಜ್ಯಗಳು ಅಳವಡಿಸಿಕೊಳ್ಳಬಹುದು. ಸೇವಾವಧಿ, ವೃತ್ತಿಪರ ಅಭಿವೃದ್ಧಿ ಪ್ರಯತ್ನಗಳು, ವೇತನ ಹೆಚ್ಚಳ, ಬಡ್ತಿ ಮತ್ತು ಇತರ ಮಾನ್ಯತೆಗಳನ್ನು ಒಳಗೊಂಡಂತೆ ಶಿಕ್ಷಕರ ವೃತ್ತಿ ನಿರ್ವಹಣೆಯ ಎಲ್ಲಾ ಅಂಶಗಳನ್ನು ಇದರಂತೆ ನಿರ್ಧರಿಸಬಹುದು. ಸೇವಾವಧಿ ಅಥವಾ ಹಿರಿತನದ ಆಧಾರದ ಮೇಲೆ ಬಡ್ತಿ ಮತ್ತು ವೇತನವನ್ನು ಹೆಚ್ಚಳ ಮಾಡದೇ, ಕಾರ್ಯನಿರ್ವಹಣೆಯ ಮೌಲ್ಯಾಂಕನದ ಆಧಾರದ ಮೇಲೆ ಮಾತ್ರ ಮಾಡಲಾಗುತ್ತದೆ. ವೃತ್ತಿಪರ ಮಾನಕಗಳನ್ನು 2030 ರಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಪರಿಷ್ಕರಿಸಲಾಗುತ್ತದೆ. ತದನಂತರ ಪ್ರತಿ ಹತ್ತು ವರ್ಷಗಳಿಗೊಮ್ಮೆ ವ್ಯವಸ್ಥೆಯ ಪರಿಣಾಮಕಾರಿತ್ವದ ಕಾಠಿಣ್ಯ ಪ್ರಾಯೋಗಿಕ ವಿಶ್ಲೇಷಣೆಯ ಆಧಾರದ ಮೇಲೆ ಪರಿಷ್ಕರಿಸಲಾಗುತ್ತದೆ.

## ವಿಶೇಷ ಶಿಕ್ಷಕರು

5.21 ಶಾಲಾ ಶಿಕ್ಷಣದ ಕೆಲವು ಕ್ಷೇತ್ರಗಳಿಗೆ ಹೆಚ್ಚುವರಿ ವಿಶೇಷ ಶಿಕ್ಷಕರ ತುರ್ತು ಅವಶ್ಯಕತೆಯಿದೆ. ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಹಂತದಲ್ಲಿ ನಿರ್ದಿಷ್ಟ ಕಲಿಕಾ ನ್ಯೂನತೆಗಳಿರುವ ವಿದ್ಯಾರ್ಥಿಗಳಿಗೆ ಮತ್ತು ವಿಶೇಷಚೇತನ ಮಕ್ಕಳಿಗೆ / ದಿವ್ಯಾಂಗ ಮಕ್ಕಳಿಗೆ ಕಲಿಸಲು ತಜ್ಞ ಶಿಕ್ಷಕರ ಅವಶ್ಯಕತೆ ಇರುತ್ತದೆ. ಅಂತಹ ಶಿಕ್ಷಕರಿಗೆ ವಿಷಯ–ಬೋಧನಾ ಜ್ಞಾನ ಮತ್ತು ಶಿಕ್ಷಣ ವಿಷಯ–ಸಂಬಂಧಿತ ಗುರಿಗಳ ತಿಳಿವಳಿಕೆ ಮಾತ್ರವಲ್ಲದೇ, ಮಕ್ಕಳ ವಿಶೇಷ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ಸಂಬಂಧಿತ ಕೌಶಲಗಳ ಅರಿವಿನ ಅಗತ್ಯವೂ ಇರುತ್ತದೆ. ಆದ್ದರಿಂದ ಸೇವಾ ಪೂರ್ವ ಮತ್ತು ಸೇವಾ ನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಗಳಲ್ಲಿ ವಿಷಯ ಶಿಕ್ಷಕರು ಅಥವಾ ಸಾಮಾನ್ಯ ಶಿಕ್ಷಕರಿಗಾಗಿ ದ್ವಿತೀಯ ಹಂತದ ವಿಶೇಷತೆಗಳಾಗಿ ಅಂತಹ ತಜ್ಞತೆಯ ಕೋರ್ಸ್‌ಗಳನ್ನು ಪ್ರಾರಂಭಿಸಬಹುದಾಗಿದೆ. ಅವುಗಳನ್ನು ಪೂರ್ಣ ಸಮಯ ಅಥವಾ ಅರೆಕಾಲಿಕ / ಸಂಯೋಜಿತ ಕೋರ್ಸ್‌ಗಳ ರೂಪದಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳಾಗಿ, ಸೇವಾ ಪೂರ್ವ ಮತ್ತು ಸೇವಾ ನಿರತ ವಿಧಾನದಲ್ಲಿ, ಬಹು ವಿಷಯದ ಕಾಲೇಜುಗಳು ಅಥವಾ ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುವುದು. ವಿಷಯ ಬೋಧನೆಯನ್ನೂ ಸಮರ್ಪಕವಾಗಿ ನಿಭಾಯಿಸಬಲ್ಲ ಅರ್ಹ ವಿಶೇಷ ಶಿಕ್ಷಕರ ಸಮರ್ಪಕ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು, NCTE ಮತ್ತು RCI ಪಠ್ಯಕ್ರಮದ ನಡುವೆ ಹೆಚ್ಚಿನ ಸಮತೋಲನ ಇರುವಂತೆ ನೋಡಿಕೊಳ್ಳಲಾಗುವುದು.

### ಚಿಂತನಾಶೀಲ ಪ್ರಶ್ನೆಗಳು

1. NTA ಪರೀಕ್ಷೆಗಳನ್ನು ನಡೆಸುವುದರಿಂದ ಆಗುವ ಪ್ರಯೋಜನಗಳೇನು?
2. ಶಾಲಾ ಸಂಕೀರ್ಣಗಳಿಗೆ ಶಿಕ್ಷಕರನ್ನು ನೇಮಿಸುವುದರಿಂದ ಸೇವಾ ಪರಿಸರ ಮತ್ತು ಸಂಸ್ಕೃತಿ ಹೇಗೆ ಸುಧಾರಿಸುತ್ತದೆ?
3. ಶಿಕ್ಷಕರ ವೃತ್ತಿ ನಿರ್ವಹಣೆಗೆ ಸಿ.ಪಿ.ಡಿ.ಯ ಪ್ರಾಮುಖ್ಯತೆ ಏನು?

## ಶಿಕ್ಷಕರ ಶಿಕ್ಷಣದ ವಿಧಾನ

5.22 ಶಿಕ್ಷಕರಿಗೆ ಪಠ್ಯವಿಷಯ ಮತ್ತು ಬೋಧನಾ ವಿಧಾನಗಳಲ್ಲಿ ಉನ್ನತ–ಗುಣಮಟ್ಟದ ತರಬೇತಿಯ ಅಗತ್ಯವಿರುತ್ತದೆ ಎಂಬುದನ್ನು ಪರಿಗಣಿಸುತ್ತಾ, ಶಿಕ್ಷಕರ ಶಿಕ್ಷಣವನ್ನು ಕ್ರಮೇಣ 2030ರ ವೇಳೆಗೆ ಬಹುವಿಷಯದ (Multi Disciplinary) ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸ್ಥಳಾಂತರಿಸಲಾಗುವುದು. ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳೆಲ್ಲವೂ ಬಹುವಿಷಯದತ್ತ (Multi Disciplinary) ಮುಂದುವರಿಯುತ್ತಿರುವಾಗ, ಅಲ್ಲಿ ಬಿ.ಎಡ್., ಎಂ.ಎಡ್., ಮತ್ತು ಪಿ.ಎಚ್.ಡಿ. ಪದವಿಗಳನ್ನು ನೀಡುವ ಅತ್ಯುತ್ತಮ ಶಿಕ್ಷಣ ವಿಭಾಗಗಳನ್ನೂ ಸ್ಥಾಪಿಸಬೇಕಾಗುತ್ತದೆ.

5.23 2030ರ ವೇಳೆಗೆ 4 ವರ್ಷಗಳ ಪದವಿಯು ಬೋಧನಾ ವೃತ್ತಿಯನ್ನು ಕೈಗೊಳ್ಳಲು ಬೇಕಾದ ಕನಿಷ್ಠ ಅರ್ಹತೆಯಾಗಿರುತ್ತದೆ.

ಅಲ್ಲಿ ವಿವಿಧ ಪ್ರಾಕಾರಗಳ ಜ್ಞಾನವನ್ನು ಒದಗಿಸಲಾಗುತ್ತದೆ, ಬೋಧನಾ ವಿಧಾನಗಳನ್ನು ಕಲಿಸಲಾಗುತ್ತದೆ ಹಾಗೂ ಸ್ಥಳೀಯ ಶಾಲೆಗಳಲ್ಲಿ ಬೋಧನಾ ಅಭ್ಯಾಸದ ತರಬೇತಿಯನ್ನು ನೀಡಲಾಗುತ್ತದೆ. 4 ವರ್ಷಗಳ ಸಂಯೋಜಿತ B.Ed., ಪದವಿ ನೀಡುವ ಸಂಸ್ಥೆಗಳಿಂದಲೇ 2 ವರ್ಷದ B.Ed., ನ್ನೂ ನಡೆಸಲಾಗುವುದು. ಇತರ ವಿಶೇಷ ವಿಷಯಗಳಲ್ಲಿ ಈಗಾಗಲೇ ಬ್ಯಾಚುಲರ್ ಪದವಿಗಳನ್ನು ಪಡೆದವರು ಮಾತ್ರ ಈ ಪದವಿಗೆ ಅರ್ಹರಿರುತ್ತಾರೆ. ಈ B.Ed., ಕಾರ್ಯಕ್ರಮಗಳನ್ನು 1 ವರ್ಷದ B.Ed., ಕಾರ್ಯಕ್ರಮಗಳನ್ನಾಗಿ ಸೂಕ್ತವಾಗಿ ಮಾರ್ಪಡಿಸಬಹುದು ಮತ್ತು ಈ ಕಾರ್ಯಕ್ರಮವನ್ನು 4 ವರ್ಷದ ಬಹುವಿಷಯಗಳುಳ್ಳ ಬ್ಯಾಚುಲರ್ ಪದವಿಗಳಿಗೆ ಸಮನಾದ ಪದವಿ ಪೂರ್ಣಗೊಳಿಸಿದವರಿಗೆ ಅಥವಾ ವಿಶೇಷ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರಿಗೆ ಮತ್ತು ಆ ವಿಶೇಷ ವಿಷಯದಲ್ಲಿ ವಿಷಯ ಶಿಕ್ಷಕರಾಗಲು ಬಯಸುವವರಿಗೆ ಮಾತ್ರ ನೀಡಲಾಗುವುದು. ಅಂತಹ ಎಲ್ಲ B.Ed. ಪದವಿಗಳನ್ನು 4 ವರ್ಷದ ಸಂಯೋಜಿತ B.Ed., ಕಾರ್ಯಕ್ರಮಗಳನ್ನು ನಡೆಸಲು ಮಾನ್ಯತೆ ಪಡೆದ, ಬಹುಮುಖೀ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಮಾತ್ರ ನೀಡಲಾಗುತ್ತದೆ. 4 ವರ್ಷದ ನಿಯಮಿತ ರೂಪದ ಸಮಗ್ರ ಬಿಎಡ್ ಪದವಿಯನ್ನು ನೀಡುವ ಮತ್ತು ಅಂಗೀಕರಣ ಹೊಂದಿರುವ ಬಹುವಿಷಯ ಬೋಧನಾ (Multi disciplinary) ಉನ್ನತ ಶಿಕ್ಷಣ ಸಂಸ್ಥೆಗಳು ದೂರದ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಮತ್ತು ತಮ್ಮ ವಿದ್ಯಾರ್ಹತೆಯನ್ನು ಹೆಚ್ಚಿಸಿಕೊಳ್ಳಲು ಬಯಸುವ ಸೇವಾ ನಿರತ ಶಿಕ್ಷಕರಿಗಾಗಿ ODL ಅಥವಾ ಸಂಯೋಜಿತ ವಿಧಾನದಲ್ಲಿ ಉನ್ನತ ಗುಣಮಟ್ಟದ B.Ed. ಕಾರ್ಯಕ್ರಮಗಳನ್ನು ನೀಡಬಹುದು. ಆ ಸಂಸ್ಥೆಗಳು ವಿದ್ಯಾರ್ಥಿಗಳ ಮಾರ್ಗದರ್ಶನಕ್ಕಾಗಿ, ಪ್ರಾಯೋಗಿಕ ತರಬೇತಿಗಾಗಿ ಮತ್ತು ವಿದ್ಯಾರ್ಥಿ–ಬೋಧನ ಅಂಶಗಳಿಗಾಗಿ ಸೂಕ್ತವಾದ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತವೆ.

5.24 ಎಲ್ಲಾ B.Ed., ಕಾರ್ಯಕ್ರಮಗಳು, ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನಕ್ಕೆ ಸಂಬಂಧಿಸಿದಂತೆ ಬೋಧನಾಶಾಸ್ತ್ರ, ಬಹುಹಂತದ ಬೋಧನೆ ಮತ್ತು ಮೌಲ್ಯಮಾಪನ, ವಿಶೇಷಚೇತನ ಮಕ್ಕಳಿಗೆ ಬೋಧನೆ, ವಿಶೇಷ ಆಸಕ್ತಿಗಳು ಅಥವಾ ಪ್ರತಿಭೆಗಳನ್ನು ಹೊಂದಿರುವ ಮಕ್ಕಳಿಗೆ ಬೋಧನೆ, ಶೈಕ್ಷಣಿಕ ತಂತ್ರಜ್ಞಾನದ ಬಳಕೆ, ಮತ್ತು ವಿದ್ಯಾರ್ಥಿ–ಕೇಂದ್ರಿತ ಮತ್ತು ಸಹಯೋಗಾತ್ಮಕ ಕಲಿಕೆಯನ್ನು ಒಳಗೊಂಡಂತೆ, ಇತ್ತೀಚಿನ ಬೋಧನಾಶಾಸ್ತ್ರದ ತಂತ್ರಗಳನ್ನು ಹೊಂದಿರುತ್ತವೆ. ಅಲ್ಲದೇ, ಸ್ಥಳೀಯ ಶಾಲೆಗಳಲ್ಲಿ ತರಗತಿಯ ಬೋಧನೆಯ ರೂಪದಲ್ಲಿ ಪ್ರಶಿಕ್ಷಣಾರ್ಥಿಗಳು ಅಭ್ಯಾಸ ಬೋಧನೆ ಮಾಡುವುದನ್ನು ಒಳಗೊಂಡಿರುತ್ತವೆ. ಎಲ್ಲಾ B.Ed., ಕಾರ್ಯಕ್ರಮಗಳಲ್ಲಿ ಯಾವುದೇ ವಿಷಯವನ್ನು ಕಲಿಸುವಾಗ ಅಥವಾ ಯಾವುದೇ ಚಟುವಟಿಕೆಯನ್ನು ನಿರ್ವಹಿಸುವಾಗ ಭಾರತೀಯ ಸಂವಿಧಾನದ ಮೂಲಭೂತ ಕರ್ತವ್ಯಗಳು (ಪರಿಚ್ಛೇದ 51 ಎ) ಮತ್ತು ಇತರ ಸಾಂವಿಧಾನಿಕ ನಿಬಂಧನೆಗಳಿಗೆ ಒತ್ತು ನೀಡಲಾಗುತ್ತದೆ. ಪರಿಸರ ಶಿಕ್ಷಣವನ್ನು ಶಾಲಾ ಪಠ್ಯಕ್ರಮದ ಅವಿಭಾಜ್ಯ ಅಂಗವಾಗಿಸುವ ಮೂಲಕ, ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಯ ಕಡೆಗೆ ಜಾಗೃತಿ ಮತ್ತು ಸಂವೇದನಶೀಲತೆಯನ್ನು ಸಹ ಸೂಕ್ತವಾಗಿ ಸಂಯೋಜಿಸುತ್ತದೆ.

5.25 ಸ್ಥಳೀಯ ಕಲೆ, ಸಂಗೀತ, ಕೃಷಿ, ವ್ಯವಹಾರ, ಕ್ರೀಡೆ, ಮರಗೆಲಸ ಮತ್ತು ಇತರ ವೃತ್ತಿಪರ ಕರಕುಶಲಗಳಂತಹ ಸ್ಥಳೀಯ ವೃತ್ತಿಗಳು, ಜ್ಞಾನ ಮತ್ತು ಕೌಶಲಗಳನ್ನು ಉತ್ತೇಜಿಸುವ ಉದ್ದೇಶದಿಂದ, ಶಾಲೆಗಳು ಅಥವಾ ಶಾಲಾ ಸಂಕೀರ್ಣಗಳಲ್ಲಿ ಸ್ಥಳೀಯ ಪ್ರದೇಶದ ಪ್ರಸಿದ್ಧ ವ್ಯಕ್ತಿಗಳನ್ನು 'ಮಾಸ್ಟರ್ ಬೋಧಕರು' ಎಂದು ನೇಮಿಸಕೊಳ್ಳಬಹುದು. ಹಾಗೂ ಅವರಿಗಾಗಿ ವಿಶೇಷವಾದ, ಕಿರು ಅವಧಿಯ ಸ್ಥಳೀಯ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳನ್ನು BITE ಗಳು, DIET ಗಳು ಅಥವಾ ಶಾಲಾ ಸಂಕೀರ್ಣಗಳಲ್ಲಿ ಆಯೋಜಿಸಬಹುದು.

5.26 ವಿಕಲಚೇತನ ವಿದ್ಯಾರ್ಥಿಗಳಿಗೆ ಬೋಧಿಸಲು ಬಯಸುವ ಅಥವಾ ಶಾಲಾ ವ್ಯವಸ್ಥೆಯಲ್ಲಿ ನಾಯಕತ್ವ ಮತ್ತು ನಿರ್ವಹಣಾ ಸ್ಥಾನಗಳಂತಹ ಹೆಚ್ಚು ವಿಶೇಷವಾದ ಬೋಧನಾ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಬಯಸುವ ಅಥವಾ ಬುನಾದಿ, ಪೂರ್ವಸಿದ್ಧತಾ, ಮಾಧ್ಯಮಿಕ ಮತ್ತು ಪ್ರೌಢ ಹಂತಗಳಲ್ಲಿ, ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗಲು ಬಯಸುವ ಶಿಕ್ಷಕರುಗಳಿಗೆ ಬಹುವಿಷಯ ಬೋಧನಾ (Multi disciplinary) ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಿರು ಅವಧಿಯ, B.Ed., ನಂತರದ ಪ್ರಮಾಣೀಕೃತ ಕೋರ್ಸ್‌ಗಳನ್ನು ವ್ಯಾಪಕವಾಗಿ ಪ್ರಾರಂಭಿಸಲಾಗುವುದು.

5.27 ನಿರ್ದಿಷ್ಟ ವಿಷಯಗಳನ್ನು ಕಲಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಬೋಧನಾ ವಿಧಾನಗಳು ಇರಬಹುದು ಎಂದು ಭಾವಿಸಲಾಗಿದೆ. NCERT ಯು ವಿವಿಧ ವಿಷಯಗಳನ್ನು ಕಲಿಸಲು ವೈವಿಧ್ಯಮಯ ಅಂತಾರಾಷ್ಟ್ರೀಯ ಬೋಧನಾ ವಿಧಾನಗಳನ್ನು ಅಧ್ಯಯನ ಮಾಡುತ್ತದೆ, ಸಂಶೋಧಿಸುತ್ತದೆ. ದಾಖಲಿಸುತ್ತದೆ ಮತ್ತು ಸಂಗ್ರಹಿಸುತ್ತದೆ. ಹಾಗೂ ಭಾರತದಲ್ಲಿ ಅನುಸರಿಸಲಾಗುತ್ತಿರುವ ಬೋಧನಶಾಸ್ತ್ರಗಳಲ್ಲಿ ಸುಧಾರಣೆ ಮಾಡಲು, ಈ ವಿಧಾನಗಳಿಂದ ಕಲಿಯಬಹುದಾದ ಮತ್ತು ಸಂಯೋಜಿಸಬಹುದಾದ ವಿಷಯಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡುತ್ತದೆ.

5.28 2021 ರ ವೇಳೆಗೆ NCTE, ರಾಷ್ಟ್ರೀಯ ಶಿಕ್ಷಣ ನೀತಿ 2020 ರ ತತ್ವಗಳ ಆಧಾರದ ಮೇಲೆ – NCERT ಯೊಂದಿಗೆ ಸಮಾಲೋಚಿಸಿ, ಶಿಕ್ಷಕರ ಶಿಕ್ಷಣಕ್ಕಾಗಿ ಹೊಸ ಮತ್ತು ಸಮಗ್ರ ರಾಷ್ಟ್ರೀಯ ಪಠ್ಯಕ್ರಮ ನೆಲಗಟ್ಟು NCFTE –2021 ಅನ್ನು ರೂಪಿಸುತ್ತದೆ. ರಾಜ್ಯ ಸರ್ಕಾರಗಳು, ಸಂಬಂಧಿತ ಸಚಿವಾಲಯಗಳು / ಕೇಂದ್ರ ಸರ್ಕಾರದ ಇಲಾಖೆಗಳು ಮತ್ತು ವಿವಿಧ ತಜ್ಞರ ಸಂಸ್ಥೆಗಳು ಸೇರಿದಂತೆ ಎಲ್ಲಾ ಭಾಗೀದಾರರೊಂದಿಗೆ ಚರ್ಚಿಸಿದ ನಂತರ ಈ ನೆಲಗಟ್ಟನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಅದನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಒದಗಿಸಲಾಗುವುದು. ವೃತ್ತಿಪರ ಶಿಕ್ಷಣಕ್ಕಾಗಿ ಶಿಕ್ಷಕರ ಶಿಕ್ಷಣ ಪಠ್ಯಕ್ರಮದ ಅವಶ್ಯಕತೆಗಳಿಗೂ ಸಹ NCFTE – 2021 ಸಂಬಂಧಿಸಿರುತ್ತದೆ. ಪರಿಷ್ಕೃತ NCF ಗಳಲ್ಲಿನ ಬದಲಾವಣೆಗಳನ್ನು ಮತ್ತು ಶಿಕ್ಷಕರ ಶಿಕ್ಷಣದಲ್ಲಿನ ಉದಯೋನ್ಮುಖ ಅಗತ್ಯಗಳನ್ನು ಪ್ರತಿಬಿಂಬಿಸುವಂತೆ, NCFTE ಯನ್ನು ಪ್ರತಿ 5–10 ವರ್ಷಗಳಿಗೊಮ್ಮೆ ಪರಿಷ್ಕರಿಸಲಾಗುತ್ತದೆ.




## ಈ ಅಧ್ಯಾಯದಲ್ಲಿ ಕಲಿತ ಮುಖ್ಯ ಅಂಶಗಳು

- ಶಿಕ್ಷಕರನ್ನು ಮೂರು ಹಂತದ ಪರೀಕ್ಷೆಗಳ ಮೂಲಕ ಶಾಲಾ ಸಂಕೀರ್ಣಕ್ಕೆ ನೇಮಕಾತಿ ಮಾಡಿಕೊಳ್ಳಲಾಗುವುದು.
- ಶಿಕ್ಷಕರ ನೇಮಕಾತಿಯಲ್ಲಿ ಎನ್.ಟಿ.ಎ. ಪರೀಕ್ಷಾ ಅಂಕಗಳನ್ನೂ ಪರಿಗಣಿಸಲಾಗುವುದು.
- ಕಲೆ, ದೈಹಿಕ ಶಿಕ್ಷಣ, ಭಾಷೆ, ಸ್ಥಳೀಯ ಜ್ಞಾನ ಮತ್ತು ವೃತ್ತಿಗಳಲ್ಲಿ ಪರಿಣಿತಿ ಪಡೆದ ಶಿಕ್ಷಕರುಗಳನ್ನು ಶಾಲಾ ಸಂಕೀರ್ಣಕ್ಕೆ ನೇಮಿಸಿಕೊಳ್ಳಲಾಗುವುದು.
- ಶಿಕ್ಷಕರ ಸ್ವಯಂ ಸುಧಾರಣೆ ಮತ್ತು ಅವರ ವೃತ್ತಿಪರ ಬೆಳವಣಿಗೆಗಾಗಿ ನಿರಂತರ ಅವಕಾಶಗಳನ್ನು ಒದಗಿಸಲಾಗುವುದು.
- ಅರ್ಹತೆಯ ಆಧಾರದ ಮೇಲೆ ಶಿಕ್ಷಕರ ಮೇಲ್ಮುಖ ಚಲನೆಗೆ ಪ್ರಾತಿನಿಧ್ಯ ನೀಡಲಾಗುತ್ತದೆ.
- ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ವೃತ್ತಿಪರ ಮಾನಕಗಳನ್ನು ರೂಪಿಸಲಾಗುತ್ತದೆ.

# ಅಧ್ಯಾಯ –06

# ಸಮಾನ ಮತ್ತು ಸಮನ್ವಯ ಶಿಕ್ಷಣ: ಎಲ್ಲರಿಗಾಗಿ ಕಲಿಕೆ

## ಈ ಅಧ್ಯಾಯದಲ್ಲಿ . . . . .

ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸಲು, ಗುಣಮಟ್ಟದ ಶಿಕ್ಷಣ ಒದಗಿಸಲು ವಿಶೇಷ ಪ್ರಯತ್ನಗಳನ್ನು ಮಾಡಲಾಗುವುದು. ಇ.ಸಿ.ಸಿ.ಇ. ಮತ್ತು ಶಾಲಾ ವ್ಯವಸ್ಥೆಯಲ್ಲಿ ವಿಕಲಾಂಗ ಮಕ್ಕಳ ಸೇರ್ಪಡೆ ಮತ್ತು ಭಾಗವಹಿಸುವಿಕೆಯನ್ನು ಖಾತರಿಪಡಿಸುವುದಕ್ಕೆ ಆದ್ಯತೆಯನ್ನು ನೀಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಸಮನ್ವಯ ಶಾಲಾ ಪಠ್ಯಕ್ರಮವನ್ನು ಸೂಕ್ತವಾಗಿ ರೂಪಿಸಿ, ವಿದ್ಯಾರ್ಥಿಗಳನ್ನು ಸಂವೇದನಾಶೀಲಗೊಳಿಸುವ ಬಗ್ಗೆ ತಿಳಿಸಲಾಗಿದೆ.

6.1 ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸಲು ಶಿಕ್ಷಣವು ಏಕೈಕ ದೊಡ್ಡ ಸಾಧನವಾಗಿದೆ. ಅಂತರ್ಗತ ಮತ್ತು ನ್ಯಾಯಸಮ್ಮತವಾದ ಶಿಕ್ಷಣ ಒದಗಿಸುವುದು ನಿಜಕ್ಕೂ ಒಂದು ಪ್ರಮುಖ ಸವಾಲಾಗಿದ್ದು, ಅಂತರ್ಗತ ಮತ್ತು ಸಮಾನ ಸಮಾಜವನ್ನು ನಿರ್ಮಿಸಲು ಸಮನ್ವಯ ಶಿಕ್ಷಣವು ನಿರ್ಣಾಯಕವಾಗಿದೆ. ಇಂತಹ ಸಮಾಜದಲ್ಲಿ ಪ್ರತಿ ನಾಗರೀಕನಿಗೆ ಕನಸು ಕಾಣಲು, ಅಭಿವೃದ್ಧಿ ಹೊಂದಲು ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡಲು ಅವಕಾಶವಿದೆ.

ಶಿಕ್ಷಣ ವ್ಯವಸ್ಥೆಯು ದೇಶದ ಮಕ್ಕಳಿಗೆ ಉಪಯಕ್ತ ಶಿಕ್ಷಣ ನೀಡುವ ಗುರಿಯನ್ನು ಹೊಂದಿದ್ದು, ಜನನ ಅಥವಾ ಸಾಮಾಜಿಕ ಹಿನ್ನಲೆಯ ಕಾರಣಗಳಿಂದಾಗಿ ಯಾವುದೇ ಮಗು ಕಲಿಯಲು ಮತ್ತು ಉತ್ಕೃಷ್ಟ ಸಾಧನೆ ಮಾಡಲು ಇರುವ ಯಾವುದೇ ಅವಕಾಶವನ್ನು ಕಳೆದುಕೊಳ್ಳುವಂತಾಗಬಾರದು. ಶಾಲಾ ಶಿಕ್ಷಣದಲ್ಲಿನ ಲಭ್ಯತೆ, ಭಾಗವಹಿಸುವಿಕೆ ಮತ್ತು ಕಲಿಕಾ ಫಲಗಳಲ್ಲಿನ ಸಾಮಾಜಿಕ ವರ್ಗದ ಅಂತರವನ್ನು ತಗ್ಗಿಸುವುದು, ಶಿಕ್ಷಣ ಕ್ಷೇತ್ರದ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಮುಖ ಗುರಿಗಳಲ್ಲಿ ಒಂದಾಗಿದೆ ಎಂಬುದನ್ನು ಈ ನೀತಿಯು ಪುನರುಚ್ಚರಿಸುತ್ತದೆ.

6.2 ವಿಶೇಷವಾಗಿ ಪ್ರೌಢ ಹಂತದ ಶಿಕ್ಷಣದಲ್ಲಿ ಐತಿಹಾಸಿಕವಾಗಿ ಕಡಿಮೆ ಪ್ರಾತಿನಿಧ್ಯ ಹೊಂದಿರುವ ಮತ್ತು ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದಿರುವ ಗುಂಪುಗಳಿಗೆ ಅಸಮಾನತೆಗಳು ದೊಡ್ಡ ಪ್ರಮಾಣದಲ್ಲಿ ಇನ್ನೂ ಉಳಿದಿವೆ. ಗುಣಮಟ್ಟದ ಶಾಲೆಗಳಿಗೆ ಪ್ರವೇಶ ದೊರೆಯದಿರುವುದು, ಬಡತನ, ಸಾಮಾಜಿಕ ರೀತಿ–ನೀತಿ ಮತ್ತು ಪದ್ಧತಿಗಳು, ಭಾಷೆ ಸೇರಿದಂತೆ ವಿವಿಧ ಅಂಶಗಳು, ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳ ದಾಖಲಾತಿ ಮತ್ತು ಧಾರಣ ದರಗಳ ಮೇಲೆ ಗಂಭೀರ ಪರಿಣಾಮವನ್ನು ಬೀರಿವೆ. ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲಿ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಕಡಿಮೆ ಇದ್ದು, ಇತರೆ ಮಕ್ಕಳಂತೆ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಸೂಕ್ತ ಅವಕಾಶಗಳನ್ನು ಒದಗಿಸುವ ಬಗ್ಗೆ ಸೂಕ್ತ ಕಾರ್ಯವಿಧಾನಗಳನ್ನು ರೂಪಿಸಬೇಕಾಗಿದೆ.

6.3 ವಿದ್ಯಾರ್ಥಿ ವೇತನಗಳು, ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪೋಷಕರನ್ನು ಉತ್ತೇಜಿಸಲು ಷರತ್ತುಬದ್ಧ ನಗದು ವರ್ಗಾವಣೆ, ಸಾರಿಗೆಗಾಗಿ ಸೈಕಲ್ ಒದಗಿಸುವುದು ಮುಂತಾದ ಯಶಸ್ವಿ ನೀತಿಗಳು ಮತ್ತು ಯೋಜನೆಗಳನ್ನು ದೇಶಾದ್ಯಂತ ಗಮನಾರ್ಹವಾಗಿ ಬಲಪಡಿಸಬೇಕಾಗಿದೆ.

6.4 ಗುಣಮಟ್ಟದ ಶಿಕ್ಷಣ ಒದಗಿಸಲು ಕೆಲವು ಪ್ರದೇಶಗಳನ್ನು ಮಹತ್ವಕಾಂಕ್ಷೆಯ ಜಿಲ್ಲೆಗಳೆಂದು ಗುರುತಿಸಲಾಗಿದ್ದು, ಅವುಗಳ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಮಾಡಲಾಗುವುದು.

6.5 ಎಲ್ಲಾ ಹೆಣ್ಣು ಮಕ್ಕಳಿಗೆ ಮತ್ತು ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ ಸಮಾನ ಗುಣಮಟ್ಟದ ಶಿಕ್ಷಣವನ್ನು ನೀಡುವಂತೆ ರಾಷ್ಟ್ರದ ಸಾಮರ್ಥ್ಯವನ್ನು ಹೆಚ್ಚಿಸಲು ಭಾರತ ಸರ್ಕಾರವು 'ಲಿಂಗ ಸೇರ್ಪಡೆ ನಿಧಿ' ಯನ್ನು ಸ್ಥಾಪಿಸಲಾಗುತ್ತದೆ.

6.6 ವಿದ್ಯಾರ್ಥಿಗಳು ದೂರದ ಪ್ರದೇಶದಿಂದ ಶಾಲೆಗೆ ಬರಬೇಕಾದ ಸ್ಥಳಗಳಲ್ಲಿ, ಎಲ್ಲಾ ಮಕ್ಕಳ ಸುರಕ್ಷತೆಗಾಗಿ ಸೂಕ್ತವಾದ ವ್ಯವಸ್ಥೆಗಳೊಂದಿಗೆ, ಬಾಲಕಿಯರು ಸೇರಿದಂತೆ, ವಿಶೇಷವಾಗಿ ಸಾಮಾಜಿಕ–ಆರ್ಥಿಕವಾಗಿ ಹಿಂದುಳಿದ ಹಿನ್ನಲೆಯಿಂದ ಬಂದ ವಿದ್ಯಾರ್ಥಿಗಳಿಗೆ ಜವಾಹರ್ ನವೋದಯ ವಿದ್ಯಾಲಯ ಮಾನದಂಡಕ್ಕೆ ಸಮನಾದ ಉಚಿತ ವಸತಿ ಸೌಲಭ್ಯಗಳನ್ನು ಒದಗಿಸಲಾಗುವುದು.

6.7 ಇಸಿಸಿಇ ಮತ್ತು ಶಾಲಾ ವ್ಯವಸ್ಥೆಯಲ್ಲಿ ವಿಕಲಾಂಗ ಮಕ್ಕಳ ಸೇರ್ಪಡೆ ಮತ್ತು ಸಮಾನ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದಕ್ಕೂ ಹೆಚ್ಚಿನ ಆದ್ಯತೆ ನೀಡಲಾಗುವುದು.

6.8 ಶಿಕ್ಷಕರು, ತರಬೇತಿ ಪಡೆದ ಸಾಮಾಜಿಕ ಕಾರ್ಯಕರ್ತರು ಹಾಗೂ ಸಲಹೆಗಾರರು ನಿರ್ಮಿಸಿದ ಹೊಸ ಶಾಲಾ ಸಂಸ್ಕೃತಿಯ ಮೂಲಕ ಮತ್ತು ಸಮನ್ವಯ ಶಾಲಾ ಪಠ್ಯಕ್ರಮವನ್ನು ತರಲು ಮಾಡಲಾದ ಬದಲಾವಣೆಗಳ ಮೂಲಕ ವಿದ್ಯಾರ್ಥಿಗಳನ್ನು ಸಂವೇದನಾಶೀಲಗೊಳಿಸಲಾಗುತ್ತದೆ.

## ಈ ಅಧ್ಯಾಯದಲ್ಲಿ ಕಲಿತ ಮುಖ್ಯ ಅಂಶಗಳು

- ಶಿಕ್ಷಣ ವ್ಯವಸ್ಥೆಯು ದೇಶದ ಮಕ್ಕಳಿಗೆ ಉಪಯುಕ್ತ ಶಿಕ್ಷಣ ನೀಡುವ ಗುರಿಯನ್ನು ಹೊಂದಿದ್ದು, ಯಾವುದೇ ಮಗು ಕಲಿಯಲು ಇರುವ ಅವಕಾಶಗಳನ್ನು ಕಳೆದುಕೊಳ್ಳುವಂತಾಗಬಾರದು.
- ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಕೆಲವು ಪ್ರದೇಶಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಮಾಡಲಾಗುವುದು.
- ಎಲ್ಲಾ ಹೆಣ್ಣು ಮಕ್ಕಳು ಮತ್ತು ತೃತೀಯ ಲಿಂಗಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು 'ಲಿಂಗ ಸೇರ್ಪಡೆ ನಿಧಿ' ಯನ್ನು ಸ್ಥಾಪಿಸಲಾಗುವುದು.
- ಇಸಿಸಿಇ ಮತ್ತು ಶಾಲಾ ವ್ಯವಸ್ಥೆಯಲ್ಲಿ ವಿಕಲಾಂಗ ಮಕ್ಕಳ ಸೇರ್ಪಡೆ ಮತ್ತು ಸಮಾನ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು.

# ಅಧ್ಯಾಯ – 07

## ಶಾಲಾ ಸಂಕೀರ್ಣ/ಸಮೂಹಗಳ ಸದುಪಯೋಗ ಮತ್ತು ಪರಿಣಾಮಕಾರಿ ಆಡಳಿತ


### ಈ ಅಧ್ಯಾಯದಲ್ಲಿ . . . . .

ಸಂಪನ್ಮೂಲಗಳ ಸದುಪಯೋಗ ಮತ್ತು ಪರಿಣಾಮಕಾರಿ ಆಡಳಿತದ ಉದ್ದೇಶದಿಂದ ಎಲ್ಲಾ ಹಂತದ ಶಾಲೆಗಳನ್ನು ಒಳಗೊಂಡಿರುವ ಶಾಲಾ ಸಂಕೀರ್ಣವನ್ನು ರಚಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಶಾಲಾ ಸಂಕೀರ್ಣಗಳ ಮೂಲಕ ಅಲ್ಪಾವಧಿ ಮತ್ತು ದೀರ್ಘಾವಧಿಯ ಯೋಜನೆಗಳಿಗಾಗಿ ಕಾರ್ಯನಿರ್ವಹಿಸುವ ಸಂಸ್ಕೃತಿಯನ್ನು ಬೆಳೆಸುವ ಬಗ್ಗೆ ವಿವರಿಸಲಾಗಿದೆ.

### ಶಾಲಾ ಸಂಕೀರ್ಣ/ಸಮೂಹಗಳ ಮೂಲಕ ಸಂಪನ್ಮೂಲಗಳ ಸದುಪಯೋಗ ಮತ್ತು ಪರಿಣಾಮಕಾರಿ ಆಡಳಿತ

**ಉದ್ದೇಶ:** ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಅನುಕೂಲವಾಗುವಂತೆ ಮತ್ತು ಶಾಲಾ ಆಡಳಿತವನ್ನು ಹೆಚ್ಚು ಸ್ಥಳೀಯವಾಗಿ, ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ನೀಡಲು ಶಾಲೆಗಳನ್ನು ಶಾಲಾ ಸಂಕೀರ್ಣಗಳಾಗಿ ಗುಂಪು ಮಾಡಲಾಗುತ್ತದೆ.

7.1 ಪ್ರಸ್ತುತ ಸಮಗ್ರ ಶಿಕ್ಷಣ ಯೋಜನೆಯಡಿಯಲ್ಲಿನ ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಜ್ಯಗಳ ಪ್ರಯತ್ನದಿಂದ ದೇಶದ ಪ್ರತಿ ಜನವಸತಿ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಾಗಿದೆ. ಇದರಿಂದ ಪ್ರಾಥಮಿಕ ಶಾಲೆಗಳಿಗೆ ಸಾರ್ವತ್ರಿಕ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿದ್ದು, ಹಲವಾರು ಸಣ್ಣ ಶಾಲೆಗಳ ಸ್ಥಾಪನೆಗೂ ಕಾರಣವಾಗಿದೆ. ಯು ಡೈಸ್ 2016–17ರ ಮಾಹಿತಿಯ ಪ್ರಕಾರ ದೇಶದ ಸುಮಾರು 28% ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 14.8% ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 30 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಾರೆ.




7.2 ಈ ಸಣ್ಣ ಶಾಲೆಗಳಲ್ಲಿ ಶಿಕ್ಷಕರ ನಿಯೋಜನೆ ಮತ್ತು ಭೌತ ಸಂಪನ್ಮೂಲಗಳನ್ನು ಒದಗಿಸುವ ದೃಷ್ಟಿಯಿಂದ ಉತ್ತಮವಾಗಿ ಶಾಲೆಗಳನ್ನು ನಡೆಸಲು ಆರ್ಥಿಕವಾಗಿ ಸಶಕ್ತವಾಗಿರುವುದಿಲ್ಲ. ಈ ಶಾಲೆಗಳ ಕಾರ್ಯನಿರ್ವಹಣೆಯೂ ಸಂಕೀರ್ಣತೆಯಿಂದ ಕೂಡಿದೆ.

7.3 ಸಣ್ಣ ಶಾಲೆಗಳು ಪ್ರತ್ಯೇಕತೆಯಿಂದ ಶಿಕ್ಷಣ ಮತ್ತು ಬೋಧನಾ–ಕಲಿಕಾ ಪ್ರಕ್ರಿಯೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಮುದಾಯದಲ್ಲಿದ್ದಾಗ ಮತ್ತು ತಂಡಗಳಲ್ಲಿದ್ದಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ. ಸಣ್ಣ ಶಾಲೆಗಳು ಆಡಳಿತ ಮತ್ತು ನಿರ್ವಹಣೆಯ ದೃಷ್ಟಿಯಿಂದಲೂ ಸಮಸ್ಯೆಗಳನ್ನು ಎದುರಿಸುತ್ತವೆ.

7.4 ಶಾಲೆಗಳ ಕ್ರೋಢೀಕರಣದ ಬಗ್ಗೆ ಸೂಕ್ತವಾಗಿ ಯೋಚಿಸಬೇಕು. ಶಾಲೆಗಳ ಲಭ್ಯತೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡಾಗ ಮಾತ್ರ ಸಂಕೀರ್ಣಗಳನ್ನು ಸ್ಥಾಪಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಬೇಕು.

7.5 ರಾಜ್ಯ ಸರ್ಕಾರಗಳು ಶಾಲೆಗಳನ್ನು ಗುಂಪು ಮಾಡಲು ಅಥವಾ ಯೋಜನಾ ಬದ್ಧಗೊಳಿಸಲು ನವೀನ ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಈ ಸವಾಲುಗಳನ್ನು 2025 ರ ವೇಳೆಗೆ ಪರಿಹರಿಸುತ್ತವೆ.

7.6 ಸಂಪನ್ಮೂಲಗಳ ಸದುಪಯೋಗ ಮತ್ತು ಪರಿಣಾಮಕಾರಿ ಆಡಳಿತದ ಉದ್ದೇಶದಿಂದ, 5 ರಿಂದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಒಂದು ಮಾಧ್ಯಮಿಕ ಶಾಲೆ ಮತ್ತು ಅದರ ನೆರೆಹೊರೆಯಲ್ಲಿನ ಅಂಗನವಾಡಿಗಳೂ ಸೇರಿದಂತೆ ಕೆಳ ಹಂತದ ತರಗತಿಗಳನ್ನು ಹೊಂದಿರುವ ಎಲ್ಲಾ ಶಾಲೆಗಳನ್ನು ಒಳಗೊಂಡಿರುವ "ಶಾಲಾ ಸಂಕೀರ್ಣ" ಎಂಬುದಾಗಿ ಕರೆಯಲ್ಪಡುವ ಶಾಲೆಗಳ ಒಂದು ಗುಂಪನ್ನು ರಚಿಸುವುದಾಗಿದೆ. ಶಾಲಾ ಸಂಕೀರ್ಣದ ಗುರಿ ಅಲ್ಲಿನ ಶಾಲೆಗಳಲ್ಲಿ ಸಂಪನ್ಮೂಲಗಳ ದಕ್ಷ ನಿರ್ವಹಣೆ ಮತ್ತು ಹೆಚ್ಚು ಪರಿಣಾಮಕಾರಿಯಾದ ಕಾರ್ಯನಿರ್ವಹಣೆಯನ್ನು ಮಾಡುವುದಾಗಿದೆ.

7.7 ಶಾಲಾ ಸಂಕೀರ್ಣಗಳಾದ್ಯಂತ ಸಂಪನ್ಮೂಲಗಳ ಹಂಚಿಕೆಯಿಂದಾಗಿ ವಿಕಲಚೇತನ ಮಕ್ಕಳಿಗೆ ಸುಧಾರಿತ ಬೆಂಬಲ ದೊರಕುತ್ತದೆ. ಹೆಚ್ಚು ವಿಷಯ ಕೇಂದ್ರಿತ ಕ್ಲಬ್‌ಗಳು ಸ್ಥಾಪನೆಯಾಗುತ್ತವೆ. ಶಿಕ್ಷಣ, ಕ್ರೀಡೆ, ಕಲೆ ಇತ್ಯಾದಿಗಳ ಕಲಿಕೆಗೆ ವರ್ಚುಯಲ್ ತರಗತಿಗಳನ್ನು ನಡೆಸಲು ಐಸಿಟಿ ಪರಿಕರಗಳ ಬಳಕೆ ಸಾಧ್ಯವಾಗುತ್ತದೆ. ಶಾಲೆಗಳು, ಶಾಲಾ ನಾಯಕರು, ಶಿಕ್ಷಕರು, ವಿದ್ಯಾರ್ಥಿಗಳು, ಪೂರಕ ಸಿಬ್ಬಂದಿ, ಪೋಷಕರು ಮತ್ತು ಸ್ಥಳೀಯ ನಾಗರೀಕರನ್ನು ಒಳಗೊಂಡ ದೊಡ್ಡ ಸಮುದಾಯಗಳನ್ನು ನಿರ್ಮಿಸುವುದರಿಂದ ಶಾಲಾ ವ್ಯವಸ್ಥೆಯಲ್ಲಿ ಶಕ್ತಿ ತುಂಬಿ ಸಬಲೀಕರಣಗೊಳಿಸಲು ಸಹಾಯಕವಾಗುತ್ತದೆ.

7.8 ಶಾಲಾ ಸಂಕೀರ್ಣಗಳಿಂದಾಗಿ ಶಾಲೆಗಳ ಆಡಳಿತವು ಸುಧಾರಿಸುತ್ತದೆ ಮತ್ತು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಶಾಲಾ ಸಂಕೀರ್ಣಗಳು ಅರೆ ಸ್ವಾಯತ್ತ ಘಟಕಗಳಾಗಿ ಕಾರ್ಯನಿರ್ವಹಿಸುತ್ತವೆ.

7.9 ಅಲ್ಪಾವಧಿಯ ಮತ್ತು ದೀರ್ಘಾವಧಿಯ ಯೋಜನೆಗಾಗಿ ಕಾರ್ಯನಿರ್ವಹಿಸುವ ಸಂಸ್ಕೃತಿಯನ್ನು ಶಾಲಾ ಸಂಕೀರ್ಣಗಳ ಮೂಲಕ ಬೆಳೆಸಲಾಗುತ್ತದೆ.

7.10 ಶಾಲೆಗಳಲ್ಲಿ ಸಹಕಾರ ಹಾಗೂ ಸಕಾರಾತ್ಮಕ ಸಮನ್ವಯಕ್ಕಾಗಿ ಒಂದು ಖಾಸಗಿ ಶಾಲೆಯನ್ನು ಒಂದು ಸಾರ್ವಜನಿಕ ಶಾಲೆಯೊಂದಿಗೆ ಜೋಡಿಸುವ ಪ್ರಕ್ರಿಯೆಯನ್ನು ದೇಶಾದ್ಯಂತ ಪ್ರಾರಂಭಿಸಲಾಗುವುದು. ಶಾಲಾ ಸಂಕೀರ್ಣದ ಶಾಲೆಗಳಲ್ಲಿ ಪರಸ್ಪರ ಉತ್ತಮ ಅಭ್ಯಾಸಗಳನ್ನು ದಾಖಲಿಸಲಾಗುತ್ತದೆ, ಹಂಚಿಕೊಳ್ಳಲಾಗುತ್ತದೆ ಮತ್ತು ಸಾಂಸ್ಥೀಕರಣಗೊಳಿಸಲಾಗುತ್ತದೆ.

7.11 ಪ್ರತಿ ರಾಜ್ಯದಲ್ಲೂ ಬಾಲಭವನವನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತದೆ.

7.12 ಶಾಲೆಯು ಇಡೀ ಸಮುದಾಯಕ್ಕೆ ಸಂಭ್ರಮದ ಮತ್ತು ಗೌರವದ ತಾಣವಾಗಿರಬೇಕು, ಶಾಲೆಯನ್ನು ಸಾಮಾಜಿಕ ಚೇತನಾ ಕೇಂದ್ರವನ್ನಾಗಿ ಬಳಸಬಹುದು.

## ಈ ಅಧ್ಯಾಯದಲ್ಲಿ ಕಲಿತ ಮುಖ್ಯ ಅಂಶಗಳು

- ಸಂಪನ್ಮೂಲಗಳನ್ನು ಅನುಕೂಲಕರವಾಗಿ ಹಂಚಿಕೊಳ್ಳಲು ಹಾಗೂ ಶಾಲಾ ಆಡಳಿತವನ್ನು ಸ್ಥಳೀಯವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ಶಾಲಾ ಸಂಕೀರ್ಣಗಳನ್ನು ರಚಿಸಲಾಗುತ್ತದೆ.
- ಶಾಲಾ ಸಂಕೀರ್ಣವು 5 ರಿಂದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬುನಾದಿ ಹಂತದಿಂದ 12ನೇ ಗ್ರೇಡ್‌ವರೆಗಿನ ಎಲ್ಲಾ ಶಾಲೆಗಳನ್ನು ಒಳಗೊಳ್ಳುತ್ತದೆ.
- ಶಾಲಾ ಸಂಕೀರ್ಣಗಳಿಂದಾಗಿ ಶಾಲೆಗಳ ಆಡಳಿತ ಸುಧಾರಿಸುತ್ತದೆ ಮತ್ತು ಹೆಚ್ಚು ಪರಿಣಾಮಕಾರಿಯಾಗುತ್ತದೆ.

## ಅಧ್ಯಾಯ – 08


## ಶಾಲಾ ಶಿಕ್ಷಣಕ್ಕಾಗಿ ಮಾನಕಗಳ ನಿರ್ಧಾರ ಮತ್ತು ಮಾನ್ಯತೆ

### ಈ ಅಧ್ಯಾಯದಲ್ಲಿ . . . . .

ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಾಗಿ ಅರೆ-ನ್ಯಾಯಾಂಗ ಸ್ಥಾನ ಹೊಂದಿರುವ ಶಾಲಾ ನಿಯಂತ್ರಣ ಪ್ರಾಧಿಕಾರ ಎಂಬ ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಸಾರ್ವಜನಿಕ ಸೇವಾ ಮನೋಭಾವ ಹೊಂದಿರುವ ಖಾಸಗಿ ಶಾಲೆಗಳನ್ನು ಪ್ರೋತ್ಸಾಹಿಸುವ ಬಗ್ಗೆ ತಿಳಿಸಲಾಗಿದೆ. ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ತಿಳಿಯಲು ಕಲಿಕಾ ಮಟ್ಟ ಆಧಾರಿತ ರಾಷ್ಟ್ರೀಯ ಸಾಧನಾ ಸಮೀಕ್ಷೆಯನ್ನು ನಡೆಸಲಾಗುತ್ತದೆ. ಶಾಲಾ ಮಕ್ಕಳ ಸುರಕ್ಷತೆಯ ಸಂಬಂಧ ದೂರುಗಳು ಬಂದಲ್ಲಿ ಅವುಗಳನ್ನು ವರದಿ ಮಾಡಲು ಸ್ಪಷ್ಟ, ಸುರಕ್ಷಿತ ಮತ್ತು ಪರಿಣಾಮಕಾರಿ ಕಾರ್ಯವಿಧಾನಗಳ ಬಗ್ಗೆ ತಿಳಿಸಲಾಗಿದೆ.

### 8. ಶಾಲಾ ಶಿಕ್ಷಣಕ್ಕಾಗಿ ಮಾನಕಗಳ ನಿರ್ಧಾರ ಮತ್ತು ಮಾನ್ಯತೆ

8.1 ಶೈಕ್ಷಣಿಕ ಫಲಿತಾಂಶಗಳನ್ನು ನಿರಂತರವಾಗಿ ಸುಧಾರಿಸುವುದು ಶಾಲಾ ಶಿಕ್ಷಣ ನಿಯಂತ್ರಣ ವ್ಯವಸ್ಥೆಯ ಗುರಿಯಾಗಿರಬೇಕು. ಅದು ಶಾಲೆಗಳನ್ನು ಅತಿಯಾಗಿ ನಿರ್ಬಂಧಿಸಬಾರದು, ನಾವಿನ್ಯತೆಯನ್ನು ತಡೆಯಬಾರದು. ಶಾಲಾ ಮುಖ್ಯಸ್ಥರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ನಿರುತ್ಸಾಹಗೊಳಿಸಬಾರದು. ಒಟ್ಟಾರೆ, ನಿಯಂತ್ರಣವು ಶಾಲೆಗಳು ಮತ್ತು ಶಿಕ್ಷಕರನ್ನು ವಿಶ್ವಾಸದೊಂದಿಗೆ ಸಬಲಗೊಳಿಸುವ ಗುರಿಯನ್ನು ಹೊಂದಿರಬೇಕು. ಅದೇ ಸಮಯದಲ್ಲಿ ಸಂಪೂರ್ಣ ಪಾರದರ್ಶಕತೆಯಿಂದ ಎಲ್ಲಾ ಹಣಕಾಸು ವ್ಯವಹಾರಗಳು, ಕಾರ್ಯವಿಧಾನಗಳು ಮತ್ತು ಶೈಕ್ಷಣಿಕ ಫಲಿತಾಂಶಗಳನ್ನು ಸಂಪೂರ್ಣವಾಗಿ ಸಾರ್ವಜನಿಕರಿಗಾಗಿ ಮುಕ್ತವಾಗಿಸಬೇಕು. ಹೀಗೆ ಸಮಗ್ರತೆಯನ್ನು ಖಾತರಿಪಡಿಸುವುದರೊಂದಿಗೆ ಶ್ರೇಷ್ಠತೆಗಾಗಿ ಶ್ರಮಿಸಲು ಮತ್ತು ಅತ್ಯುತ್ತಮ ಪ್ರದರ್ಶನ ನೀಡಲು ಅನುವು ಮಾಡಿಕೊಡಬೇಕು.




8.2 ಶಿಕ್ಷಣ ಸಂಸ್ಥೆಗಳ ನಿಯಂತ್ರಣ ಮತ್ತು ನೀತಿ ನಿರೂಪಣೆಯನ್ನು ಶಾಲಾ ಶಿಕ್ಷಣ ಇಲಾಖೆ ಅಥವಾ ಅದರ ಅಂಗ ಸಂಸ್ಥೆಗಳು ನಿರ್ವಹಿಸುತ್ತಿವೆ. ಇದು ಹಿತಾಸಕ್ತಿ ಸಂಘರ್ಷ ಮತ್ತು ಅಧಿಕಾರದ ಅತಿಯಾದ ಕೇಂದ್ರೀಕರಣಕ್ಕೆ ಕಾರಣವಾಗುತ್ತಿದೆ.

8.3 ಪ್ರಸ್ತುತ ಇರುವ ನಿಯಂತ್ರಣ ವ್ಯವಸ್ಥೆಯಿಂದ ಶಿಕ್ಷಣದ ವಾಣಿಜ್ಯೀಕರಣ ಮತ್ತು ಖಾಸಗಿ ಶಾಲೆಗಳು ಮಾಡುತ್ತಿರುವ ಪೋಷಕರ ಆರ್ಥಿಕ ಶೋಷಣೆಯನ್ನು ತಡೆಯಲು ಸಾಧ್ಯವಾಗಿಲ್ಲ. ಆದರೇ ಅದೇ ಸಮಯದಲ್ಲಿ ಇದು

ಸಾರ್ವಜನಿಕ ಸೇವಾ ಮನೋಭಾವದ ಖಾಸಗಿ ಶಾಲೆಗಳನ್ನು ನಿರುತ್ಸಾಹಗೊಳಿಸಿದೆ. ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳೆರಡರ ನಿಯಂತ್ರಕ ವಿಧಾನಗಳ ನಡುವೆ ಸಾಕಷ್ಟು ಅಸಾಮ್ಯತೆ ಇದೆ.

8.4 ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಪ್ರಜಾಪ್ರಭುತ್ವ ಸಮಾಜದ ಅಡಿಪಾಯವಾಗಿದೆ. ಉನ್ನತ ಶೈಕ್ಷಣಿಕ ಫಲಿತಾಂಶಗಳನ್ನು ಪಡೆಯಲು ಅದನ್ನು ನಿರ್ವಹಿಸುವ ವಿಧಾನವನ್ನು ಬದಲಾಯಿಸಬೇಕು.

8.5 ಶಾಲಾ ಶಿಕ್ಷಣದಲ್ಲಿ ಶಾಲಾ ಶಿಕ್ಷಣ ಇಲಾಖೆಯು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಒಟ್ಟಾರೆ ಮೇಲ್ವಿಚಾರಣೆ ಮತ್ತು ನೀತಿ ನಿರೂಪಣೆಯ ಜವಾಬ್ದಾರಿಯನ್ನು ಹೊಂದಿರುತ್ತದೆ. ಅರೆ–ನ್ಯಾಯಾಂಗ ಸ್ಥಾನ ಹೊಂದಿರುವ ಶಾಲಾ ನಿಯಂತ್ರಣ ಪ್ರಾಧಿಕಾರ (State School Regulatory Authority) ಎಂಬ ಸ್ವತಂತ್ರ ರಾಜ್ಯವ್ಯಾಪಿ ನಿಯಂತ್ರಕ ಸಂಸ್ಥೆಯನ್ನು ಪ್ರತಿ ರಾಜ್ಯದಲ್ಲೂ ರಚಿಸಲಾಗುತ್ತದೆ. ಇಡೀ ರಾಜ್ಯದ ಸಾರ್ವಜನಿಕ ಶಾಲಾ ವ್ಯವಸ್ಥೆಯ ಕಾರ್ಯಾಚರಣೆಯನ್ನು ಶಾಲಾ ಶಿಕ್ಷಣ ನಿರ್ದೇಶನಾಲಯ (Directorate of School Education) ನೋಡಿಕೊಳ್ಳುತ್ತದೆ. ಶೈಕ್ಷಣಿಕ ಮಾನಕಗಳು ಮತ್ತು ಪಠ್ಯಕ್ರಮವನ್ನು ಒಳಗೊಂಡಂತೆ ಶೈಕ್ಷಣಿಕ ವಿಷಯಗಳ ನೇತೃತ್ವವನ್ನು SCERT ಯು ಎನ್.ಸಿ.ಇ.ಆರ್.ಟಿ ಯ ಸಹಯೋಗ ಮತ್ತು ಸಮಾಲೋಚನೆಯೊಂದಿಗೆ ವಹಿಸುತ್ತದೆ.

8.6 ಶಾಲೆಗಳ ಅಭಿವೃದ್ಧಿ, ಕಾರ್ಯಕ್ಷಮತೆ ಮತ್ತು ಹೊಣೆಗಾರಿಕೆ ವ್ಯವಸ್ಥೆಯನ್ನು ಉನ್ನತ ನೈತಿಕತೆಯಿಂದ ಅತ್ಯಂತ ವ್ಯವಸ್ಥಿತವಾಗಿ ತಮ್ಮ ನಿಯಂತ್ರಕ ವ್ಯಾಪ್ತಿಯಲ್ಲಿ ನಿರ್ವಹಿಸಲಾಗಿರುವುದನ್ನು ಖಚಿತಪಡಿಸಲು ಎಲ್ಲಾ ಅಧಿಕಾರಿಗಳು ಜವಾಬ್ದಾರರಾಗಿರುತ್ತದೆ.

8.7 ಸಾರ್ವಜನಿಕ ಸೇವಾ ಮನೋಭಾವ ಹೊಂದಿರುವ (philanthropic) ಖಾಸಗಿ ಶಾಲೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಇದನ್ನು ಮನವರಿಕೆ ಮಾಡಿಕೊಡಲು ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳನ್ನು ಒಂದೇ ರೀತಿಯ ಅರ್ಹತೆಗಳು, ಮಾನದಂಡಗಳು ಮತ್ತು ಪ್ರಕ್ರಿಯೆಗಳ ಆಧಾರದ ಮೇಲೆ ಮೌಲ್ಯಾಂಕನ ಮಾಡಲಾಗುವುದು ಮತ್ತು ಅಂಗೀಕರಣ ನೀಡಲಾಗುವುದು.

8.8 ಕಳೆದ ದಶಕಗಳಲ್ಲಿ ಪಡೆದ ಅನುಭವ ಮತ್ತು ಕಲಿಕೆಯ ಆಧಾರದ ಮೇಲೆ ಸುಧಾರಣೆಗಳನ್ನು ತರಲು ಮಾನಕಗಳ ರಚನೆ, ನಿಯಂತ್ರಕ ಚೌಕಟ್ಟು ಮತ್ತು ಶಾಲಾ ನಿಯಂತ್ರಣ, ಅಂಗೀಕರಣ ಮತ್ತು ಆಡಳಿತಕ್ಕೆ ಪೂರಕವಾಗುವ ವ್ಯವಸ್ಥೆಗಳನ್ನು ಪರಿಶೀಲಿಸಲಾಗುತ್ತದೆ. ಭೌತ ಮತ್ತು ಮೂಲಸೌಕರ್ಯಗಳಂತಹ ಯಾಂತ್ರಿಕ ಸ್ವರೂಪದ ನಿರ್ದಿಷ್ಟತೆಗಳ ಮೇಲಿನ ಅತಿಯಾದ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲಾಗುತ್ತದೆ ಹಾಗೂ ಅವಶ್ಯಕತೆಗಳು, ವಾಸ್ತವ ಅಂಶಗಳಿಗೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳಲಾಗುತ್ತದೆ.

8.9 ಎಲ್ಲಾ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವುದು ಅತ್ಯಂತ ಆಕರ್ಷಕ ಆಯ್ಕೆಯಾಗುವಂತೆ ನೋಡಿಕೊಳ್ಳುವುದು ಸಾರ್ವಜನಿಕ ಶಾಲಾ ಶಿಕ್ಷಣ ವ್ಯವಸ್ಥೆಯ ಉದ್ದೇಶವಾಗಿದೆ.

8.10 ನಿಗದಿತವಾಗಿ ಸಂಪೂರ್ಣ ಶಿಕ್ಷಣ ವ್ಯವಸ್ಥೆಯ ತಪಾಸಣೆಯನ್ನು ಕೈಗೊಳ್ಳಲು, ಮೌಲ್ಯಮಾಪನ ಕಾರ್ಯ ವಿಧಾನಗಳು ಮತ್ತು ದತ್ತಾಂಶ ವಿಶ್ಲೇಷಣೆಗೆ ಸಹಾಯ ಮಾಡಬಹುದಾದ ಎನ್.ಸಿ.ಇ.ಆರ್.ಟಿ ಯಂತಹ ಇತರ ಸರ್ಕಾರಿ ಸಂಸ್ಥೆಗಳ ಸಹಕಾರದೊಂದಿಗೆ, ಪ್ರಸ್ತಾವಿತ ಹೊಸ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ – PARAKH, ವಿದ್ಯಾರ್ಥಿಗಳ ಕಲಿಕಾ ಮಟ್ಟ ಆಧಾರಿತ ರಾಷ್ಟ್ರೀಯ ಸಾಧನಾ ಸಮೀಕ್ಷೆಯನ್ನು ನಡೆಸುತ್ತದೆ. ಇದರ ಫಲಿತಾಂಶಗಳನ್ನು ಅಭಿವೃದ್ಧಿ ಉದ್ದೇಶಗಳಿಗಾಗಿ ಮತ್ತು ಶಿಕ್ಷಣ ವ್ಯವಸ್ಥೆಯ ನಿರಂತರ ಸುಧಾರಣೆಗೆ ಮಾತ್ರ ಬಳಸಲಾಗುತ್ತದೆ. ಉದ್ದೇಶಿತ ಹೊಸ ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ PARAKH, ಸ್ಥಾಪನೆಯಾಗುವವರೆಗೂ ಎನ್.ಸಿ.ಇ.ಆರ್.ಟಿ ಯು NAS ನ್ನು ಮುಂದುವರಿಸಬಹುದು. ಗಣತಿ ಆಧಾರಿತ ರಾಜ್ಯ ಮೌಲ್ಯಾಂಕನ ಸಮೀಕ್ಷೆಯನ್ನು ರಾಜ್ಯಗಳು ಮುಂದುವರೆಸಿಕೊಂಡು ಹೋಗಬಹುದು.

8.11 ಶಾಲಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಶಾಲೆಗೆ ದಾಖಲಾದ ಮಕ್ಕಳು ಮತ್ತು ಹದಿಹರೆಯದವರಿಗಾಗಿಯೇ ರೂಪಿಸಲಾಗಿದೆ. ಹದಿಹರೆಯದವರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಾದ ಮಾದಕ ದ್ರವ್ಯ ಸೇವನೆ, ಹಿಂಸೆ, ತಾರತಮ್ಯ ಮತ್ತು ಕಿರುಕುಳ ಇತ್ಯಾದಿಗಳ ಬಗ್ಗೆ ಗಮನಹರಿಸಬೇಕಾಗುತ್ತದೆ. ವಿಶೇಷವಾಗಿ ಹೆಣ್ಣು ಮಕ್ಕಳು ಸೇರಿದಂತೆ ಹದಿಹರೆಯದವರು ಹಕ್ಕುಗಳು ಅಥವಾ ಸುರಕ್ಷತೆಯ ವಿರುದ್ಧ ಯಾವುದೇ ದೂರುಗಳು ಬಂದಲ್ಲಿ ಅವುಗಳ ಕುರಿತು ವರದಿ ಮಾಡಲು ಸ್ಪಷ್ಟ, ಸುರಕ್ಷಿತ ಮತ್ತು ಪರಿಣಾಮಕಾರಿ ಕಾರ್ಯವಿಧಾನವನ್ನು ರೂಪಿಸಲಾಗುತ್ತದೆ.

## ಈ ಅಧ್ಯಾಯದಲ್ಲಿ ಕಲಿತ ಮುಖ್ಯ ಅಂಶಗಳು

- ಶಿಕ್ಷಣ ವ್ಯವಸ್ಥೆಯ ಸುಧಾರಣೆ, ಮೇಲ್ವಿಚಾರಣೆ ಮತ್ತು ನೀತಿ ನಿರೂಪಣೆಯ ಜವಾಬ್ದಾರಿಯನ್ನು ವಹಿಸಲು ಅರೆ–ನ್ಯಾಯಾಂಗ ಸ್ಥಾನ ಹೊಂದಿರುವ ಶಾಲಾ ನಿಯಂತ್ರಣ ಪ್ರಾಧಿಕಾರ ಎಂಬ ಸ್ವತಂತ್ರ ನಿಯಂತ್ರಕ ಸಂಸ್ಥೆಯನ್ನು ರಚಿಸಲಾಗುತ್ತದೆ.
- ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳನ್ನು ಒಂದೇ ರೀತಿಯ ಅರ್ಹತೆಗಳು, ಮಾನದಂಡಗಳು ಮತ್ತು ಪ್ರಕ್ರಿಯೆಗಳ ಆಧಾರಲ್ಲಿ ಮೌಲ್ಯಾಂಕನ ಮಾಡಲಾಗುವುದು.
- ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರ – PARAKH ವಿದ್ಯಾರ್ಥಿಗಳ ಕಲಿಕಾ ಮಟ್ಟ ಆಧಾರಿತ ರಾಷ್ಟ್ರೀಯ ಸಾಧನಾ ಸಮೀಕ್ಷೆಯನ್ನು ನಡೆಸುತ್ತದೆ.

3

# ಉನ್ನತ ಶಿಕ್ಷಣ

**ಈ ಅಧ್ಯಾಯದಲ್ಲಿ . . . . .**

ಗುಣಮಟ್ಟದ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಸ್ಥಾಪನೆ, ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ದೃಷ್ಟಿಕೋನವನ್ನು ವಿವರಿಸಲಾಗಿದೆ. ಪ್ರಚಲಿತದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅವುಗಳಿಗೆ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಪಂದಿಸುವ ಕ್ರಮಗಳನ್ನು ತಿಳಿಸಲಾಗಿದೆ. ಅಭಿವೃದ್ಧಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಉನ್ನತ ಸಂಸ್ಥೆಗಳನ್ನು ಸ್ಥಾಪಿಸುವುದು, ಸಂಶೋಧನೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಒದಗಿಸುವುದು, ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ವೃತ್ತಿಪರಿಣಿತಿ ಹಾಗೂ ವೃತ್ತಿಯಾಧಾರಿತವಾಗಿಸುವ ಪ್ರಸ್ತಾವನೆಗಳಿವೆ.

## 9. ಗುಣಮಟ್ಟದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು; ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ಕುರಿತು ಒಂದು ನವೀನ ಹಾಗೂ ದೂರದರ್ಶಿತ್ವದ ದೃಷಿಕೋನ

9.1. ಮಾನವ ಕುಲವನ್ನು ಮತ್ತು ಈ ಮೂಲಕ ಸಾಮಾಜಿಕ – ಸುಸಂಗತ – ಸುಸ್ಥಿರವಾದ ವ್ಯವಸ್ಥೆಯನ್ನು ಉತ್ತಮಗೊಳಿಸಲು, ಅಭಿವೃದ್ಧಿಶೀಲ ದೇಶವಾಗಿರುವ ಭಾರತದಲ್ಲಿ ಸಂವಿಧಾನಾತ್ಮಕವಾಗಿ ರೂಪಿಸಲಾಗಿರುವ– ಪ್ರಜಾಪ್ರಭುತ್ವದ, ನ್ಯಾಯಪರತೆಯ, ಸಾಮಾಜಿಕ ಪ್ರಜ್ಞೆಯ, ಜಾಗೃತಿಯ, ಸುಸಂಸ್ಕೃತ, ಸ್ವತಂತ್ರ, ಮಾನವೀಯ, ರಾಷ್ಟ್ರ ನಿರ್ಮಾಣದಲ್ಲಿ, ಉನ್ನತ ಶಿಕ್ಷಣವು ಅತ್ಯಂತ ಮಹತ್ವದ ಪಾತ್ರವನ್ನು ಹೊಂದಿದೆ. ಹೀಗಾಗಿ ಉನ್ನತ ಶಿಕ್ಷಣವು ದೇಶದ ಸುಸ್ಥಿರ ಜೀವನ ವಿಧಾನ ಮತ್ತು ಆರ್ಥಿಕ ಅಭಿವೃದ್ಧಿಗಳಿಗೆ ಅತ್ಯಂತ ಪ್ರಮುಖವಾದ ಸೂತ್ರಗಳನ್ನು ನಿರೂಪಿಸುತ್ತದೆ. ಭಾರತವು ಜ್ಞಾನಾಧಾರಿತ ಆರ್ಥಿಕ ಕ್ಷೇತ್ರ ಹಾಗೂ ಸಮಾಜವಾಗಿ ರೂಪುಗೊಳ್ಳುತ್ತಿರುವುದರಿಂದ, ಸಹಜವಾಗಿಯೇ ಯುವಸಮುದಾಯವು ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುವ ಉತ್ಕಟ ಇಚ್ಚೆಯನ್ನು ಹೊಂದಿರುತ್ತದೆ.

9.1.1 ಸುಸ್ಥಿರವಾದ ಉತ್ತಮ ಅಭಿವೃದ್ಧಿಯ ಗುರಿಯನ್ನು ಹೊಂದಿರುವ ಉನ್ನತ ಶಿಕ್ಷಣವು 21ನೇ ಶತಮಾನದ ಆದ್ಯತೆಯಾಗಿರುತ್ತದೆ. ಚಿಂತನಾಪರ, ಸರ್ವಾಂಗೀಣ ಹಾಗೂ ಸೃಜನಾತ್ಮಕ ವ್ಯಕ್ತಿತ್ವಗಳನ್ನು ರೂಪಿಸುವುದೇ 21 ನೇ ಶತಮಾನದ ಪ್ರಮುಖ ಅವಶ್ಯಕತೆಯಾಗಿದ್ದು, ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ಆಳವಾದ ಜ್ಞಾನವನ್ನು ವಿದ್ಯಾರ್ಥಿಗಳು ಹೊಂದಿರಬೇಕಾಗಿರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಅರ್ಥಪೂರ್ಣ ಹಾಗೂ ತೃಪ್ತಿದಾಯಕವಾದ–ಬದುಕನ್ನು ರೂಪಿಸಿಕೊಳ್ಳುವಂತೆ, ತನ್ಮೂಲಕ ಆರ್ಥಿಕ–ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಸಮರ್ಥರಾಗುವಂತೆ ಉನ್ನತ ಶಿಕ್ಷಣವನ್ನು ರೂಪಿಸಬೇಕಾಗಿದೆ.

9.1.2 ಸಮಗ್ರವಾಗಿ ವಿಕಸನಗೊಂಡ ವ್ಯಕಿಗಳನ್ನು ಈ ದಿಸೆಯಲ್ಲಿ ಪರಿಣಿತರನ್ನಾಗಿಸಲು ಈಗಾಗಲೇ ನಿಗದಿಪಡಿಸಲಾಗಿರುವ ಕೌಶಲ ಮತ್ತು

ಮೌಲ್ಯಗಳನ್ನು ಪೂರ್ವ ಪ್ರಾಥಮಿಕದಿಂದ ಪ್ರಾರಂಭಿಸಿ ಉನ್ನತ ಶಿಕ್ಷಣದವರೆಗೂ ಅಳವಡಿಸಿ, ಅನುಷ್ಠಾನಗೊಳಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ.

9.1.3 ಸಾಮಾಜಿಕ ವ್ಯವಸ್ಥೆಯ ಹಿನ್ನಲೆಯಲ್ಲಿ ಉನ್ನತ ಶಿಕ್ಷಣವನ್ನು ಪ್ರಜ್ಞಾಪೂರ್ಣ, ಸಾಮಾಜಿಕ ಪ್ರಜ್ಞೆ ಮತ್ತು ಜ್ಞಾನಾಧಾರಿತವಾಗಿರುವಂತೆ ರೂಪಿಸಬೇಕಾಗಿದೆ. ಈ ಮೂಲಕ ಕೌಶಲಪೂರ್ಣ ರಾಷ್ಟ್ರವನ್ನು ಅಭಿವೃದ್ಧಿ ಪಡಿಸಬೇಕಾಗಿದೆ.

9.2 **ಪ್ರಚಲಿತ ಅವಧಿಯಲ್ಲಿ ಭಾರತವು ಎದುರಿಸುತ್ತಿರುವ ಹಲವು ಸಮಸ್ಯೆಗಳು ಇಂತಿವೆ:** ಚೂರುಚೂರಾಗಿರುವ ಉನ್ನತ ಶಿಕ್ಷಣ ವಾತಾವರಣ, ಜ್ಞಾನ ಶಾಖೆಗಳ ಬಿಗಿಯಾದ ವರ್ಗೀಕರಣ, ಸೀಮಿತ-ವ್ಯಾಪ್ತಿಯ ಅಧ್ಯಯನಕ್ಕೆ ಮಾತ್ರ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಿರುವುದು, ಹಿಂದುಳಿದ ಕ್ಷೇತ್ರಗಳಲ್ಲಿ ವ್ಯವಸ್ಥೆಯ ಅಲಭ್ಯತೆ, ಸ್ಥಳೀಯ ಭಾಷೆಗಳಲ್ಲಿ ಕಲಿಸುವ ವಿರಳ ಉನ್ನತ ಶಿಕ್ಷಣ ಸಂಸ್ಥೆಗಳು, ಸಂಶೋಧನೆಗೆ ಕಡಿಮೆ ಗಮನಹರಿಸಿರುವುದು, ಸೂಕ್ತ ಗುಣಮಟ್ಟದ ಆಡಳಿತ ಮತ್ತು ನಾಯಕತ್ವದ ಕೊರತೆ, ಪರಿಣಾಮಕಾರಿಯಲ್ಲದ ನಿಯಂತ್ರಣ ವ್ಯವಸ್ಥೆ ಇತ್ಯಾದಿ

9.3 ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಪರಿವರ್ತನೆ ತರುವ ಮತ್ತು ಪುನರ್-ಸಂಪನ್ನಗೊಳಿಸುವ ಮೂಲಕ ಈ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾಗಿದೆ. ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣವನ್ನು ಒದಗಿಸುವ ಮೂಲಕ ಸಮತೆ ಮತ್ತು ಸುಸಂಗತತೆಯ ಪರಿಕಲ್ಪನೆಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿಯು ಹೊಂದಿದ್ದು, ಮುಂದಿನಂತೆ ಪರಿವರ್ತನೆಗಳನ್ನು ಸೂಚಿಸುತ್ತದೆ:

- ದೇಶದ ಎಲ್ಲಾ ಜಿಲ್ಲೆಗಳಲ್ಲಿ ಅಥವಾ ಸನಿಹದಲ್ಲಿರುವಂತೆ ಬಹುಶಿಸ್ತೀಯ (multi-disciplinary) ದೊಡ್ಡ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು ಹಾಗೂ ಸ್ಥಳೀಯ ಭಾಷೆಗಳಲ್ಲಿ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವುದು.
- ಪದವಿ ಪೂರ್ವ ಶಿಕ್ಷಣ ವ್ಯವಸ್ಥೆಯಲ್ಲಿಯೂ ಬಹುಶಿಸ್ತೀಯ (multi-disciplinary) ಅಧ್ಯಯನಕ್ಕೆ ಅವಕಾಶ ಕಲ್ಪಿಸುವುದು.
- ಸಂಸ್ಥೆಗಳು ಮತ್ತು ಪರಿಣಿತ ಬೋಧಕ ವರ್ಗದ ಸ್ವಾಯತ್ತತೆ.
- ಹಗುರ ಆದರೆ ಬಿಗಿಯಾದ - ಏಕ-ಗವಾಕ್ಷ ನಿಯಂತ್ರಣ ವ್ಯವಸ್ಥೆ.
- ಅಧ್ಯಾಪನ, ಸಂಶೋಧನೆ ಮತ್ತು ಸೇವೆಯ ಆಧಾರದ ಮೇಲೆ ಪ್ರಮುಖ ಸ್ಥಾನಗಳನ್ನು ತುಂಬುವುದು ಮತ್ತು ವೃತ್ತಿಪರತೆಯನ್ನು ಬೆಳೆಸುವುದು.

10. ಹೊಸ ಬಗೆಯ ಸಾಂಸ್ಥಿಕ ಪುನರ್ ರಚನೆ ಮತ್ತು ಕ್ರೋಢೀಕರಣ

10.1 ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈಗ ಭಿನ್ನ ಭಿನ್ನ ಸ್ವರೂಪದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕ್ರೋಢಿಕರಿಸಿ, ಈ ನೀತಿಗೆ ಅನುಗುಣವಾಗಿ ಬಹುವಿಷಯ ಬೋಧನಾ ವಿಶ್ವವಿದ್ಯಾಲಯಗಳನ್ನಾಗಿ, ಮಹಾವಿದ್ಯಾಲಯಗಳನ್ನಾಗಿ ರೂಪಿಸುವುದು ಮತ್ತು ಅವುಗಳು ಕನಿಷ್ಠ 3000 ವಿದ್ಯಾರ್ಥಿಗಳನ್ನು ಒಳಗೊಂಡಿರುವಂತೆ ಮಾಡುವುದು.

10.2 ಪ್ರಾಚೀನ ಭಾರತದಲ್ಲಿದ್ದ ತಕ್ಷಶಿಲಾ, ನಲಂದಾ ಮತ್ತು ವಿಕ್ರಮಶೀಲ ವಿಶ್ವವಿದ್ಯಾಲಯಗಳು ಸಾವಿರಾರು ವಿದ್ಯಾರ್ಥಿಗಳಿಂದ ಅಧ್ಯಯನಶೀಲವಾಗಿದ್ದವು. ಅವುಗಳ ಉನ್ನತ ಪರಂಪರೆಯನ್ನು ಮುಂದುವರೆಸಬೇಕಾಗಿದೆ.

10.3 ಒಂದು ವಿಶ್ವವಿದ್ಯಾಲಯವು ಹಲವು ವಿಷಯಗಳ ಅಂತರ್ಗತ ಸಂಬಂಧ ಹೊಂದಿರುವ ಉನ್ನತ ಅಧ್ಯಯನ ಸಂಸ್ಥೆಯಾಗಿರುತ್ತದೆ. ಒಂದು ಮಾದರಿಯ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯೇ ಪ್ರಧಾನವಾದರೆ ಇನ್ನೊಂದು ಮಾದರಿಯ ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಮತ್ತು ಕಲಿಕೆಯೇ ಪ್ರಧಾನವಾಗಿರುತ್ತದೆ. ಇವು ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡುವ ಬೃಹತ್ ವಿಶ್ವವಿದ್ಯಾಲಯಗಳಾದರೆ, ಸ್ವತಂತ್ರವಾಗಿ ಪದವಿಗಳನ್ನು ನೀಡುವ ಸ್ವಾಯತ್ತ ಕಾಲೇಜುಗಳ ಸ್ಥಾಪನೆಗೂ ಈ ನೀತಿಯು ಅವಕಾಶ ಕಲ್ಪಿಸುತ್ತದೆ.

10.4 ಹಂತ-ಹಂತವಾಗಿ ಮಹಾವಿದ್ಯಾಲಯಗಳಿಗೆ ಅವುಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಸ್ವಾಯತ್ತತೆಯನ್ನು ಅನುಮತಿಸುವ ಪಾರದರ್ಶಕ ವ್ಯವಸ್ಥೆಯೊಂದನ್ನು ಸ್ಥಾಪಿತಗೊಳಿಸಲಾಗುತ್ತದೆ.

10.5 ಉನ್ನತ ಸಂಸ್ಥೆಗಳ ಮಾನ್ಯತೆಯನ್ನು ನಿರ್ಣಯಿಸುವಲ್ಲಿ ವೈವಿಧ್ಯಮಯ ಹಾಗೂ ಸಮಯೋಚಿತ ಮಾನ್ಯತಾ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ.

10.6 ಬೋಧನೆ ಮತ್ತು ಸಂಶೋಧನೆಯ ಜೊತೆಜೊತೆಗೇ, ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಕೆಲವು ಗುರುತರ ಹೊಣೆಗಾರಿಕೆಗಳೂ

ಇರುತ್ತದೆ. ಅವುಗಳೆಂದರೆ ಇನ್ನಿತರೆ ಉನ್ನತ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಸಹಕಾರ, ಸಾಮುದಾಯಿಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದು ಇತ್ಯಾದಿ.

10.7 2040ರ ಹೊತ್ತಿಗೆ ಈ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬಹುಶಿಸ್ತೀಯ ಅಧ್ಯಯನ ಸಂಸ್ಥೆಗಳಾಗಿ ಪರಿವರ್ತಿಸುವ ಧ್ಯೇಯ ಹೊಂದಿದ್ದು, ಅದಕ್ಕೆ ಪೂರಕವಾಗಿ ಯೋಜನೆಯನ್ನು ರೂಪಿಸಬೇಕಾಗಿದೆ.

10.8 ಅಭಿವೃದ್ಧಿಯಲ್ಲಿ ಹಿಂದುಳಿದ ವಲಯಗಳಲ್ಲಿ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಪ್ರಗತಿಪೂರ್ವಕವಾಗಿ ಎಲ್ಲರಿಗೂ ಶಿಕ್ಷಣ ಲಭಿಸುವಂತೆ ಅವುಗಳನ್ನು ರೂಪಿಸಬೇಕಾಗಿದೆ. ಹೀಗಾಗಿ 2030 ರ ಒಳಗಾಗಿ ಕನಿಷ್ಠ ಪಕ್ಷ ಪ್ರತಿ ಜಿಲ್ಲೆಯಲ್ಲಿಯೂ ಅಥವಾ ಆಯಾ ಜಿಲ್ಲೆಗೆ ಸಮೀಪದಲ್ಲಿರುವಂತೆ ಉನ್ನತ ಅಧ್ಯಯನ ಸಂಸ್ಥೆಯನ್ನು ಸ್ಥಾಪಿತಗೊಳಿಸಲಾಗುವುದು.

10.9 ಖಾಸಗೀ ವಲಯ ಮತ್ತು ಸಾರ್ವಜನಿಕ ವಲಯದಲ್ಲಿರುವ ಸಂಸ್ಥೆಗಳಿಗೂ ಪ್ರಗತಿ ಸಾಧಿಸಲು ಸಮಾನ ಅವಕಾಶವನ್ನು ಒದಗಿಸುತ್ತದೆ ಹಾಗೂ ಅವುಗಳ ಸಾಮರ್ಥ್ಯವನ್ನು ವಿಸ್ತರಿಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ.

10.10 ಉನ್ನತ ಶಿಕ್ಷಣ ಸಂಸ್ಥೆಗಳಿಗೆ ದೂರ–ಶಿಕ್ಷಣ ಕಲಿಕಾ ಮತ್ತು ಆನ್ ಲೈನ್ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ.

10.11 ಒಂದೇ ವಿಷಯಕ್ಕೆ ಸೀಮಿತವಾಗಿರುವ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮುಂಬರುವ ದಿನಗಳಲ್ಲಿ ಕ್ರಮೇಣ ತೆಗೆದು ಹಾಕಲಾಗುತ್ತದೆ. ಶಿಕ್ಷಣ ಸಂಸ್ಥೆಗಳಿಗೆ ಬಹು ವಿಷಯ ಅಧ್ಯಯನಗಳತ್ತ ಪರಿವರ್ತನೆಗೊಳ್ಳಲು ಕಾಲಾವಕಾಶ ನೀಡಲಾಗುತ್ತದೆ.

10.12 ಈ ನೀತಿಯಲ್ಲಿ ನೂತನ ನಿಯಂತ್ರಣ ವ್ಯವಸ್ಥೆಯು, ಸಂಸ್ಥೆಗಳ ಸಬಲೀಕರಣ ಮತ್ತು ಸಂಶೋಧನೆಗೆ ಸ್ವಾಯತ್ತತೆಯನ್ನು ಪ್ರೋತ್ಸಾಹಿಸುತ್ತದೆ. ಸದ್ಯ ಅಸ್ತಿತ್ವದಲ್ಲಿರುವ ಮಾನ್ಯತೆ ಪಡೆದ ಪ್ರತಿ ವಿಶ್ವವಿದ್ಯಾಲಯ ತನ್ನ ವ್ಯಾಪ್ತಿಯಲ್ಲಿರುವ ಎಲ್ಲಾ ಕಾಲೇಜುಗಳ ಮುಂದಾಳತ್ವವನ್ನು ವಹಿಸಿಕೊಳ್ಳಬೇಕಾಗುತ್ತದೆ.

10.13 ಉನ್ನತ ಶಿಕ್ಷಣ ವಲಯವನ್ನು ಸಂಪೂರ್ಣವಾಗಿ ವೃತ್ತಿಪರಿಣಿತಿ ಹಾಗೂ ವೃತ್ತಿಯಾಧಾರಿತ ಶಿಕ್ಷಣವನ್ನು ನೀಡುವ ಸಮಗ್ರ ಉನ್ನತ ನೀತಿಯ ವ್ಯವಸ್ಥೆಯನ್ನಾಗಿಸುವ ಗುರಿಯನ್ನು ನೀತಿಯು ಹೊಂದಿದೆ.

10.14 ಜಗತ್ತಿನಾದ್ಯಂತ ವಿಶ್ವವಿದ್ಯಾಲಯಗಳು ಹಲವು ವಿಷಯಗಳ–ಸಾವಯವ–ಸಂಬಂಧದ ಬಹು ಆಯಾಮದ ಅಧ್ಯಯನ ಸಂಸ್ಥೆಗಳಾಗಿವೆ. ವಿವಿಧ ಪಾರಿಭಾಷಿಕ ಪದಗಳಲ್ಲಿ ಈಗ ಗುರುತಿಸಲಾಗುತ್ತಿರುವ 'ಪರಿಗಣಿಸಲಿರುವ ವಿಶ್ವವಿದ್ಯಾಲಯ', 'ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯ', ಮಾನ್ಯತೆ ಹೊಂದಿರುವ ತಾಂತ್ರಿಕ ವಿಶ್ವವಿದ್ಯಾಲಯ, ಏಕೀಕೃತ ವಿಶ್ವವಿದ್ಯಾಲಯ (unitary university) ಗಳೆಲ್ಲವನ್ನು "ವಿಶ್ವವಿದ್ಯಾಲಯ" ವೆಂದು ನಾಮಕರಣ ಮಾಡಲಾಗುವುದು.



The ancient Nalanda was a centre of learning from the 5th century CE to 12th century CE. Located in present day Rajgir, Bihar, India, Nalanda was one of the oldest universities of the world and UNESCO declared the ruins of Nalanda Mahavihara, a world heritage site. The new Nalanda University is envisaged as a centre of inter-civilisational dialogue.



Takshashila was an ancient Indian city, which is now in north-western Pakistan. It is an important archaeological site and the UNESCO declared it to be a World Heritage Site in 1980. Its fame rested on the University, where Chanakya is said to have composed his *Arthashastra*.

Archaeologist Alexander Cunningham discovered its ruins in the mid-19th century.

## 11 ಸಮಗ್ರ ಮತ್ತು ಬಹುಶಿಸ್ತೀಯ ಅಧ್ಯಯನದತ್ತ

11.1 ಪ್ರಾಚೀನ ಕಾಲದಿಂದಲೂ ಭಾರತವು ಸಮಗ್ರ ಹಾಗೂ ಬಹುಶಿಸ್ತೀಯ ಪರಂಪರೆಯನ್ನು ಹೊಂದಿದೆ. ತಕ್ಷಶಿಲಾ, ನಳಂದಾದಂತಹ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ಸಾಹಿತ್ಯಕ ವಿಷಯಗಳ ಈ ಬಗ್ಗೆ ಉಲ್ಲೇಖಗಳಿವೆ. ಪ್ರಾಚೀನ ಭಾರತದ ಸಾಹಿತ್ಯಿಕ ಕೃತಿಗಳ ಪೈಕಿ ಬಾಣಭಟ್ಟನ ಕಾದಂಬರಿಯು **'64 ಕಲೆಗಳ ಅಥವಾ ವಿದ್ಯೆಗಳ ಜ್ಞಾನವೇ ಉತ್ತಮ ಶಿಕ್ಷಣ'** ಎಂದು ಗುರುತಿಸಿದೆ. ಸೃಜನಶೀಲ ಮಾನವನ ಉಪಕ್ರಮಗಳಾಗಿರುವ ಗಣಿತ ಶಾಸ್ತ್ರ, ವಿಜ್ಞಾನ, ವೃತ್ತಿಪರ ವಿಷಯಗಳು ಹಾಗೂ ಸೂಕ್ಷ್ಮ ಕೌಶಲ್ಯಾದಾರಿತವಾಗಿರುವ ವಿದ್ಯೆಗಳೆಲ್ಲವನ್ನೂ "ಕಲೆ" ಎಂದು ಗುರುತಿಸುವುದಕ್ಕೆ ನಿಶ್ಚಿತವಾದ ಭಾರತೀಯ ಆಧಾರಗಳಿವೆ. ಆಧುನಿಕತೆಯ ಇಂದಿನ ಯುಗದಲ್ಲಿ ಇವುಗಳನ್ನು "ಮುಕ್ತ ಕಲೆಗಳು" ಎಂಬುದಾಗಿ ಗುರುತಿಸಲಾಗಿದೆ. ಅವುಗಳನ್ನು ಪುನಃ ಭಾರತೀಯ ಶಿಕ್ಷಣ ವ್ಯವಸ್ಥೆಗೆ ಜೋಡಿಸಬೇಕಾಗಿದೆ. ಇದೇ 21 ನೇ ಶತಮಾನವು ನಿರೀಕ್ಷಿಸುತ್ತಿರುವ ಶಿಕ್ಷಣ ವ್ಯವಸ್ಥೆಯಾಗಿದೆ.

11.2 ಪದವಿ ಪೂರ್ವ ಶಿಕ್ಷಣ ವ್ಯವಸ್ಥೆಯಲ್ಲಿ ಕಲೆ ಮತ್ತು ವಿಜ್ಞಾನದ ಜೊತೆಗೆ ಮಾನವಿಕಗಳನ್ನೂ ಒಳಗೊಂಡ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ಗಣಿತ (STEM) ವಿಷಯಗಳನ್ನು ಸಮಗ್ರವಾಗಿ ಅಳವಡಿಸಲಾಗುವುದು.

11.3 ಸಮಗ್ರ ಮತ್ತು ಬಹುಶಿಸ್ತೀಯ ಅಧ್ಯಯನದ ಶಿಕ್ಷಣ ಮಾನವರಲ್ಲಿ ಪ್ರಜ್ಞಾವಂತಿಕೆ, ಬುದ್ಧಿವಂತಿಕೆ, ಭೌತಿಕ, ಭಾವನಾತ್ಮಕ ಮತ್ತು ನೈತಿಕಾಂಶಗಳನ್ನು ಒಟ್ಟುಗೂಡಿಸಿ ಮನುಕುಲದ ಸಾಮರ್ಥ್ಯವನ್ನು ಪ್ರಗತಿಗೊಳಿಸುವ ಗುರಿಯನ್ನು ಹೊಂದಿದೆ.

11.4 ಸಮಗ್ರ ಮತ್ತು ಬಹುಶಿಸ್ತೀಯ ಅಧ್ಯಯನವನ್ನು ಭಾರತದಲ್ಲಿ ಅತ್ಯಂತ ಯಶಸ್ವಿಯಾಗಿ ವಿವೇಚನೆಗೊಳಪಡಿಸಲಾಗಿದೆ. ಇದು ಈಗ ಪುನಃ ಅವಶ್ಯಕವಾಗಿದ್ದು, ಇದನ್ನು ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿದರೆ, 21 ನೇ ಶತಮಾನದಲ್ಲಿ ಯಶಸ್ವಿಯಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ತಾಂತ್ರಿಕ ಶಿಕ್ಷಣ ಒದಗಿಸುತ್ತಿರುವ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಭಾರತೀಯ ವಿಜ್ಞಾನ ಸಂಸ್ಥೆಗಳನ್ನೂ ಬಹುವಿಷಯಗಳ ಅಧ್ಯಯನ ಶಿಕ್ಷಣದ ಮೂಲಕ ಕಲಾ ವಿಷಯಗಳೊಡನೆ ಸಂಯೋಜನೆಗೊಳ್ಳುವಂತೆ ಸಮಗ್ರವಾಗಿ ರೂಪಿಸಬೇಕಾಗಿದೆ.

11.5 ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾದ ಕಾಂಬಿನೇಷನ್ನುಗಳಲ್ಲಿ ಓದುವ ಅವಕಾಶವನ್ನು ಕಲ್ಪಿಸಲಾಗುತ್ತದೆ. ಜೊತೆಗೆ ವಿದ್ಯಾರ್ಥಿಗಳ ಅನುಕೂಲಕ್ಕೆ ಅನುಗುಣವಾಗಿ ಯಾವಾಗ ಬೇಕಾದರೂ ಉನ್ನತ ಶಿಕ್ಷಣಕ್ಕೆ ಸೇರುವ ಹಾಗೂ ಕೈಬಿಡುವ ಅವಕಾಶಗಳನ್ನು ಕಲ್ಪಿಸುವ ಮೂಲಕ ಜೀವನ ಪರ್ಯಂತ ಓದುವ ಅವಕಾಶವನ್ನು ಒದಗಿಸಲಾಗುವುದು.

11.6 ಬೃಹತ್–ಬಹುಶಿಸ್ತೀಯ ವಿಶ್ವವಿದ್ಯಾಲಯಗಳಲ್ಲಿ ನಾವಿನ್ಯತೆಯ ಪಠ್ಯಕ್ರಮವನ್ನು ಒದಗಿಸಲಾಗುವುದು ಹಾಗೂ ಇವುಗಳಲ್ಲಿ ತಮ್ಮ ಇಚ್ಛೆಗೆ ಅನುಗುಣವಾಗಿ ಪಠ್ಯಕ್ರಮವನ್ನು ಆಯ್ಕೆ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸಲಾಗುವುದು.

11.7 ಭಾಷೆ, ಸಾಹಿತ್ಯ, ಸಂಗೀತ, ತತ್ವಶಾಸ್ತ್ರ, ಭಾರತೀಯಶಾಸ್ತ್ರ (Indology), ಕಲಾ ವಿಷಯಗಳು, ನೃತ್ಯ, ನಾಟಕ, ಶಿಕ್ಷಣ, ಗಣಿತಶಾಸ್ತ್ರ, ಸಂಖ್ಯಾ ಶಾಸ್ತ್ರ, ಶುದ್ಧ ಮತ್ತು ಅನ್ವಯಿಕ ವಿಜ್ಞಾನಗಳು, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಕ್ರೀಡೆ, ಭಾಷಾಂತರ ವಿಭಾಗ ಇತ್ಯಾದಿ ವಲಯಗಳನ್ನು ಉತ್ತೇಜನಗೊಳಿಸಲು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.

11.8 ಈ ಉನ್ನತ ಸಂಸ್ಥೆಗಳಲ್ಲಿ ಪಠ್ಯಕ್ರಮವು ನಮ್ಯತೆ ಹಾಗೂ ನಾವಿನ್ಯಪೂರ್ಣವಾಗಿ ರೂಪಿಸಲ್ಪಡುತ್ತದೆ. ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಯೋಜನೆ ಮತ್ತು ಸೇವೆಗಳಿಗೆ ಹಾಗೂ ಜಾಗತಿಕ ಪೌರತ್ವದ ಶಿಕ್ಷಣಕ್ಕೆ ಆದ್ಯತೆ ನೀಡಲಾಗುವುದು.

11.9 ಈ ಪದವಿಗಳ ಸಂರಚನೆ ಹಾಗೂ ಅವಧಿಯನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಸೂಕ್ತವಾಗಿ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ಪದವಿ ಶಿಕ್ಷಣವು 3 ಅಥವಾ 4 ವರ್ಷದ ಅವಧಿಯದಾಗಿದ್ದು, ಪ್ರತಿ ಹಂತವು ಸೂಕ್ತವಾಗಿ ಪ್ರಮಾಣೀಕರಿಸುವ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.

11.10 ಉನ್ನತ ಶಿಕ್ಷಣ ಸಂಸ್ಥೆಗಳು ಸ್ನಾತಕೋತ್ತರ ಪದವಿಗಳನ್ನು ವಿವಿಧ ವಿನ್ಯಾಸಗಳಲ್ಲಿ ರೂಪಿಸಿ ಒದಗಿಸುವ ನಮ್ಯತಾ ವ್ಯವಸ್ಥೆಯನ್ನು ಹೊಂದಿರುತ್ತವೆ.

11.11 ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಆದರ್ಶ ಸಾರ್ವಜನಿಕ ವಿಶ್ವವಿದ್ಯಾಲಯಗಳಾದ ಭಾರತೀಯ ತಂತ್ರಜ್ಞಾನ ಸಂಸ್ಥೆ(IIT), ಭಾರತೀಯ ಪ್ರಬಂಧನ ಸಂಸ್ಥೆ(IIM) ಮೊದಲಾದುವುಗಳನ್ನು 'ಮೇರು' (MERU-Multi-disciplinary Education & Research University) ಎಂದು ಕರೆಯಲಾಗುವುದು.

11.12 ಇನ್‌ಕ್ಯೂಬೇಷನ್ ಸೆಂಟರ್‌ಗಳನ್ನು ಸ್ಥಾಪಿಸಿ ಸಂಶೋಧನೆ ಮತ್ತು ಅವಿಷ್ಕಾರ ವಿಷಯಗಳಿಗೆ ಆದ್ಯತೆ ನೀಡಲಾಗುವುದು.

## 12 ಉತ್ತಮ ಕಲಿಕಾ ಪರಿಸರ ಹಾಗೂ ವಿದ್ಯಾರ್ಥಿಗಳಿಗೆ ನೆರವು

12.1 ಪರಿಣಾಮಕಾರಿ ಕಲಿಕೆ, ವಿಸ್ತೃತ ಮತ್ತು ಸೂಕ್ತವಾದ ಪಠ್ಯಕ್ರಮ, ಕ್ರಿಯಾಶೀಲ ಬೋಧನಾ ವ್ಯವಸ್ಥೆ, ಅವಿರತ ರಚನಾತ್ಮಕ ಮೌಲ್ಯಾಂಕನಗಳು ಮತ್ತು ವಿದ್ಯಾರ್ಥಿಗಳಿಂದ ಹೆಚ್ಚಿನ ಸಹಕಾರವನ್ನು ಬಯಸುತ್ತದೆ. ವಿದ್ಯಾರ್ಥಿಗಳು ಸಮರ್ಥವಾಗಿ, ಸ್ಪರ್ಧಾತ್ಮಕವಾಗಿ ತಮ್ಮನ್ನು ತಾವೇ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಸಹಕಾರ ಮತ್ತು ನೆರವು ನೀಡಲಾಗುವುದು.

12.2 ಪಠ್ಯಕ್ರಮದಲ್ಲಿನ ವಿಷಯಗಳನ್ನು ಕಲಿಕಾ ಅನುಭವದ ಮೂಲಕವೇ ವಿದ್ಯಾರ್ಥಿಗಳು ಗ್ರಹಿಸುವಂತೆ ರೂಪಿಸಲಾಗುವುದು. ಆಯ್ಕೆಯಾಧಾರಿತ ಶ್ರೇಯಾಂಕ ವಿಧಾನವನ್ನು (CBCS-Choice Based Credit System) ಪರಿಷ್ಕರಿಸಿ ಅನುಮಾಪಕ–ಶ್ರೇಯಾಂಕ ಆಧಾರಿತ ಶ್ರೇಣೀಕರಣ ವ್ಯವಸ್ಥೆಗೆ (Criterion Based Credit System) ರೂಪಾಂತರಗೊಳಿಸಲಾಗುವುದು. ಉನ್ನತ ಶಿಕ್ಷಣ ಸಂಸ್ಥೆಗಳು ಪ್ರಸ್ತುತ ಇರುವ ಹೆಚ್ಚಿನ ಪರೀಕ್ಷಾ ವಿಧಾನದಿಂದ ದೂರ ಸರಿದು, ನಿರಂತರ ಹಾಗೂ ಸರ್ವಾಂಗೀಣ ಪ್ರಬುದ್ಧ ವಿಶ್ಲೇಷಣೆಯ ಮೌಲ್ಯಾಂಕನದ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದಾಗಿದೆ.

12.3 ಪ್ರತಿ ಸಂಸ್ಥೆಯು ತನ್ನ ಶೈಕ್ಷಣಿಕ ಯೋಜನೆಗಳನ್ನು, ತರಗತಿ ಯೋಜನೆಗಳನ್ನು ವಿಸ್ತಾರವಾದ "ಸಾಂಸ್ಥಿಕ ಅಭಿವೃದ್ಧಿ ಯೋಜನೆ" (IDP) ಯಲ್ಲಿ ಸಮನ್ವಯಗೊಳಿಸಬೇಕಾಗಿದೆ.

12.4 ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉತ್ತೇಜನ ಮತ್ತು ಸಹಕಾರವನ್ನು ನೀಡಲಾಗುವುದು

12.5 ದೂರ ಶಿಕ್ಷಣ ಕಲಿಕೆ ಮತ್ತು ಆನ್–ಲೈನ್ ಶಿಕ್ಷಣವು ಒಂದು ಸ್ವಾಭಾವಿಕ ಪಥವನ್ನು ರೂಪಿಸುತ್ತಿದ್ದು, ಇದಕ್ಕಾಗಿ ಗುಣಮಟ್ಟದ ಕಲಿಕೆಯ ವಿನ್ಯಾಸವನ್ನು ರೂಪಿಸಲಾಗುವುದು.

12.6 ದೂರ ಶಿಕ್ಷಣ ಕಲಿಕೆ ಮತ್ತು ಆನ್–ಲೈನ್ ಶಿಕ್ಷಣವು ಜಾಗತಿಕ ಮಾನಕಗಳ ಪ್ರಕಾರವೇ ಗುಣಾತ್ಮಕತೆಯನ್ನು ಸಾಧಿಸುವಂತಹ ಯೋಜನೆಗಳನ್ನು ರೂಪಿಸಲಾಗುವುದು.

**ಅಂತಾರಾಷ್ಟ್ರೀಕರಣ**

12.7 ಈ ನೀತಿಯಲ್ಲಿ ರೂಪಿಸಲ್ಪಟ್ಟಿರುವ ಉಪಕ್ರಮಗಳ ಪರಿಣಾಮವಾಗಿ ಭಾರತದಲ್ಲಿ ಅಧ್ಯಯನ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳಿಗೂ ಮತ್ತು ಭಾರತದ ವಿದ್ಯಾರ್ಥಿಗಳು ಅಧ್ಯಯನ ಸಂಬಂಧ ಬೇರೆ ಬೇರೆ ದೇಶಗಳಿಗೆ ಪ್ರಯಾಣಿಸಲು, ಸಂದರ್ಶಿಸಲು, ಅಧ್ಯಯನ ನಡೆಸಲು ಸಂಶೋಧನೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಗುವುದು.

12.8 ಭಾರತವು ತನಗಿದ್ದ 'ವಿಶ್ವಗುರು' ಸ್ಥಾನವನ್ನು ಪುನರ್ ಸ್ಥಾಪಿಸುವ ಸಲುವಾಗಿ ಜಾಗತಿಕ ವಿದ್ಯಾರ್ಥಿ ಸಮುದಾಯಕ್ಕೆ ಅಧ್ಯಯನಕ್ಕೆ ಅನುಕೂಲವಾಗುವಂತೆ 'ಅಂತಾರಾಷ್ಟ್ರೀಯ ವಿದ್ಯಾರ್ಥಿ ಕಾರ್ಯಾಲಯವನ್ನು' ಸ್ಥಾಪಿಸಲಾಗುವುದು.

12.9 **ವಿದ್ಯಾರ್ಥಿಗಳ ಚಟುವಟಿಕೆ ಮತ್ತು ಭಾಗವಹಿಸುವಿಕೆ:** ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗೆ ಪ್ರಥಮ ಪ್ರಾಶಸ್ತ್ಯವಿದ್ದು, ಸದಾ ಕಾರ್ಯ ಚಟುವಟಿಕೆಯಿಂದ ಸ್ಪಂದನಾಶೀಲವಾಗಿರುವ ಬೋಧನಾ–ಕಲಿಕಾ ವ್ಯವಸ್ಥೆಯನ್ನು ರೂಪಿಸಲಾಗುವುದು

12.10 **ವಿದ್ಯಾರ್ಥಿಗಳಿಗೆ ಹಣಕಾಸಿನ ಸಹಕಾರ:** ಹಲವು ವಿಧಾನಗಳಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಹಣಕಾಸಿನ ಸೌಲಭ್ಯ ದೊರೆಯುವಂತೆ ಅವಕಾಶ ಒದಗಿಸಬೇಕು. ಅದಕ್ಕಾಗಿ 'ರಾಷ್ಟ್ರೀಯ ವಿದ್ಯಾರ್ಥಿ ವೇತನದ' ಮೂಲಕ ಉತ್ತೇಜನ ನೀಡಲಾಗುವುದು.

13. **ಪ್ರೇರಣಾಪೂರ್ಣ, ಜ್ಞಾನಸಂಪನ್ನ ಮತ್ತು ಸಮರ್ಥ ಬೋಧಕ ಸಿಬ್ಬಂದಿ**

13.1 ಒಂದು ಯಶಸ್ವಿ ಉನ್ನತ ಶಿಕ್ಷಣ ಸಂಸ್ಥೆಯ ಪ್ರಮುಖ ಲಕ್ಷಣ ಅಲ್ಲಿರುವ ಗುಣಾತ್ಮಕ ಶಿಕ್ಷಣದ ಲಭ್ಯತೆ ಮತ್ತು ಅದನ್ನು ಬೋಧಿಸುತ್ತಿರುವ ಬೋಧಕ ವರ್ಗದ ಕಾರ್ಯತತ್ಪರತೆಯಾಗಿರುತ್ತದೆ. ಉನ್ನತ ಶಿಕ್ಷಣದ ಗುರಿಗಳನ್ನು ಸಾಧಿಸುವ ಸಲುವಾಗಿ ಸಮರ್ಥ ಬೋಧಕ ಸಿಬ್ಬಂದಿಗಳು ಶಿಕ್ಷಣ ಸಂಸ್ಥೆಗಳಿಗೆ ಲಭ್ಯವಾಗುವಂತೆ ಮಾಡಲು ಅನೇಕ ಉಪಕ್ರಮಗಳನ್ನು ಶಿಫಾರಸ್ಸು ಮಾಡಲಾಗುತ್ತದೆ.

13.2 ಉಚ್ಚ ಶಿಕ್ಷಣ ಸಂಸ್ಥೆಗಳಿಗೆ ಅತ್ಯಾವಶ್ಯವಾಗಿರುವ ಮೂಲಭೂತ ಹಾಗೂ ಬೋಧನೆಗೆ ಸಹಾಯಕವಾಗಿರುವ ವ್ಯವಸ್ಥೆಯನ್ನು ಮತ್ತು ಉಪಕರಣಗಳನ್ನು ಒದಗಿಸಲಾಗುವುದು.

13.3 ಒಂದು ಸಂಸ್ಥೆಯಲ್ಲಿ ನೇಮಕಾತಿ ಹೊಂದಿರುವ ಬೋಧಕ ಸಿಬ್ಬಂದಿಗಳು ಸಾಮಾನ್ಯವಾಗಿ ಹಲವಾರು ಸಂಸ್ಥೆಗಳಿಗೆ ವರ್ಗಾವಣೆಗೊಳ್ಳುವಂತಿಲ್ಲ. ಇದರಿಂದ ತಾವು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ ಹಾಗೂ ತನ್ಮೂಲಕ ಸಮುದಾಯಕ್ಕೂ ಬದ್ಧತೆಯನ್ನು ಹೊಂದಿರಲು ಅನುಕೂಲವಾಗುತ್ತದೆ.

13.4 ನಿಗದಿಪಡಿಸಿರುವ ಹಾಗೂ ಅನುಮೋದಿಸಿರುವ ಶೈಕ್ಷಣಿಕ ವಿನ್ಯಾಸದ ವ್ಯಾಪ್ತಿಯಲ್ಲಿಯೇ, ಬೋಧಕ ಸಿಬ್ಬಂದಿ

ತಮ್ಮದೇ ವಿನ್ಯಾಸದ ಪಠ್ಯಕ್ರಮದ ಮಾದರಿಯನ್ನು ಅನುಸರಿಸಿ ಹಾಗೂ ಅದರ ಮೂಲಕ ಶೈಕ್ಷಣಿಕವಾಗಿ ಸಾಧನೆಯನ್ನು ಮಾಡಲು ಸ್ವಾತಂತ್ರ್ಯವನ್ನು ಒದಗಿಸಲಾಗುವುದು.

13.5 ಶ್ರೇಷ್ಠ ಸಾಧನೆ ಮಾಡಿದವರಿಗೆ ಬಡ್ತಿ, ಪುರಸ್ಕಾರ, ಪದೋನ್ನತಿ, ಮಾನ್ಯತೆ ನೀಡಲಾಗುವುದು ಹಾಗೂ ಸಂಸ್ಥೆಯ ನಾಯಕತ್ವವನ್ನೂ ವಹಿಸುವುದರೊಂದಿಗೆ ಅವರನ್ನು ಗೌರವಿಸಲಾಗುವುದು.

13.6 ಬೋಧಕ ಸಿಬ್ಬಂದಿಯ ಆಯ್ಕೆಗೆ ಸೂಕ್ತ ಮಾನದಂಡಗಳನ್ನು ರೂಪಿಸಲಾಗುವುದು.

13.7 ಉನ್ನತ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯಲ್ಲಿ ಉತ್ತಮ ಕೆಲಸದ ವಾತಾವರಣ, ಪಾಠ ಪ್ರವಚನ ಹಾಗೂ ಸಂಶೋಧನೆ ಮತ್ತು ಸಮುದಾಯಗಳಿಗೆ ಉಪಯುಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಗುರಿಗಳನ್ನು ರೂಪಿಸಬೇಕಾಗಿದೆ.

14. **ಉಚ್ಚ ಶಿಕ್ಷಣದಲ್ಲಿ ಸಮತೆ ಮತ್ತು ಒಳಗೊಳ್ಳುವಿಕೆ**

14.1 ಈ ನೀತಿಯು, ಎಲ್ಲಾ ವಿದ್ಯಾರ್ಥಿಗಳಿಗೂ ಉಚ್ಚ ಶಿಕ್ಷಣಕ್ಕೆ ಪ್ರವೇಶಾವಕಾಶವನ್ನು ಅಧಿಕ ಪ್ರಮಾಣದಲ್ಲಿ ಒದಗಿಸುವ ಸಾಧ್ಯತೆಯನ್ನು ಕಲ್ಪಿಸುತ್ತದೆ. ಇದು ಉನ್ನತ ಶಿಕ್ಷಣವು ಎಲ್ಲರಿಗೂ ಸಮಾನವಾಗಿ ಲಭ್ಯವಾಗುವುದನ್ನು ಖಚಿತಪಡಿಸುತ್ತದೆ.


14.2 ಉನ್ನತ ಶಿಕ್ಷಣದಲ್ಲಿ ಹಂತ ಹಂತವಾಗಿ ಸುಸ್ಥಿರ ಪರಿವರ್ತನೆಯನ್ನು ಖಚಿತಗೊಳಿಸುತ್ತದೆ.

14.3 ಈ ಉದ್ದೇಶಕ್ಕಾಗಿ ಉನ್ನತ ಶಿಕ್ಷಣಕ್ಕಾಗಿ ನಿರ್ದಿಷ್ಟಪಡಿಸಿರುವ ಹೆಚ್ಚುವರಿ ಕ್ರಮಗಳನ್ನು ಸರ್ಕಾರಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಳ್ಳಬೇಕಿದೆ – ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶಾವಕಾಶಗಳಲ್ಲಿ ಲಿಂಗಾನುಪಾತದಲ್ಲಿ ಸಮತೋಲನವನ್ನು ಹೆಚ್ಚಿಸುವುದು, ಸ್ಥಳೀಯ, ಭಾರತೀಯ ಭಾಷೆಗಳಲ್ಲಿ ಅಥವಾ ದ್ವಿಭಾಷಾ ವ್ಯವಸ್ಥೆಯಲ್ಲಿ ಕಲಿಸುವುದು, ಕಲಿಕೆಯ ಉತ್ತಮ ಫಲಿತಾಂಶಕ್ಕಾಗಿ ತಂತ್ರಜ್ಞಾನ ಹಾಗೂ ಉಪಕರಣಗಳನ್ನು ಅಭಿವೃದ್ಧಿಪಡಿಸುವುದು.

15. **ಶಿಕ್ಷಕರ ಶಿಕ್ಷಣ**

15.1 ಶಿಕ್ಷಕರ ಶಿಕ್ಷಣ ವಿಶಾಲಾರ್ಥದಲ್ಲಿ ಶಾಲಾ ಶಿಕ್ಷಕರನ್ನು ಒಳಗೊಂಡಿರುವ ವಲಯವಾಗಿದ್ದು, ಮುಂದಿನ ಪೀಳಿಗೆಯನ್ನು ರೂಪಿಸುತ್ತದೆ. ಶಿಕ್ಷಕನ ಸಿದ್ಧತೆ ಎಂದರೆ 'ಹಲವು ವಿಷಯಗಳ–ಚಟುವಟಿಕೆಗಳ' ನ್ನು ರೂಪಿಸಲು ವಿಕಸನಗೊಳ್ಳುವುದಾಗಿದೆ. ಶಿಕ್ಷಕರು ಕಡ್ಡಾಯವಾಗಿ ಭಾರತೀಯ ಭಾಷೆಗಳ ಜ್ಞಾನ, ನೀತಿಗಳು ಮತ್ತು ಗುಡ್ಡಗಾಡು ಸಂಸ್ಕೃತಿಯ ಪರಂಪರೆಗಳ ಜೊತೆಜೊತೆಗೆ ಆಧುನಿಕ ಶಿಕ್ಷಣದಲ್ಲಿನ ಬೆಳವಣಿಗೆಗಳು ಮತ್ತು ಶಿಕ್ಷಣ ಶಾಸ್ತ್ರದ ವಿಷಯದಲ್ಲಿ ಭದ್ರಬುನಾದಿಯನ್ನು ಪಡೆದುಕೊಳ್ಳುವುದಾಗಿದೆ.

15.2 ನ್ಯಾಯಮೂರ್ತಿ ಜೆ. ಎಸ್. ವರ್ಮಾ ಆಯೋಗವು ತನ್ನ ವರದಿಯಲ್ಲಿ ಉಲ್ಲೇಖಿಸಿರುವಂತೆ ದೇಶಾದ್ಯಂತ ಇರುವ




ಶಿಕ್ಷಕರ ತರಬೇತಿ ಸಂಸ್ಥೆಗಳು ಶಿಕ್ಷಕ ತರಬೇತಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಈ ವ್ಯವಸ್ಥೆಯನ್ನು ಸರಿಪಡಿಸಲು ನಿಬಂಧನಾ ವ್ಯವಸ್ಥೆಯನ್ನು ಕಠೋರವಾದ ಕ್ರಮಗಳಿಂದಲೇ ಪುನರುಜ್ಜೀವನಗೊಳಿಸಬೇಕಾಗಿದೆ.

15.3 2030 ರ ವೇಳೆಗೆ ಸಮರ್ಥ, ಬಹುಶಿಸ್ತೀಯ ವ್ಯವಸ್ಥೆ ಹಾಗೂ ಸಮಗ್ರ ಶಿಕ್ಷಣ ತರಬೇತಿಗಳು ಮಾತ್ರ ಅಸ್ತಿತ್ವದಲ್ಲಿರಬೇಕು.

15.4 ಬೋಧಕ ಶಿಕ್ಷಣ ಕೋರ್ಸ್‌ಗಳನ್ನು (B.Ed., Course) ಸಂಯುಕ್ತ ಬಹುಶಿಸ್ತುಗಳ (Composite Multi-disciplinary)

ಸಂಸ್ಥೆಗಳೊಂದಿಗೆ ನಡೆಸಬೇಕು. ಎಲ್ಲಾ ಬಹುಶಿಸ್ತೀಯ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಶಿಕ್ಷಣ ವಿಭಾಗಗಳನ್ನು ತೆರೆಯುವ ಗುರಿಯನ್ನು ಹಾಕಿಕೊಳ್ಳಬೇಕು. ಸ್ಟ್ಯಾಂಡ್ ಅಲೋನ್ ಟಿ.ಇ.ಐ ಗಳು 2030 ರ ವೇಳೆಗೆ ಬಹುಶಿಸ್ತೀಯ ಸಂಸ್ಥೆಗಳಾಗಿ ಮಾರ್ಪಾಡುಗೊಳ್ಳಬೇಕಿದೆ.

15.5 4 ವರ್ಷಗಳ ಅವಧಿಯ ಸಮಗ್ರ ಶಿಕ್ಷಣ ಶಾಸ್ತ್ರದ ಪದವಿಯನ್ನು (ಬಿ.ಎಡ್.,) ಇಂತಹ ಬಹುಶಿಸ್ತೀಯ ವ್ಯವಸ್ಥೆ ಹೊಂದಿದ ಉನ್ನತ ಶಿಕ್ಷಣ ಸಂಸ್ಥೆಗಳು ಪ್ರಾರಂಭಿಸುವುದು. ಒಟ್ಟಿನಲ್ಲಿ ವರ್ಷ 2030 ಕ್ಕೆ ಶಾಲಾ ಶಿಕ್ಷಕರಿಗೆ ಕನಿಷ್ಠ ವಿದ್ಯಾರ್ಹತೆ ಪದವಿ ಆಗಿರುತ್ತದೆ.

15.6 ಶಿಕ್ಷಕರ ತರಬೇತಿ ಶಿಕ್ಷಣವನ್ನು ಒದಗಿಸುವ ಉಚ್ಚ ಶಿಕ್ಷಣ ಸಂಸ್ಥೆಗಳು ತಮ್ಮಲ್ಲಿ ಇರುವ ವಿವಿಧ ವಿಷಯಗಳು ಹಾಗೂ ತತ್ಸಂಬಂಧಿತ ವಿಷಯಗಳಲ್ಲಿ ಪರಿಣಿತರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ಪ್ರತಿ ಸಂಸ್ಥೆಯು ಸರ್ಕಾರಿ ಅಥವಾ ಖಾಸಗೀ ಶಾಲೆಗಳ ಜೊತೆಗೆ ಕಾರ್ಯ ನಿರ್ವಹಿಸುವ ಉದ್ದೇಶದಿಂದ ಒಂದು ಸಂಪರ್ಕ ಜಾಲವನ್ನು ರೂಪಿಸಿಕೊಳ್ಳಬೇಕಾಗಿದೆ.

15.7 ಶಿಕ್ಷಕರ ಶಿಕ್ಷಣದಲ್ಲಿ ಏಕರೂಪದ ಮಾನಕಗಳನ್ನು ಸ್ಥಿತಗೊಳಿಸುವ ಸಲುವಾಗಿ ಸೇವಾ ಪೂರ್ವ ಶಿಕ್ಷಕರನ್ನು ಸಿದ್ದಗೊಳಿಸಲು ಆಯಾ ವಿಷಯಗಳಲ್ಲಿ ಬುದ್ಧಿಕ್ಷಮತಾ (Aptitude test) ಪರೀಕ್ಷೆಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (National Testing Institute)ಯ ಮೂಲಕ ಮಾಡಲಾಗುತ್ತದೆ.

15.8 ಪರಿಕಲ್ಪನಾತ್ಮಕ ಪ್ರಗತಿ ಸಾಧಿಸಲು ಬಹುಶಿಸ್ತೀಯ ಶಿಕ್ಷಣವನ್ನು ಬಲಪಡಿಸುವ ಗುರಿ ಹೊಂದಲಾಗಿದೆ.

15.9 ಹೊಸದಾಗಿ ಪಿ.ಎಚ್.ಡಿ., ಪಡೆದ ಎಲ್ಲರೂ ಅವರ ಡಾಕ್ಟರಲ್ ಅವಧಿಯಲ್ಲಿ ಅವರು ಅಧ್ಯಯನ ಮಾಡಿರುವ ವಿಷಯದ ಕುರಿತು ಲೇಖನಗಳನ್ನು ರೂಪಿಸಿ ಶ್ರೇಯಾಂಕ ಆಧಾರಿತ ವರ್ಗಗಳನ್ನು ಗಳಿಸಿಕೊಳ್ಳಬೇಕಾಗುತ್ತದೆ.

15.10 ಸೇವಾವಧಿಯಲ್ಲಿರುವಾಗಲೇ ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಯು ತಂತ್ರಜ್ಞಾನ ಲಭ್ಯತೆಯ ಅವಕಾಶಗಳನ್ನು ಬಳಸಿಕೊಂಡು ತರಬೇತಿಯನ್ನು ಪಡೆಯಲು ಪ್ರೋತ್ಸಾಹಿಸಲಾಗುವುದು. ಇದರಿಂದ ಅಲ್ಪಕಾಲದಲ್ಲಿಯೇ ಹೆಚ್ಚಿನ ಸಂಖ್ಯೆಯ ಶಿಕ್ಷಕರು ತರಬೇತಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

15.11 ಒಂದು "ರಾಷ್ಟ್ರೀಯ ಮಾನಿಟರಿಂಗ್ ಮಿಷನ್" ನ್ನು ಸ್ಥಾಪಿಸಲಾಗುವುದು ಇದರಲ್ಲಿ ಅಪಾರ ಸಂಖ್ಯೆಯ ಪ್ರತಿಭಾನ್ವಿತ ಹಿರಿಯರ ತಂಡವಿದ್ದು, ವಿಶ್ವವಿದ್ಯಾಲಯಗಳಿಗೆ ವೃತ್ತಿಪರ ಸಹಕಾರ ಹಾಗೂ ಮಾರ್ಗದರ್ಶನ ನೀಡುತ್ತದೆ.

16. ವೃತ್ತಿಪರ ಶಿಕ್ಷಣದ ಪುನರ್ ಸಂಯೋಜನೆ

16.1 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದಾಜು ಮಾಡಿದಂತೆ ಭಾರತದಲ್ಲಿ 19–24 ವರ್ಷದ ವಯೋಮಾನದ ಕೇವಲ 5% ಮಾತ್ರ ವೃತ್ತಿಪರ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ.

16.2 ಅತ್ಯಂತ ಕಡಿಮೆ ಪ್ರಮಾಣದಲ್ಲಿ ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣವನ್ನು ಪಡೆದುಕೊಳ್ಳುತ್ತಿರುವುದಕ್ಕೆ ಕಾರಣ, ಈ ವೃತ್ತಿಪರ ಶಿಕ್ಷಣವನ್ನು– ಹಳೆಯ ವಿಧಾನದಲ್ಲಿಯೇ ಅಂದರೆ–11 ಅಥವಾ 12 ನೇ ತರಗತಿ ಪೂರೈಸಿದ ಅಥವಾ 8ನೇ ತರಗತಿಯಲ್ಲಿ ಶಿಕ್ಷಣವನ್ನು ತೊರೆದಿರುವವರಿಗೆ ಎಂತಲೇ ರೂಪಿತಗೊಂಡಿರುವುದು. ಒಂದು ವೇಳೆ 11–12 ನೇ ತರಗತಿಗಳನ್ನು ಪೂರೈಸಿದ ನಂತರದಲ್ಲಿ ವಿದ್ಯಾರ್ಥಿಗಳು ಈ ವೃತಿಪರ ಶಿಕ್ಷಣವನ್ನು ಪಡೆದುಕೊಂಡಿದ್ದರೂ ಅವರಿಗೆ ಸೂಕ್ತವಾದ ಹಾಗೂ ಅಧಿಕೃತವಾದ ವೃತ್ತಿ ಅವಕಾಶಗಳು ಲಭ್ಯವಾಗಿರುವುದಿಲ್ಲ. ಹೀಗಾಗಿ ಅವರು, ತಾವು ಆಯ್ಕೆ ಮಾಡಿಕೊಂಡ ವೃತಿಪರ ವಿಷಯಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವುದು ಸಾಧ್ಯವಾಗಲಿಲ್ಲ. ಅದೇ ಸಮಯಕ್ಕೆ ಸಾಮಾನ್ಯವಾಗಿ ಉನ್ನತ ಶಿಕ್ಷಣದ ಹಂತದಲ್ಲಿ ಇಂತಹ ವೃತ್ತಿಪರ ವಿಷಯಗಳಿಗೆ ಪ್ರವೇಶಾವಕಾಶಗಳು ಇರಲಿಲ್ಲ. ಹೀಗಾಗಿ, ಅವರನ್ನು ಶಿಕ್ಷಣದ ಮುಖ್ಯವಾಹಿನಿಯಿಂದ ಅಥವಾ ಶೈಕ್ಷಣಿಕ ವಲಯದಿಂದಲೇ ದೂರವಿಡುವಂತಾಯಿತು. ಈ ವಿಷಯವೇ ತೀರ ಇತ್ತೀಚೆಗೆ ಅಂದರೆ–2013 ರಲ್ಲಿ "ರಾಷ್ಟ್ರೀಯ ಕೌಶಲ್ಯಗಳ ಅರ್ಹತೆಯ ರೂಪುರೇಷೆ (NSQF)" ಗಳ ಮೂಲಕ ಘೋಷಿಸಲ್ಪಟ್ಟಿದೆ.

16.3 ಮುಖ್ಯವಾಹಿನಿಗೆ ಹೋಲಿಸಿ ಈ ವೃತಿಪರ ಶಿಕ್ಷಣವನ್ನು ಕೀಳರಿಮೆಯಿಂದಲೂ ಕಾಣಲಾಗಿದೆ. ಅದೂ ಅಲ್ಲದೇ ಈ ವೃತ್ತಿಪರ ವಿದ್ಯಾರ್ಥಿಗಳು ಮುಖ್ಯವಾಹಿನಿಯ ವಿದ್ಯಾರ್ಥಿಗಳೊಂದಿಗೆ ಹೊಂದಿಕೊಳ್ಳಲೂ ಸಾಧ್ಯವಾಗಿರುವುದಿಲ್ಲ. ಭವಿಷ್ಯದಲ್ಲಿ ಈ ವೃತ್ತಿಪರ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ತಲುಪಿಸುವಂತೆ ಪುನರ್ ನಿರೂಪಣೆಗೊಳಿಸಬೇಕಾಗಿದೆ.

16.4 ಮಾಧ್ಯಮಿಕ ಶಾಲಾ ಅವಧಿಯ ಪ್ರಾರಂಭದಲ್ಲಿಯೇ ವೃತ್ತಿಪರ ಶಿಕ್ಷಣದ ಅವಕಾಶವನ್ನು ಒದಗಿಸಿಕೊಡಬೇಕಾಗುತ್ತದೆ.

16.5 2025 ರ ಸಮಯಕ್ಕೆ ಈ ಉಚ್ಚ ಶಿಕ್ಷಣ ನೀತಿಯಡಿಯಲ್ಲಿ ವೃತ್ತಿಪರ ವಿಷಯಗಳಲ್ಲಿ ಅಧ್ಯಯನವನ್ನು ಪೂರೈಸಿದ 50% ವಿದ್ಯಾರ್ಥಿಗಳು ಇರುತ್ತಾರೆ. ಇದಕ್ಕಾಗಿ ಒಂದು ಕ್ರಿಯಾಯೋಜನೆಯನ್ನು ರೂಪಿಸಿಕೊಳ್ಳಬೇಕು.

16.6 ಬರಲಿರುವ ಒಂದು ದಶಕದ ಅವಧಿಯಲ್ಲಿ ವೃತ್ತಿಪರ ಶಿಕ್ಷಣವು ವ್ಯವಸ್ಥಿತವಾಗಿ ಸಮಗ್ರ ಶಿಕ್ಷಣದ ಅಂಶವಾಗಿಯೇ ಎಲ್ಲಾ ಶಾಲೆಗಳಲ್ಲಿ, ಮಾಧ್ಯಮಿಕ ಶಾಲೆಗಳಲ್ಲಿ ಮತ್ತು ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿಯೂ ಸ್ಥಾಪಿತಗೊಳ್ಳಲಿದೆ. ವೃತ್ತಿಪರ ಶಿಕ್ಷಣದ ಸಮಗ್ರೀಕರಣಕ್ಕಾಗಿ ರಾಷ್ಟ್ರೀಯ ಸಮಿತಿಯನ್ನು ರಚಿಸುವುದು.

16.7 ಉಚ್ಚ ಶಿಕ್ಷಣ ಸಂಸ್ಥೆಗಳು ಕೈಗಾರಿಕೆಗಳ ಪಾಲುದಾರಿಕೆಯ ಜೊತೆಗೆ ಪೋಷಣಾ ಕೇಂದ್ರಗಳನ್ನು (Incubation center) ಸ್ಥಾಪಿಸಬಹುದಾಗಿದೆ.

16.8 ವೃತ್ತಿ ಹಾಗೂ ವೃತ್ತಿಪರಿಣಿತಿಯ ಪ್ರತಿ ವಿಭಾಗಕ್ಕೂ ರಾಷ್ಟ್ರೀಯ ಕೌಶಲಾರ್ಹತೆಯ ರೂಪುರೇಷೆಗಳನ್ನು ವಿವರವಾಗಿಯೇ ರೂಪಿಸಲಾಗುವುದು.

**17 ಶೈಕ್ಷಣಿಕ ಗುಣಾತ್ಮಕ ಸಂಶೋಧನೆಗಳ ವೇಗವರ್ಧನೆಗೆ ನೂತನ ರಾಷ್ಟ್ರೀಯ ಸಂಶೋಧನಾ ಸಂಸ್ಥೆಯ ಸ್ಥಾಪನೆ**

17.1 ಜ್ಞಾನ ಸೃಷ್ಠಿ ಮತ್ತು ಸಂಶೋಧನೆ ಇವು – ಅಭಿವೃದ್ಧಿಶೀಲ ಹಾಗೂ ಸುಸ್ಥಿರತೆಯನ್ನು ಸಾಧಿಸುತ್ತಿರುವ ಬೃಹತ್ ಹಾಗೂ ತೀವ್ರ ಸ್ಪಂದನಶೀಲತೆಯನ್ನು ಹೊಂದಿರುವ ಆರ್ಥಿಕ ವ್ಯವಸ್ಥೆಗಳಲ್ಲಿ ಸಮಾಜವನ್ನು ಸುಧಾರಣೆಯತ್ತ ಮುನ್ನೆಡೆಸುತ್ತದೆ. ಮತ್ತು ರಾಷ್ಟ್ರವನ್ನು ಸದಾ ಸ್ಫೂರ್ತಿಗೊಳಿಸುತ್ತಾ ಉನ್ನತ ಗುರಿಯನ್ನು ತಲುಪುವಂತೆ ಮಾಡುವಲ್ಲಿ ಸದಾ ಮಹತ್ವ ಪಡೆದಿರುತ್ತದೆ.

17.2 ಸಂಶೋಧನೆಗೆ ಒಂದು ಸದೃಢವಾದ ವಾತಾವರಣ ಸೃಷ್ಠಿಮಾಡಬೇಕು. ಜೈವಿಕ ತಂತ್ರಜ್ಞಾನ, ಡಿಜಿಟಲ್ ಮಾರುಕಟ್ಟೆ, ಕೃತಕ ಬುದ್ಧಿಮತ್ತೆ, ಯಾಂತ್ರಿಕ ವ್ಯವಸ್ಥೆಯ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ.

17.3 ಅತಿ ಪ್ರಾಮುಖ್ಯತೆಯ ಹೊರತಾಗಿಯೂ ಭಾರತದಲ್ಲಿ ಸಂಶೋಧನೆ ಮತ್ತು ಅವಿಷ್ಕಾರಗಳಿಗೆ ಹೂಡಿಕೆಯಾಗುತ್ತಿರುವ ಮೊತ್ತ ಒಟ್ಟು ದೇಶೀಯ ಉತ್ಪನ್ನದ ಶೇಕಡಾ 0.69 ಮಾತ್ರ.

17.4 ಸಾಮಾಜಿಕ ಸವಾಲುಗಳ ವಿಷಯಗಳಾದ ಕುಡಿಯುವ ನೀರು, ಸ್ವಚ್ಛತೆ, ಗುಣಾತ್ಮಕ ಶಿಕ್ಷಣ, ಆರೋಗ್ಯ ಸುರಕ್ಷೆ, ಸುಧಾರಿತ ಸಾರಿಗೆ ವ್ಯವಸ್ಥೆ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆಗೆ ಆದ್ಯತೆ ನೀಡಲಾಗುತ್ತದೆ.

17.5 ಶ್ರೇಷ್ಠ ಸಂಶೋಧನೆಗಳು ಜಗತ್ತಿನಾದ್ಯಂತ ಕೇವಲ ಬಹುಶಿಸ್ತೀಯ ವ್ಯವಸ್ಥೆ ಇರುವ ವಿಶ್ವವಿದ್ಯಾಲಯಗಳಲ್ಲಿಯೇ ನಡೆಯುತ್ತಿವೆ.

17.6 21 ನೇ ಶತಮಾನದಲ್ಲಿ ಭಾರತವು ಒಂದು ಜ್ಞಾನಸಮೃದ್ಧ ಹಾಗೂ ಜಾಗೃತಗೊಂಡ ಸಮಾಜದ ಮೂಲಕ ಜಗತ್ತಿನ ಮೂರು ಪ್ರಮುಖ ಆರ್ಥಿಕ ವಲಯಗಳಲ್ಲಿ ಮುಂಚೂಣಿಯಲ್ಲಿ ಇರುವಂತೆ ಮಾಡಲು ಈ ಸಂಶೋಧನೆ ಮತ್ತು ಅವಿಷ್ಕಾರಗಳು ರೂಪಿತಗೊಳ್ಳಬೇಕಾಗಿವೆ.

17.7 ದೇಶದಲ್ಲಿ ಗುಣಾತ್ಮಕ ಸಂಶೋಧನೆಗಳನ್ನು ವೇಗವರ್ಧನೆಗೊಳಿಸುವಲ್ಲಿ **"ರಾಷ್ಟ್ರೀಯ ಸಂಶೋಧನಾ ಸಂಸ್ಥೆ"** ಯನ್ನು ಸ್ಥಾಪಿಸಲಾಗುತ್ತದೆ. ಅವಶ್ಯಕತೆಗಳಿಗೆ ಅನುಸಾರವಾಗಿ ನಿಧಿಗಳನ್ನು ಒದಗಿಸಲಾಗುವುದು. ಅಪೂರ್ವ ಸಂಶೋಧನೆಗಳನ್ನು ಹಾಗೂ ಅವುಗಳ ಪ್ರಗತಿಯನ್ನು ಅದು ಗುರ್ತಿಸಿ ಮಾನ್ಯತೆ ನೀಡುತ್ತದೆ.

**18. ಉನ್ನತ ಶಿಕ್ಷಣದ ನಿಬಂಧನಾ ನೀತಿಯ ರೂಪಾಂತರಣ**

18.1 ಉನ್ನತ ಶಿಕ್ಷಣದ ನಿಬಂಧನೆಗಳನ್ನು ಸುಧಾರಿಸಿ ಪುನರ್ ಶಕ್ತಿ ಪೂರಣಗೊಳಿಸಲು ಆದ್ಯತೆ ನೀಡಲಾಗಿದೆ. ಉನ್ನತ ಶಿಕ್ಷಣದಲ್ಲಿ ಶ್ರೇಷ್ಠತೆ ಮತ್ತು ಸಾರ್ವಜನಿಕ ಮನೋಭಾವವನ್ನು ಪ್ರೋತ್ಸಾಹಿಸುವ ಸಲುವಾಗಿ ಪರಿಣಾಮಕಾರಿ, ಸಶಕ್ತಗೊಳಿಸುವ ಮತ್ತು ಸ್ಪಂದನಾತ್ಮಕ ನಿಯಂತ್ರಣವನ್ನು ತರುವುದು.

**18.2 ಭಾರತೀಯ ಉನ್ನತ ಶಿಕ್ಷಣ ಆಯೋಗದ ಪ್ರಥಮ ಶೃಂಗವಾಗಿ "ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಕ ಮಂಡಳಿ" ಯು ಕಾರ್ಯ ನಿರ್ವಹಿಸುತ್ತದೆ.**

ನಿಯಂತ್ರಣವು ಉತ್ತಮ ಆಡಳಿತದ ಜೊತೆಗೆ ಸಾರ್ವಜನಿಕ ಉತ್ಸಾಹ, ನ್ಯಾಯ, ಉತ್ಕೃಷ್ಟತೆ, ಆರ್ಥಿಕ ಸ್ಥಿರತೆ ಮತ್ತು ಪ್ರಾಮಾಣಿಕತೆಯನ್ನು ಖಚಿತಪಡಿಸಿಕೊಳ್ಳಲು ಸ್ಪಂದನಾತ್ಮಕ ಮತ್ತು ಸರಳವಾದ ಅಂಶಗಳನ್ನು ಹೊಂದಿರುತ್ತದೆ.

01.ಮಾನದಂಡ ನಿಗದಿ, ಧನಸಹಾಯ, ಮಾನ್ಯತೆ ಮತ್ತು ನಿಯಂತ್ರಣದ ಕಾರ್ಯಗಳನ್ನು ಪ್ರತ್ಯೇಕಿಸಲಾಗುತ್ತದೆ. ಹಾಗೂ ಇವುಗಳನ್ನು ಸ್ವತಂತ್ರ ಸಂಸ್ಥೆಗಳ ಮೂಲಕ ನಡೆಸಿ ಅಧಿಕಾರದ ಕೇಂದ್ರೀಕರಣ ಮತ್ತು ಹಿತಾಸಕ್ತಿಯ ಸಂಘರ್ಷಗಳನ್ನು ತೊಡೆದುಹಾಕಲಾಗುತ್ತದೆ.

02.ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಣ ಪ್ರಾಧಿಕಾರವು (National Higher Education Regulatory Authority) ವೃತ್ತಿಪರ ಶಿಕ್ಷಣಗಳೂ ಸೇರಿದಂತೆ ಎಲ್ಲಾ ಬಗೆಯ ಉನ್ನತ ಶಿಕ್ಷಣವನ್ನು ನಿಯಂತ್ರಿಸುವ ನಿಯಂತ್ರಕವಾಗಿರುತ್ತದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಎಲ್ಲಾ ಬಗೆಯ ನಿಯಂತ್ರಣ ಸಂಸ್ಥೆಗಳು ವೃತ್ತಿಪರ ಮಾನದಂಡ ನಿಗದಿ ಮಾಡುವ ಸಂಸ್ಥೆಗಳಾಗಿ ಮಾರ್ಪಡುತ್ತವೆ.

03.ಪ್ರಸ್ತುತ ಇರುವ ವಿಶ್ವವಿದ್ಯಾಲಯ ಧನಸಹಾಯ ಆಯೋಗವನ್ನು (University Grants Commission) ಉನ್ನತ ಶಿಕ್ಷಣ ಧನಸಹಾಯ ಸಮಿತಿಯಾಗಿ (Higher Education Grants Council) ಬದಲಾಯಿಸಲಾಗುತ್ತದೆ.

04.ಪದವಿ ವೈಶಿಷ್ಟ್ಯತೆಗಳನ್ನು ವ್ಯಾಖ್ಯಾನಿಸಲು, ಸಾಮಾನ್ಯ ಶಿಕ್ಷಣ ಮಂಡಲಿಯನ್ನು (General Education Council) ಸ್ಥಾಪಿಸಲಾಗುವುದು. ಈ ಮೂಲಕ ರಾಷ್ಟ್ರೀಯ ಉನ್ನತ ಶಿಕ್ಷಣ ಅರ್ಹತಾ ಚೌಕಟ್ಟನ್ನು (National Higher Education Framework) ಅಭಿವೃದ್ಧಿಪಡಿಸಲಾಗುತ್ತದೆ. ಮತ್ತು ಅದರಿಂದ ಉನ್ನತ ಶಿಕ್ಷಣದಲ್ಲಿ ಕಲಿಕೆಯಿಂದಾಗುವ ಫಲಿತಾಂಶಗಳನ್ನು ನಿರೀಕ್ಷಿಸಬಹುದು.

05.ಮೂಲ ನಿಯತಾಂಕಗಳ ಮಾನ್ಯತೆಯು ನಿಯಂತ್ರಣಕ್ಕೆ ಆಧಾರವಾಗುತ್ತದೆ. ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಸಮಿತಿಯು (National Assessment and Accreditation Council) ಮಾನ್ಯತಾ ಸಂಸ್ಥೆಗಳ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತದೆ.

06.ಸಾರ್ವಜನಿಕ ಮತ್ತು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಒಂದು ಸಾಮಾನ್ಯ ನಿಯಂತ್ರಕ ಆಡಳಿತವು ಇರುತ್ತದೆ. ಖಾಸಗಿ ಜನಪರ ಪ್ರಯತ್ನಗಳ ಉಪಕ್ರಮವನ್ನು ಪ್ರೋತ್ಸಾಹಿಸಲಾಗುವುದು.

07.ಉನ್ನತ ಶಿಕ್ಷಣದ ರಾಜ್ಯ ಇಲಾಖೆಗಳು ನೀತಿಯ ಹಂತದಲ್ಲಿ ತೊಡಗಿಸಿಕೊಳ್ಳುತ್ತವೆ; ಉನ್ನತ ಶಿಕ್ಷಣದ ರಾಜ್ಯ ಸಮಿತಿಗಳು ವರಿಷ್ಠರ ಬೆಂಬಲ ಮತ್ತು ಉತ್ತಮ ಅಭ್ಯಾಸ ಹಂಚಿಕೆಗಳ ಸೌಲಭ್ಯವನ್ನು ಒದಗಿಸುತ್ತವೆ.

**19. ಉಚ್ಚ ಶಿಕ್ಷಣದ ಸಂಸ್ಥೆಗಳಿಗಾಗಿ ಪರಿಣಾಮಕಾರಿ ಆಡಳಿತ ಮತ್ತು ನೇತೃತ್ವ**

19.1 ಒಂದು ಪರಿಣಾಮಕಾರಿ ಆಡಳಿತ ವ್ಯವಸ್ಥೆ ಮತ್ತು ನೇತೃತ್ವವು ಉತ್ಕೃಷ್ಟತೆಯನ್ನು–ಸಂಸ್ಕೃತಿಯನ್ನು ಸೃಷ್ಟಿಸುವಲ್ಲಿ ಸಾಮರ್ಥ್ಯವನ್ನು ಒದಗಿಸುತ್ತದೆ. ಪ್ರಾವೀಣ್ಯಪೂರ್ಣ ಸಾಂಸ್ಥಿಕತೆಯನ್ನು ಉತ್ತೇಜಿಸುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಎಲ್ಲ ಉಚ್ಚ ಶಿಕ್ಷಣ ಸಂಸ್ಥೆಗಳು ಖಚಿತಪಡಿಸಬೇಕಾಗಿವೆ.

19.2 ಪ್ರತಿ ಸಂಸ್ಥೆಯು ಒಂದು ಕ್ರಿಯಾಶೀಲ ಕಾರ್ಯತಂತ್ರದ ಯೋಜನೆಯನ್ನು ಅಭಿವೃದ್ಧಿಪಡಿಸಲು ರೂಪಿಸಿರುವ ಉಪಕ್ರಮಗಳು ಹಾಗೂ ಆ ಬಗೆಗಿನ ತನ್ನ ಪ್ರಗತಿಯನ್ನು ತಾನೇ ಮೌಲ್ಯಾಂಕನ ಮಾಡಿಕೊಳ್ಳುತ್ತದೆ. ಅಲ್ಲಿ ರೂಪಿತಗೊಂಡಿರುವ ಗುರಿಗಳನ್ನು ಸಾಧಿಸಲು ಕ್ರಿಯಾಶೀಲವಾಗಿ ಕಾರ್ಯತತ್ಪರವಾಗಬೇಕಾಗಿರುತ್ತದೆ. ಏಕೆಂದರೆ ಈ ಸಂಸ್ಥೆಯೇ ಮುಂದೆ ಸಾರ್ವಜನಿಕ ವಲಯದಿಂದ ನಿಧಿಗಳನ್ನು ಪಡೆಯಲು ಆಧಾರ ಒದಗಿಸುತ್ತದೆ.

## ಈ ಅಧ್ಯಾಯದಲ್ಲಿ ತಿಳಿದುಕೊಂಡ ಮುಖ್ಯ ಅಂಶಗಳು

- ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ದೃಷ್ಟಿಕೋನ ಹಾಗೂ ದೂರದರ್ಶಿತ್ವ
- ಸಮಗ್ರ ಮತ್ತು ಬಹುಶಿಸ್ತೀಯ ಅಧ್ಯಯನಕ್ಕೆ ಪರಿಗಣಿಸಲಾಗುವ ವಿಷಯಗಳು
- ವಿವಿಧ ದೇಶಗಳಲ್ಲಿ ಅಧ್ಯಯನ ಮತ್ತು ಸಂಶೋಧನೆಗಳನ್ನು ನಡೆಸಲು ವಿದ್ಯಾರ್ಥಿಗಳಿಗೆ ಅವಕಾಶ, ಹಣಕಾಸಿನ ಸೌಲಭ್ಯ ಒದಗಿಸಲಾಗುವುದು
- ಶೈಕ್ಷಣಿಕ ಸಂಶೋಧನೆಗಳ ವೇಗವರ್ಧನೆಗೆ ನೂತನ ರಾಷ್ಟ್ರೀಯ ಸಂಶೋಧನಾ ಸಂಸ್ಥೆಯ ಸ್ಥಾಪನೆ

4

# ಭಾಗ–3

# ಕೇಂದ್ರೀಕರಿಸಬೇಕಾದ ಇತರೆ ಪ್ರಮುಖ ವಿಷಯಗಳು

**ಈ ಅಧ್ಯಾಯದಲ್ಲಿ . . . . .**

ವೃತ್ತಿಪರ ಶಿಕ್ಷಣ ಸಂಬಂಧಿತ ಅಂಶಗಳು, ವಯಸ್ಕರ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆಗೆ ಪೂರಕವಾಗಿ ವಯಸ್ಕರ ಸಾಕ್ಷರತೆಯನ್ನು ಸಾಧಿಸುವ ಬಗ್ಗೆ ತಿಳಿಸಲಾಗಿದೆ. ಭಾರತೀಯ ಭಾಷೆಗಳು, ಕಲೆ ಹಾಗೂ ಸಂಸ್ಕೃತಿಗೆ ಉತ್ತೇಜನವನ್ನು ನೀಡುವ ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಇದರೊಂದಿಗೆ ತಂತ್ರಜ್ಞಾನದ ಬಳಕೆ ಮತ್ತು ಸಂಯೋಜನೆಗೆ ಸಂಬಂಧಿಸಿದ ಅಂಶಗಳನ್ನೂ ಪ್ರಸ್ತಾಪಿಸಲಾಗಿದೆ.

## 20 ವೃತ್ತಿಪರ ಶಿಕ್ಷಣ (Professional Education)

20.1 ಈ ನೀತಿಯಲ್ಲಿ ವೃತ್ತಿಪರ ವ್ಯಕ್ತಿಗಳನ್ನು ತರಬೇತಿಗೊಳಿಸುವುದು ಒಂದು ಮುಖ್ಯ ಅಂಶವಾಗಿದೆ ಹಾಗೂ ವೃತ್ತಿಪರ ಶಿಕ್ಷಣವು ಸಾರ್ವಜನಿಕವಾಗಿ ಅತ್ಯಂತ ಪ್ರಮುಖ ವಿಷಯವಾಗಿರುತ್ತದೆ. ಈ ವೃತ್ತಿಪರ ಶಿಕ್ಷಣವನ್ನು ಕೇವಲ ಒಂದು ವೃತ್ತಿಯ ವಿಶೇಷತೆಯನ್ನು ಪರಿಗಣಿಸಿ, ಅನುಷ್ಠಾನಗೊಳಿಸಲಾಗುವುದಿಲ್ಲ.

20.2 ವೃತ್ತಿಪರ ಶಿಕ್ಷಣವು ಒಟ್ಟಾರೆ ಶಿಕ್ಷಣದ ಸಮಗ್ರ ವಿಷಯಗಳಲ್ಲಿ ಅಂತರ್ಗತವಾಗಿರುವ ಒಂದು ವಿಷಯವಾಗಿರುತ್ತದೆ. ಅದಕ್ಕಾಗಿಯೇ ಕೃಷಿ ವಿಶ್ವವಿದ್ಯಾಲಯಗಳು, ಕಾನೂನು ವಿಶ್ವವಿದ್ಯಾಲಯಗಳು, ಆರೋಗ್ಯ–ವಿಜ್ಞಾನ ವಿಶ್ವವಿದ್ಯಾಲಯಗಳು, ತಾಂತ್ರಿಕ ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳು ಬಹುಶಿಸ್ತೀಯ ಶಿಕ್ಷಣವನ್ನುದಗಿಸುವ ಗುರಿಯನ್ನು ರೂಪಿಸಿಕೊಳ್ಳಬೇಕಾಗಿದೆ. ಅದರಲ್ಲೂ 2030ಕ್ಕೆ, ಇಂತಹ ಸಮಗ್ರತೆಯ ವ್ಯವಸ್ಥೆ ಎಲ್ಲಡೆಗೂ ಇರುವಂತೆ ರೂಪಿತಗೊಳ್ಳಬೇಕಾಗಿದೆ.

20.3 ಕೃಷಿ ಶಿಕ್ಷಣವನ್ನು ಅದಕ್ಕೆ ಯುಕ್ತ ಸಂಬಂಧವಾಗಿರುವ ಶಾಸ್ತ್ರಗಳ ಹಿನ್ನಲೆಯಲ್ಲಿ ಪುನರುಜ್ಜೀವನಗೊಳಿಸಲಾಗುತ್ತದೆ. ಇದಕ್ಕಾಗಿ ಕೃಷಿ ತಾಂತ್ರಿಕ ಪಾರ್ಕ್‌ನ್ನು ಸ್ಥಾಪಿಸಲಾಗುವುದು.

1. ವೃತ್ತಿಪರ ಶಿಕ್ಷಣವು ಒಟ್ಟಾರೆ ಉನ್ನತ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಸ್ವತಂತ್ರ ತಾಂತ್ರಿಕ ವಿಶ್ವವಿದ್ಯಾಲಯಗಳು, ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಗಳು, ಕಾನೂನು ಮತ್ತು ಕೃಷಿ ವಿಶ್ವವಿದ್ಯಾಲಯಗಳು ಅಥವಾ ಸಂಸ್ಥೆಗಳನ್ನು ಸ್ವತಂತ್ರವಾಗಿ ಸ್ಥಾಪಿಸುವ ಪ್ರವೃತ್ತಿಯನ್ನು ನಿಲ್ಲಿಸಲಾಗುವುದು. ವೃತ್ತಿಪರ ಅಥವಾ ಸಾಮಾನ್ಯ ಶಿಕ್ಷಣವನ್ನು ನೀಡುವ ಎಲ್ಲಾ ಸಂಸ್ಥೆಗಳು 2030ರ ವೇಳೆಗೆ ಸುವ್ಯವಸ್ಥಿತ ಶಿಕ್ಷಣ ನೀಡುವ ಸಂಸ್ಥೆಗಳಾಗಿ ರೂಪುಗೊಳ್ಳಬೇಕು.
2. ಕೃಷಿ ಶಿಕ್ಷಣವನ್ನು ಸಂಬಂಧಿತ ವಿಷಯದ ವಿಭಾಗಗಳೊಂದಿಗೆ ಪರಿಷ್ಕರಿಸಲಾಗುತ್ತದೆ. ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ಉನ್ನತ ಶಿಕ್ಷಣಕ್ಕೆ ದಾಖಲಾತಿ ಪ್ರಮಾಣ ಶೇಕಡಾ 1 ಕ್ಕಿಂತ ಕಡಿಮೆಯಿದೆ. ಸಾಂಪ್ರದಾಯಿಕ ಜ್ಞಾನ ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಬಳಸುವ ಸಾಮರ್ಥ್ಯವನ್ನು

ಹೊಂದಿರುವ ವೃತ್ತಿಪರರನ್ನು ರೂಪಿಸಲು ಕೃಷಿ ಶಿಕ್ಷಣದ ಸಂಪೂರ್ಣ ವಿನ್ಯಾಸವನ್ನು ಬದಲಾಯಿಸಲಾಗುವುದು. ತಂತ್ರಜ್ಞಾನದ ಅರಿವು ಮತ್ತು ಪ್ರಸರಣವನ್ನು ಉತ್ತೇಜಿಸಲು ಕೃಷಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು.

3. ಕಾನೂನು ಶಿಕ್ಷಣ ಕಾರ್ಯಕ್ರಮಗಳನ್ನು ಪುನರ್ರಚಿಸಲಾಗುವುದು. ಕಾನೂನಿನಲ್ಲಿ ವೃತ್ತಿಪರ ಶಿಕ್ಷಣವು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರಬೇಕು. ನ್ಯಾಯವನ್ನು ಸಮಯೋಚಿತವಾಗಿ ಒದಗಿಸಲು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಕಾನೂನು ಅಧ್ಯಯನಗಳ ಪಠ್ಯಕ್ರಮವು ಸಾಮಾಜಿಕ – ಸಾಂಸ್ಕೃತಿಕ ಸಂದರ್ಭಗಳನ್ನು ಸಾಕ್ಷ್ಯ ಆಧಾರಿತವಾಗಿ ಪ್ರತಿಬಿಂಬಿಸಬೇಕು. ಕಾನೂನು ಚಿಂತನೆಯ ಇತಿಹಾಸ, ನ್ಯಾಯದ ತತ್ವಗಳು, ನ್ಯಾಯಶಾಸ್ತ್ರದ ಅಭ್ಯಾಸ ಮತ್ತು ಇತರೆ ಸಂಬಂಧಿತ ವಿಷಯಗಳು ಸೂಕ್ತವಾಗಿ ಮತ್ತು ಸಮರ್ಪಕವಾಗಿ ಇರಬೇಕು.

   ಕಾನೂನು ಶಿಕ್ಷಣವನ್ನು ನೀಡುವ ರಾಜ್ಯ ಸಂಸ್ಥೆಗಳು ಭವಿಷ್ಯದ ವಕೀಲರಿಗೆ ಮತ್ತು ನ್ಯಾಯಾಧೀಶರಿಗೆ ಕಾನೂನು ವಿಷಯಗಳನ್ನು ಇಂಗ್ಲಿಷ್ ಮತ್ತು ಆಯಾ ರಾಜ್ಯದ ಭಾಷೆಯ ಮೂಲಕ ದ್ವಿ-ಭಾಷೆಯಲ್ಲಿ ನೀಡುವುದನ್ನು ಪರಿಗಣಿಸಬೇಕು. ಇದರಿಂದಾಗಿ ಅನುವಾದದ ಮಾಡುವ ಕಾರಣದಿಂದಾಗಿ ಕಾನೂನು ಫಲಿತಾಂಶಗಳ ವಿಳಂಬವನ್ನು ನಿವಾರಿಸಬಹುದಾಗಿದೆ.

4. ಆರೋಗ್ಯ-ಸುರಕ್ಷಾ ಶಿಕ್ಷಣವನ್ನು ಪುನರ್-ಪರಿಕಲ್ಪನೆಗೊಳಿಸುವುದು ಅತ್ಯಾವಶ್ಯಕವಾಗಿದೆ. ತನ್ಮೂಲಕ ಈ ಶಿಕ್ಷಣದ ಕಾರ್ಯಕ್ರಮಗಳು/ಯೋಜನೆಗಳ ಸಂರಚನೆ ಮತ್ತು ವಿನ್ಯಾಸಗಳನ್ನು ನಿರ್ಧರಿಸಲಾಗುತ್ತದೆ. ಇದರೊಂದಿಗೆ ಕಾಲಾವಧಿಯನ್ನು ನಿಗದಿಗೊಳಿಸಲಾಗುತ್ತದೆ. ಈ ಪದವಿಯನ್ನು ಪಡೆಯುವವರಿಗೆ ಅವರ ಪಾತ್ರದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವಂತೆ ಮಾಡಲಾಗುತ್ತದೆ. ಆಲೋಪತಿ ಮಾದರಿಯ ಶಿಕ್ಷಣದ ವಿದ್ಯಾರ್ಥಿಗಳೂ ಕಡ್ಡಾಯವಾಗಿ ಆಯುರ್ವೇದ, ಯೋಗ, ನಿಸರ್ಗ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿಗಳ ಬಗೆಗೆ ಮೂಲ ತಿಳಿವಳಿಕೆಗಳನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಎಲ್ಲಾ ಆರೋಗ್ಯ ಶಿಕ್ಷಣದಲ್ಲಿ ಅನಾರೋಗ್ಯವನ್ನು ತಡೆಗಟ್ಟುವ ಮತ್ತು ಸಮುದಾಯ ಆರೋಗ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು.

## 21. ವಯಸ್ಕರ ಶಿಕ್ಷಣ ಮತ್ತು ಜೀವನ ಪರ್ಯಂತ ಕಲಿಕೆ

21.1 2030ರ ವೇಳೆಗೆ ಶೇಕಡಾ 100 ರಷ್ಟು ಯುವ ಮತ್ತು ವಯಸ್ಕರ ಸಾಕ್ಷರತೆಯನ್ನು ಸಾಧಿಸುವುದು ಹಾಗೂ ವಯಸ್ಕರ ಶಿಕ್ಷಣ ಹಾಗೂ ಮುಂದುವರಿಕೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಗಮನಾರ್ಹವಾಗಿ ವಿಸ್ತರಿಸುವುದು.

21.2 ಸಾಕ್ಷರತೆ ಅಥವಾ ಮೂಲ ಶಿಕ್ಷಣವು ಆರ್ಥಿಕವಾಗಿ ಮತ್ತು ಜೀವಮಾನದ ಕಲಿಕೆಗೆ ಇರುವ ಅವಕಾಶಗಳಲ್ಲಿ ಜನರು ವೈಯುಕ್ತಿಕವಾಗಿ ಭಾಗವಹಿಸಿ, ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವಕಾಶ ಒದಗಿಸುತ್ತದೆ. ಇದು ಪ್ರತಿ ನಾಗರಿಕನ ಹಕ್ಕಾಗಿದೆ. ಇಷ್ಟಾದರೂ ನಂಬಲು ಸಾಧ್ಯವಿಲ್ಲದಷ್ಟು ಪ್ರಮಾಣದ ನಮ್ಮ ಯುವ ಮತ್ತು ವಯಸ್ಕರು ಸಾಕ್ಷರರಾಗದೇ ಉಳಿದಿದ್ದಾರೆ.

21.3 ಮೂಲಭೂತ ಅಕ್ಷರ ಮತ್ತು ಗಣಿತ ಜ್ಞಾನ, ನಿರ್ಣಾಯಕ ಜೀವನ ಕೌಶಲಗಳು, ಔದ್ಯೋಗಿಕ ಕೌಶಲಗಳು, ಮೂಲ ಶಿಕ್ಷಣ ಮತ್ತು ಮುಂದುವರಿದ ಶಿಕ್ಷಣ – ಈ ಐದು ವಿಶಾಲ ಕ್ಷೇತ್ರಗಳನ್ನು ಒಳಗೊಂಡಂತೆ ವಯಸ್ಕರ ಶಿಕ್ಷಣಕ್ಕಾಗಿ ಒಂದು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ರೂಪಿಸಲಾಗುವುದು. ಮೌಲ್ಯಮಾಪನ ಹಾಗೂ ಪ್ರಮಾಣೀಕೃತ ಮಾನದಂಡಗಳೊಂದಿಗೆ ಪಠ್ಯಪುಸ್ತಕ ಮತ್ತು ಕಲಿಕಾ ಸಾಮಗ್ರಿಗಳನ್ನು ಈ ಚೌಕಟ್ಟಿಗೆ ಹೊಂದಿಸಲಾಗುತ್ತದೆ.

21.4 ವಯಸ್ಕರ ಶಿಕ್ಷಣ ಕೇಂದ್ರದ ವ್ಯವಸ್ಥಾಪಕರು ಮತ್ತು ಬೋಧಕರಿಗೆ ಒಂದು ಕೇಡರ್ ನೀಡಲಾಗುತ್ತದೆ.

ಹಾಗೆಯೇ ರಾಷ್ಟ್ರೀಯ ವಯಸ್ಕರ ಶಿಕ್ಷಣ ಬೋಧಕರ ಕಾರ್ಯಕ್ರಮದ (ನ್ಯಾಶನಲ್ ಅಡಲ್ಟ್ ಎಜುಕೇಶನ್ ಟ್ಯೂಟರಸ್ ಪ್ರೊಗ್ರಾಂ) ಮೂಲಕ ರಚಿಸಲಾದ ಬೋಧಕರ ದೊಡ್ಡ ತಂಡವು ವಯಸ್ಕರ ಶಿಕ್ಷಣವನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುತ್ತದೆ.

21.5 ಅಸ್ತಿತ್ವದಲ್ಲಿರುವ ವಿಧಾನಗಳು ಮತ್ತು ಕಾರ್ಯಕ್ರಮಗಳು ಭಾಗವಹಿಸುವವರನ್ನು ಗುರುತಿಸಿ, ನಿಯಂತ್ರಣಕ್ಕೆ ತರುವುದಲ್ಲದೆ, ಸಮುದಾಯದಲ್ಲಿನ ಸ್ವಯಂಸೇವಕರನ್ನು ಪ್ರೋತ್ಸಾಹಿಸುತ್ತವೆ. ಸಮುದಾಯದ ಪ್ರತಿ ಸಾಕ್ಷರ ಸದಸ್ಯನೂ ಕನಿಷ್ಠ ಒಬ್ಬ ವ್ಯಕ್ತಿಗಾದರೂ ಓದು-ಬರೆಹ ಕಲಿಸುವುದು ಇವುಗಳ ಒಂದು ಪ್ರಮುಖ ತಂತ್ರವಾಗಿದೆ. ಇವುಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುವುದು. ಜೊತೆಗೆ ಇಲ್ಲಿ ಮಹಿಳೆಯರ ಸಾಕ್ಷರತೆಗೆ ವಿಶೇಷ ಒತ್ತು ನೀಡಲಾಗುವುದು.

## 22. ಭಾರತೀಯ ಭಾಷೆಗಳು, ಕಲೆ ಹಾಗೂ ಸಂಸ್ಕೃತಿಗೆ ಉತ್ತೇಜನ

22.1 ಎಲ್ಲಾ ಭಾರತೀಯ ಭಾಷೆಗಳನ್ನು ಸಂರಕ್ಷಿಸಿ, ಅವುಗಳ ಬೆಳವಣಿಗೆ ಮತ್ತು ಜೀವಂತಿಕೆಯನ್ನು ಕಾಪಾಡುವುದನ್ನು ಈ

ನೀತಿಯು ಖಾತರಿಪಡಿಸುತ್ತಿದೆ. ಇದು ಭಾರತದ ಅಸ್ಮಿತೆಗೆ ಮತ್ತು ಆರ್ಥಿಕ ವ್ಯವಸ್ಥೆಗೆ ಮುಖ್ಯವಾಗಿರುತ್ತದೆ. ಭಾರತೀಯ ಸಾಂಸ್ಕೃತಿಕ ಸಂಪತ್ತನ್ನು ಸಂರಕ್ಷಿಸುವುದರ ಜೊತೆಜೊತೆಗೆ ಔನ್ನತ್ಯಕ್ಕೇರಿಸುವುದೂ ಇದರಲ್ಲಿ ಸೇರಿರುವುದರಿಂದ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.




ಪ್ರತಿ ಪ್ರದೇಶದ ಸಂಸ್ಕೃತಿ ಮತ್ತು ಸಂಪ್ರದಾಯಗಳ ಸೇರ್ಪಡೆ ಮತ್ತು ಸಂರಕ್ಷಣೆಗಾಗಿ, ಬುಡಕಟ್ಟು ಭಾಷೆಗಳೂ ಸೇರಿದಂತೆ ಎಲ್ಲಾ ಭಾರತೀಯ ಭಾಷೆಗಳಿಗೆ ಸೂಕ್ತವಾದ ಗೌರವವನ್ನು ನೀಡಲಾಗುತ್ತದೆ. ಶಾಲೆಗಳಲ್ಲಿ ಕಲಿಯುವ ಎಲ್ಲ ವಿದ್ಯಾರ್ಥಿಗಳಿಗೆ ಇವುಗಳ ಬಗ್ಗೆ ನೈಜವಾದ ತಿಳಿವಳಿಕೆಯನ್ನು ಮೂಡಿಸಲಾಗುತ್ತದೆ.

22.2 ಭಾರತೀಯ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅತ್ಯುತ್ತಮವಾದ ಕಾರ್ಯಕ್ರಮಗಳನ್ನು ದೇಶಾದ್ಯಂತ ಹಮ್ಮಿಕೊಳ್ಳಲಾಗುತ್ತದೆ. ಶಿಕ್ಷಕ ಮತ್ತು ಅಧ್ಯಾಪಕರ ನೇಮಕಾತಿ, ಕೇಂದ್ರೀಕೃತ ಸಂಶೋಧನೆ ಹಾಗೂ ಶಾಸ್ತ್ರೀಯ ಭಾಷೆಗಳನ್ನು ಅಭಿವೃದ್ಧಿಪಡಿಸುವುದರ ಮೂಲಕ ಭಾಷೆ, ಸಾಹಿತ್ಯ, ಭಾರತೀಯ ಭಾಷೆಗಳಲ್ಲಿ ವೈಜ್ಞಾನಿಕ ಶಬ್ದಕೋಶವನ್ನು ಸಕ್ರಿಯಗೊಳಿಸಲಾಗುತ್ತದೆ.

22.3 ಶಾಸ್ತ್ರೀಯ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಸಂಸ್ಥೆಗಳನ್ನು ಬಲಗೊಳಿಸಲಾಗುವುದು. ಪಾಲಿ, ಪರ್ಷಿಯನ್ ಮತ್ತು ಪ್ರಾಕೃತ ಭಾಷೆಗಳಿಗಾಗಿ ರಾಷ್ಟ್ರೀಯ ಸಂಸ್ಥೆಗಳನ್ನೂ ಸ್ಥಾಪಿಸಲಾಗುವುದು.

22.4 ವೈಜ್ಞಾನಿಕ ಮತ್ತು ತಾಂತ್ರಿಕ ಪರಿಭಾಷಾ ಆಯೋಗದ (ಕಮೀಷನ್ ಫಾರ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಟರ್ಮಿನಾಲಜಿ) ಕೆಲಸವು ಮುಖ್ಯವಾಗಿ ದೇಶಾದ್ಯಂತ ಬಳಕೆಗಾಗಿ ಏಕರೂಪದ ಶಬ್ದಕೋಶವನ್ನು ಅಭಿವೃದ್ಧಿಪಡಿಸುವುದು. ಇದುಭೌತ ವಿಜ್ಞಾನಗಳು ಮಾತ್ರವಲ್ಲದೆ ಎಲ್ಲಾ ವಿಭಾಗಗಳು ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರತಿ ವಿಷಯವನ್ನು ನವೀಕರಿಸಿ ವಿಸ್ತರಿಸುತ್ತದೆ.

22.5 ಭಾರತ ದೇಶವು ಕಳೆದ 50 ವರ್ಷಗಳ ಅವಧಿಯಲ್ಲಿ 220 ಕ್ಕೂ ಹೆಚ್ಚಿನ ಭಾಷೆಗಳನ್ನು ಕಳೆದುಕೊಂಡಿದೆ. ಯುನೆಸ್ಕೋ ಘೋಷಿಸಿರುವಂತೆ ಭಾರತದ 197 ಭಾಷೆಗಳು ಅಪಾಯದ ಅಂಚಿನಲ್ಲಿವೆ. ಇಂತಹ ಭಾಷೆಗಳ ಅಭಿವೃದ್ಧಿಗೆ ಸೂಕ್ತ ಸಂಯೋಜಿತ ಕಾರ್ಯಕ್ರಮಗಳನ್ನು ರೂಪಿಸಲಾಗುವುದು

## 23. ತಂತ್ರಜ್ಞಾನದ ಬಳಕೆ ಮತ್ತು ಸಂಯೋಜನೆ

23.1 ಮಾಹಿತಿ ಮತ್ತು ಸಂವಹನ ತಂತ್ರಾಜ್ಞಾನ ಹಾಗೂ ಬಾಹ್ಯಾಕಾಶದಂತಹ ತೀವ್ರ ಪೈಪೋಟಿಯ ಕ್ಷೇತ್ರಗಳಲ್ಲಿ ಭಾರತವು ಜಾಗತಿಕವಾಗಿ ಮುಂಚೂಣಿಯಲ್ಲಿದೆ. ಡಿಜಿಟಲ್ ಭಾರತ ಆಂದೋಲನವು ದೇಶವನ್ನು ತಂತ್ರಜ್ಞಾನ ಕ್ಷೇತ್ರದಲ್ಲಿ ಸಶಕ್ತ ಸಮಾಜ ಹಾಗೂ ಜ್ಞಾನಾಧಾರಿತ ಆರ್ಥಿಕತೆಯ ಶಕ್ತಿಯಾಗಿ ಪರಿವರ್ತಿಸಲು ನೆರವಾಗುತ್ತದೆ. ಈ ಪರಿವರ್ತನೆಯಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸಲಿದೆ. ಶೈಕ್ಷಣಿಕ ಪ್ರಕ್ರಿಯೆಗಳು ಮತ್ತು ಫಲಶೃತಿಗಳ ಸುಧಾರಣೆಯಲ್ಲಿ ತಾಂತ್ರಿಕತೆಯು ಪ್ರಮುಖವಾಗಲಿದೆ. ಹೀಗೆ ಎಲ್ಲಾ ಹಂತಗಳಲ್ಲಿ ತಂತ್ರಜ್ಞಾನ ಮತ್ತು ಶಿಕ್ಷಣದ ಸಂಬಂಧವು ದ್ವಿಮುಖ ಆಗಿರುತ್ತದೆ.

23.2 ತಾಂತ್ರಿಕತೆಯು ಶಿಕ್ಷಣವನ್ನು ಬಹುವಿಧದಲ್ಲಿ ಪ್ರಭಾವಿಸಲಿದೆ. ಕೃತಕ ಬುದ್ಧಿಮತ್ತೆ, ಯಂತ್ರಗಳ ಮೂಲಕ ಕಲಿಕೆ, ಬ್ಲಾಕ್ ಚೈನ್ ತಂತ್ರಜ್ಞಾನ, ಸ್ಮಾರ್ಟ ಬೋರ್ಡ್ ಇತ್ಯಾದಿ ಕ್ಷೇತ್ರಗಳಲ್ಲಿ ವಿಸ್ತೃತ ಸಂಶೋಧನೆಗಳನ್ನು ಕೈಗೊಳ್ಳುವ ಅಗತ್ಯತೆಯಿದೆ.

23.3 ಶೈಕ್ಷಣಿಕ ತಂತ್ರಜ್ಞಾನದಲ್ಲಿ ಬೌದ್ಧಿಕ ಹಾಗೂ ಸಾಂಸ್ಥಿಕ ಸಾಮರ್ಥ್ಯಗಳನ್ನು ವೃದ್ಧಿಸಲಾಗುತ್ತದೆ.

24. ಆನ್ ಲೈನ್ ಮತ್ತು ಡಿಜಿಟಲ್ ಶಿಕ್ಷಣ: ತಂತ್ರಜ್ಞಾನದ ಸಮರ್ಪಕ ಬಳಕೆಯ ಖಾತ್ರಿಗೊಳಿಸುವಿಕೆ

24.1 ಹೊಸ ಸನ್ನಿವೇಶಗಳಿಗೆ ಮತ್ತು ವಾಸ್ತವಗಳಿಗೆ ಹೊಸ ಉಪಕ್ರಮಗಳ ಅಗತ್ಯವಿರುತ್ತದೆ. ಇತ್ತೀಚಿಗೆ ಹೆಚ್ಚುತ್ತಿರುವ ಸೋಂಕು ಸಾಂಪ್ರದಾಯಿಕ ಹಾಗೂ ಖುದ್ದು ಹಾಜರಾತಿ ಶಿಕ್ಷಣ ಎಲ್ಲೆಲ್ಲಿ ಸಾಧ್ಯವಿಲ್ಲವೋ ಅಂತಹ ಸಂದರ್ಭದಲ್ಲಿ ಗುಣಮಟ್ಟದ ಶಿಕ್ಷಣದ ಪರ್ಯಾಯ ಮಾದರಿಗಳೊಂದಿಗೆ ನಾವು ಸಿದ್ಧವಿರಬೇಕು ಎಂಬುದನ್ನು ತಿಳಿಸಿದೆ. ಇದಕ್ಕೆ ಸಂಬಂಧಿಸಿದಂತೆ ರಾ.ಶಿ.ನೀ

ತಾಂತ್ರಿಕತೆಯನ್ನು ಬಳಸಿಕೊಳ್ಳುವ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ.

24.2 ಸಂಘಟಿತ ಪ್ರಯತ್ನಗಳ ಮೂಲಕ ಡಿಜಿಟಲ್ ಕಂದಕವನ್ನು ನಿವಾರಿಸಬೇಕಾಗಿದೆ. ಸಮಾನ ಅವಕಾಶಗಳ ಸಮಸ್ಯೆಗಳನ್ನು ಸಮರ್ಥವಾಗಿ ಪರಿಹರಿಸಬೇಕಾಗುತ್ತದೆ.

24.3 ಆನ್ಲೈನ್ ಶಿಕ್ಷಣಕ್ಕೆ ಪ್ರಾಯೋಗಿಕ ಅಧ್ಯಯನ, ಡಿಜಿಟಲ್ ಮೂಲ ಸೌಕರ್ಯ, ಆನ್ ಲೈನ್ ಬೋಧನಾ ವೇದಿಕೆ ಮತ್ತು ಸಾಧನಗಳು, ಡಿಜಿಟಲ್ ಭಂಡಾರ ಮತ್ತು ಪ್ರಸರಣ, ಡಿಜಿಟಲ್ ಅಂತರಕ್ಕೆ ಪರಿಹಾರ, ವರ್ಚ್ಯುಯಲ್ ಲ್ಯಾಬ್‌ಗಳು, ಆನ್ ಲೈನ್ ಮಾಪನ ಮತ್ತು ಪರೀಕ್ಷೆಗಳು, ಕಲಿಕೆಯ ಸಮ್ಮಿಶ್ರ ಮಾದರಿಗಳು – ಇವುಗಳ ಬಗ್ಗೆ ಸಂಶೋಧನೆಗಳನ್ನು ಕೈಗೊಳ್ಳುವ ಮತ್ತು ಸಾಮರ್ಥ್ಯವನ್ನು ವೃದ್ಧಿಗೊಳಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತೆ.

24.4 ಜಾಗತಿಕ ಗುಣಮಟ್ಟದ ಡಿಜಿಟಲ್ ಮೂಲಸೌಕರ್ಯ, ಪಠ್ಯ ಮತ್ತು ಸಾಮರ್ಥ್ಯ ನಿರ್ಮಾಣಕ್ಕೆ ನಿಯೋಜಿತ ಘಟಕ ಸ್ಥಾಪನೆ. ಶಿಕ್ಷಣವು ಪ್ರಯಾಣವೇ ಹೊರತು ಅದೇ ತಲುಪಬೇಕಾದ ಗುರಿಯಲ್ಲ. ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಇವರೆಡರ, ಇ– ಶಿಕ್ಷಣದ ಅಗತ್ಯಗಳ ಬಗ್ಗೆ ನಿಗಾ ವಹಿಸುವ ಸಲುವಾಗಿ ಡಿಜಿಟಲ್ ಮೂಲಸೌಕರ್ಯ, ಡಿಜಿಟಲ್ ಪಠ್ಯ ಮತ್ತು ಸಾಮರ್ಥ್ಯ ವೃದ್ಧಿಯನ್ನು ವ್ಯವಸ್ಥೆಗೊಳಿಸಲು ಸಚಿವಾಲಯದಲ್ಲಿ ನಿಯೋಜಿತ ಘಟಕವನ್ನು ಸ್ಥಾಪಿಸಲಾಗುವುದು.

## ಈ ಅಧ್ಯಾಯದಲ್ಲಿ ತಿಳಿದುಕೊಂಡ ಪ್ರಮುಖ ಅಂಶಗಳು

- ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳನ್ನು 2030ರ ವೇಳೆಗೆ ಸುವ್ಯವಸ್ಥಿತ ಶಿಕ್ಷಣ ನೀಡುವ ಸಂಸ್ಥೆಗಳಾಗಿ ರೂಪಿಸಲಾಗುವುದು.
- ಕಾನೂನು ಶಿಕ್ಷಣ ಕಾರ್ಯಕ್ರಮಗಳನ್ನು ಪುನರ್ರಚಿಸಲಾಗುವುದು
- 2030ರ ವೇಳೆಗೆ 100% ರಷ್ಟು ಯುವ ಮತ್ತು ವಯಸ್ಕರ ಸಾಕ್ಷರತೆಯನ್ನು ಸಾಧಿಸುವುದು ಹಾಗೂ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ವಿಸ್ತರಿಸುವುದು.
- ಭಾರತೀಯ ಭಾಷೆಗಳು, ಕಲೆ ಹಾಗೂ ಸಂಸ್ಕೃತಿಗೆ ಉತ್ತೇಜನವನ್ನು ನೀಡಲಾಗುವುದು.
- ಕೃತಕ ಬುದ್ಧಿಮತ್ತೆ, ಯಂತ್ರಗಳ ಮೂಲಕ ಕಲಿಕೆ, ಬ್ಲಾಕ್ ಚೈನ್ ತಂತ್ರಜ್ಞಾನ ಇತ್ಯಾದಿಗಳಲ್ಲಿ ವಿಸ್ತೃತ ಸಂಶೋಧನೆಗಳನ್ನು ಕೈಗೊಳ್ಳಲು ಅವಕಾಶ ನೀಡಲಾಗುವುದು.

5

# ಭಾಗ - 4
# ಕಾರ್ಯಗತಗೊಳಿಸುವುದು

**ಈ ಅಧ್ಯಾಯದಲ್ಲಿ . . . . .**

ಶಿಕ್ಷಣ ಕೇಂದ್ರೀಯ ಸಲಹಾ ಮಂಡಲಿಯನ್ನು ಸಶಕ್ತಗೊಳಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕ್ರಮಗಳನ್ನು ಹಾಗೂ ಅನುಷ್ಠಾನ ಪ್ರಕ್ರಿಯೆಯ ತತ್ವಗಳನ್ನು ವಿವರಿಸಲಾಗಿದೆ.

## 25. ಶಿಕ್ಷಣ ಕೇಂದ್ರೀಯ-ಸಲಹಾ ಮಂಡಳಿಯನ್ನು ಸಶಕ್ತಗೊಳಿಸುವುದು

25.1 ಈ ನೀತಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ದೀರ್ಘಕಾಲದ ದೃಷ್ಟಿಕೋನ, ಪರಿಣಿತರ ಲಭ್ಯತೆ ಇವುಗಳೊಂದಿಗೆ ರಾಷ್ಟ್ರೀಯ, ರಾಜ್ಯದ, ಸಾಂಸ್ಥಿಕ ಮತ್ತು ವೈಯಕ್ತಿಕ ಹಂತದವರೆಗೆ ಸಂಯೋಜಿತ ಪ್ರಯತ್ನಗಳ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ "ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ [CABE]" ಯನ್ನು ಸದೃಢಗೊಳಿಸುವ ಮತ್ತು ಸಶಕ್ತಗೊಳಿಸುವ ಸಲುವಾಗಿ ಕೆಲವು ಶಿಫಾರಸ್ಸುಗಳನ್ನು ರೂಪಿಸಲಾಗುತ್ತಿದೆ. ಈ ಮಂಡಳಿಯು ಹೆಚ್ಚಿನ ಅಧಿಕಾರವನ್ನು ಹೊಂದಿರುತ್ತದೆ. ಇದು ಕೇವಲ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಗತಿಗಾಗಿ ವಿಸ್ತೃತವಾದ ಸಮಾಲೋಚನೆಯನ್ನು ಒದಗಿಸುವ ಮತ್ತು ಪರೀಕ್ಷಾ ಸಂಬಂಧಿತ ವಿಷಯಗಳ ಬಗೆಗೆ ಮಾತ್ರವೇ ಇರುವ ವೇದಿಕೆಯಾಗಿರುವುದಿಲ್ಲ. ಹೀಗೆ ಪುನರ್ ವಿನ್ಯಾಸಗೊಳಿಸಿ, ಪುನರುಜ್ಜೀವನಗೊಳಿಸಿ ನವೀನತೆಯಿಂದ ರೂಪಿಸಲಾಗುವ "ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ(CABE)" ಗೆ ಶಿಕ್ಷಣದ ಪ್ರಗತಿಗೆ, ಸೃಷ್ಟಿ-ನಿರೂಪಣೆಗಳಿಗೆ, ಪರಿಷ್ಕರಣೆಗಳಿಗೆ ಹೊಸ ದೃಷ್ಟಿಕೋನವನ್ನು ಒದಗಿಸುವ ಜವಾಬ್ದಾರಿ ಇರುತ್ತದೆ. ಇದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD) ಮತ್ತು ಸಂಬಂಧಿತ ಶಿಕ್ಷಣ ಸಂಸ್ಥೆಗಳೊಂದಿಗೆ ಸಹಯೋಗವನ್ನು ಹೊಂದಿರುತ್ತದೆ. ತನ್ನ ಗುರಿಯನ್ನು ಸಾಧಿಸಲು ಸಾಂಸ್ಥಿಕ ರೂಪು-ರೇಷೆಗಳನ್ನು ರೂಪಿಸುವ ಮತ್ತು ನಿರಂತರವಾಗಿ ಪರಿಶೀಲಿಸುವ ಕೆಲಸವನ್ನು ಮಾಡುತ್ತದೆ.

25.2 ಶಿಕ್ಷಣ ಮತ್ತು ಕಲಿಕೆಯಲ್ಲಿ ಗಮನವನ್ನು ಕೇಂದ್ರೀಕರಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಶಿಕ್ಷಣ ಸಚಿವಾಲಯ [MoE] ಎಂಬ ಹೆಸರಿನೊಂದಿಗೆ ಪುನರ್ ವಿನ್ಯಾಸಗೊಳಿಸುವುದು.

26. ಹಣಕಾಸು – ಲಭ್ಯತೆ ಮತ್ತು ಎಲ್ಲರಿಗೂ ಗುಣಮಟ್ಟದ ಶಿಕ್ಷಣ

ಈ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸುವುದಕ್ಕೆ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಏಕೆಂದರೆ ಪ್ರಸ್ತುತ ಯುವ ಸಮುದಾಯದ ಭವಿಷ್ಯಕ್ಕೆ ಶ್ರೇಷ್ಠ ಮತ್ತು ಗುಣಾತ್ಮಕ ಶಿಕ್ಷಣವನ್ನು ಒದಗಿಸಲು ಯಾವ ಹೂಡಿಕೆಗಳೂ ಇರುವುದಿಲ್ಲ. ದುರ್ದೈವವಶಾತ್, ಭಾರತದಲ್ಲಿ ಶಿಕ್ಷಣಕ್ಕಾಗಿರುವ ಸಾರ್ವಜನಿಕ ವೆಚ್ಚವು, ಘೋಷಿಸಲಾಗಿರುವ ಒಟ್ಟು ದೇಶೀಯ ಉತ್ಪನ್ನದ 6% ರ ಸಮೀಪದಲ್ಲಿಯೂ ಇಲ್ಲ. ಇದನ್ನು 1968ರ ನೀತಿಯಲ್ಲಿಯೇ ಘೋಷಿಸಲಾಗಿತ್ತು. ಅದನ್ನೇ ಪುನಃ 1986 ರಲ್ಲಿ ಪುನರುಚ್ಚರಿಸಲಾಗಿತ್ತು. ಮತ್ತೊಮ್ಮೆ 1992ರ ಪುನರ್-ಪರಿಶೀಲನೆಯಲ್ಲಿ ಮತ್ತೂ ಅದನ್ನೇ

ಸ್ಪಷ್ಟೀಕರಿಸಲಾಗಿತ್ತು. ಪ್ರಸ್ತುತ ಅವಧಿಯಲ್ಲಿ (ಕೇಂದ್ರದ ಹಾಗೂ ರಾಜ್ಯದ) ಶೈಕ್ಷಣಿಕ ವೆಚ್ಚವು ಸರಿಸುಮಾರು ಒಟ್ಟು ದೇಶೀಯ ಉತ್ಪನ್ನದ 4.43% ಇದೆ. (2017–18ರ ಅಂದಾಜಿಸಲಾಗಿರುವ ವೆಚ್ಚ) ಮತ್ತು ಒಟ್ಟು ಸರ್ಕಾರಿ ಖರ್ಚಿನಲ್ಲಿ ಶೇಕಡಾ 10 ರಷ್ಟು ಮಾತ್ರ ಶಿಕ್ಷಣಕ್ಕೆ ವೆಚ್ಚ ಮಾಡಲಾಗಿದೆ. (ಆರ್ಥಿಕ ಸಮೀಕ್ಷೆ 2017–18). ಬಹುತೇಕ ಅಭಿವೃದ್ಧಿ ಹೊಂದಿದ ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದೆ.

26.2 ದೇಶದ ಆರ್ಥಿಕ ಪ್ರಗತಿ ಹಾಗೂ ಇತರ ಆಯಾಮಗಳಿಗೆ ಉಪಯುಕ್ತವಾಗುವಂತೆ ಉತ್ಕೃಷ್ಟ ಶಿಕ್ಷಣವನ್ನು ಸಾಧಿಸುವ ಗುರಿಯನ್ನು ಸಾಧಿಸುವುದು ಅತಿ ಅವಶ್ಯ. ಇದಕ್ಕಾಗಿ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಒಟ್ಟು ಆದಾಯದ ಶೇಕಡಾ 6 ರಷ್ಟನ್ನು ಶಿಕ್ಷಣದ ವಿಭಾಗಕ್ಕೆ ಮೀಸಲಾಗಿರಿಸುವುದನ್ನು ಆದಷ್ಟು ಬೇಗ ಖಚಿತಪಡಿಸಬೇಕಾಗಿದೆ. ಭಾರತದ ಭವಿಷ್ಯದ ಆರ್ಥಿಕ ವ್ಯವಸ್ಥೆ, ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ ಮತ್ತು ತಂತ್ರಜನ್ಯ ವಿಷಯಗಳ ಅಭಿವೃದ್ಧಿ ಮತ್ತು ಪ್ರಗತಿಗೆ ಒಂದು ಉಚ್ಚ–ಗುಣಾತ್ಮಕ ಮತ್ತು ನ್ಯಾಯಸಮ್ಮತ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಅತ್ಯಂತ ನಿರ್ಣಾಯಕವಾಗಿದೆ.

26.3 ವಿಶೇಷವಾಗಿ ಶಿಕ್ಷಣ ರಂಗದ ಹಲವು ಅಂಶಗಳಿಗೆ ಮತ್ತು ಘಟಕಗಳಿಗೆ ಧನಸಹಾಯವನ್ನು ಒದಗಿಸಲಾಗುವುದು. ಎಲ್ಲರಿಗೂ ಶಿಕ್ಷಣವು ಮುಕ್ತವಾಗಿ ಲಭ್ಯವಾಗುವುದನ್ನು ಖಚಿತಪಡಿಸುವ, ಕಲಿಕಾ ಸಾಮಗ್ರಿಗಳ ಪೂರೈಕೆ, ಪೌಷ್ಠಿಕಾಂಶಗಳ ಪೂರೈಕೆ, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಉತ್ತಮ ಯೋಗ–ಕ್ಷೇಮ, ಸ್ವಾಸ್ಥ್ಯ ಇತ್ಯಾದಿ ಉಪಕ್ರಮಗಳಿಗೂ ಧನಸಹಾಯವನ್ನು ಒದಗಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಮತ್ತು ಸಿಬ್ಬಂದಿ, ಶಿಕ್ಷಕರ ಪ್ರಗತಿ ಹಾಗೂ ಆರ್ಥಿಕವಾಗಿ–ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಮತ್ತು ಕಡೆಗಣಿಸಲ್ಪಟ್ಟವರಿಗೂ ನ್ಯಾಯಸಮ್ಮತ ಹಾಗೂ ಶ್ರೇಷ್ಠ–ಗುಣಮಟ್ಟದ ಶಿಕ್ಷಣವು ದೊರೆಯುವಂತೆ ಮಾಡುವ ಎಲ್ಲಾ ಉಪಕ್ರಮಗಳಿಗೂ ಧನಸಹಾಯವನ್ನು ಒದಗಿಸಲಾಗುವುದು.

26.4 ಹೀಗೆ ಆರಂಭಿಕವಾಗಿ ಏಕಕಾಲಕ್ಕೆ ಮಾಡಲ್ಪಡುವ ವೆಚ್ಚಗಳ ಹೊಡಿಕೆಗಳೊಂದಿಗೆ ಅದರಲ್ಲೂ ಪ್ರಮುಖವಾಗಿ ಮೂಲಭೂತ ಸೌಲಭ್ಯ ಹಾಗೂ ಸಂಪನ್ಮೂಲಗಳಿಗೆ, ಒಂದು ಶೈಕ್ಷಣಿಕ ಸಂಸ್ಕೃತಿಯನ್ನು ರೂಪಿಸಲು ದೀರ್ಘಕಾಲದವರೆಗೆ ಹಣಕಾಸಿನ ಅಗತ್ಯತೆಯಿರುವ ಕೆಲವು ಪ್ರಮುಖ ಅಂಶಗಳನ್ನು ಮುಂದಿನಂತೆ ಗುರ್ತಿಸಲಾಗಿದೆ:

1. ಉತ್ತಮ ಗುಣಮಟ್ಟದ ಪೂರ್ವ ಬಾಲ್ಯಾವಸ್ಥೆಯ ಪೋಷಣೆ ಮತ್ತು ಶಿಕ್ಷಣದ ಸಾರ್ವತ್ರಿಕ ಲಭ್ಯತೆ.
2. ಬುನಾದಿ ಅಕ್ಷರ ಜ್ಞಾನ ಮತ್ತು ಗಣಿತ ಕೌಶಲಗಳನ್ನು ಸಾಧಿಸುವುದು.
3. ಸೂಕ್ತ ಮತ್ತು ಸಮರ್ಪಕ ಸಾಧನ–ಸಂಪನ್ಮೂಲಗಳನ್ನು ಹೊಂದಿರುವ ಶಾಲಾ–ಸಂಕೀರ್ಣಗಳನ್ನು, ಸಮುಚ್ಚಯಗಳನ್ನು ಸೃಷ್ಟಿಸುವುದು.
4. ಆಹಾರ ಮತ್ತು ಪೌಷ್ಠಿಕಾಂಶಗಳನ್ನು ಒದಗಿಸುವುದು (ಉಪಾಹಾರ ಮತ್ತು ಮಧ್ಯಾಹ್ನದ ಊಟ).
5. ಶಿಕ್ಷಕ–ತರಬೇತಿ ಮತ್ತು ಶಿಕ್ಷಕರಲ್ಲಿ ನಿರಂತರ ವೃತ್ತಿಪರ ಪ್ರಗತಿಯನ್ನು ಸಾಧಿಸಲು ಹೂಡಿಕೆ.
6. ಪುನರುಜ್ಜೀವನದ ಮೂಲಕ ಮಹಾವಿದ್ಯಾಲಯಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಉತ್ಕೃಷ್ಟತೆಯ ಸಾಧನೆ.
7. ಸಂಶೋಧನೆಗಳನ್ನು ಉತ್ತೇಜಿಸುವುದು.
8. ತಂತ್ರಜ್ಞಾನದ ವಿಪುಲ ಬಳಕೆ ಮತ್ತು ಆನ್‌ಲೈನ್ ಶಿಕ್ಷಣ.

26.5 ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅತ್ಯಂತ ಕಡಿಮೆ ಪ್ರಮಾಣದ ಧನಸಹಾಯ ಒದಗಿಸುತ್ತಿದ್ದುದ್ದಷ್ಟೇ ಅಲ್ಲದೇ ಅದನ್ನೂ ಸೂಕ್ತ ಸಮಯದಲ್ಲಿ ಜಿಲ್ಲೆಯ/ಸಂಸ್ಥೆಯ ಹಂತದಲ್ಲಿ ವಿನಿಯೋಗಿಸಿರುವುದಿಲ್ಲ. ಗುರಿಗಳನ್ನು ಸಾಧಿಸಲು ಇದು ಅಡೆತಡೆಗಳನ್ನು ಉಂಟುಮಾಡಿದೆ. ಹೀಗಾಗಿ, ಲಭ್ಯವಾಗುವ ಅವಕಾಶಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಹಾಗೂ ಕ್ಷಮತೆಯನ್ನು ಹೆಚ್ಚಿಸಲು ಆದ್ಯತೆ ನೀಡಲಾಗುವುದು. ಹಣಕಾಸಿನ ಆಡಳಿತ ಹಾಗೂ ನಿರ್ವಹಣೆಯು ಸರಳವಾಗಿ ಹಾಗೂ ನಿಗದಿತ ಸಮಯಕ್ಕೆ ಧನ ಸಹಾಯವು ನಿರಂತರವಾಗಿ ದೊರೆಯುವುದರ ಜೊತೆಗೆ ಪ್ರಾಮಾಣಿಕವಾಗಿರುವಂತೆ ಸೂಕ್ತ ನೀತಿಗಳನ್ನು ರೂಪಿಸಲಾಗುವುದು. ಅದಕ್ಕಾಗಿ ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ, 'ಸಾಮಾನ್ಯ ಹಣಕಾಸಿನ ನಿಯಮ' (GFR), ಸಾರ್ವಜನಿಕ ಹಣಕಾಸು ನಿರ್ವಹಣಾ ನೀತಿ (PFMS) ಉಪಬಂಧಗಳ ಮೂಲಕ ಸರಿಯಾದ ಸಮಯಕ್ಕೆ ಹಣಕಾಸಿನ ಸಹಾಯವನ್ನು ಬಿಡುಗಡೆ ಮಾಡುವ ವ್ಯವಸ್ಥೆಯನ್ನು ರೂಪಿಸಲಾಗುವುದು. ಸರಕಾರದಿಂದ ಲಭ್ಯವಾಗುವ ಸಂಪನ್ಮೂಲಗಳನ್ನು ದಕ್ಷತೆಯಿಂದ ಬಳಸಿಕೊಳ್ಳಲು ಹಾಗೂ ಧನ ಸಹಾಯವು ಸ್ಥಗಿತಗೊಳ್ಳುವುದನ್ನು ಇವು ತಡೆಯುತ್ತವೆ. ರಾಜ್ಯಗಳು ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯಕ್ಷಮತೆಯನ್ನು ಆಧರಿಸಿ ಧನ–ಸಹಾಯವನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

ಅದೇ ರೀತಿ, ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (SEDG) ಸೂಕ್ತ ಹಂಚಿಕೆ ಹಾಗೂ ಹಣಕಾಸು ವಿನಿಯೋಗವನ್ನು ಖಚಿತಪಡಿಸಿಕೊಳ್ಳಲು ಒಂದು ಸಮರ್ಥ ಕಾರ್ಯವಿಧಾನವನ್ನು ರೂಪಿಸಲಾಗುವುದು. ನೂತನವಾಗಿ ರಚಿಸಲ್ಪಡುವ ಈ ನಿಯಂತ್ರಣ ವ್ಯವಸ್ಥೆಯಲ್ಲಿ ಸ್ಪಷ್ಟವಾದ ಜವಾಬ್ದಾರಿ ಹಂಚಿಕೆ ಮಾಡಲಾಗುತ್ತದೆ. ಹಾಗೆಯೇ ಸಂಸ್ಥೆಗಳನ್ನು ಸಶಕ್ತ ಹಾಗೂ ಸ್ವಾಯತ್ತಗೊಳಿಸಲು ಅಸಾಧಾರಣ ಮತ್ತು ಪ್ರತಿಭಾಪೂರ್ಣ ಪರಿಣಿತರ ನೇತೃತ್ವದಲ್ಲಿ ಈ ಹುದ್ದೆಗಳಿಗೆ ಪಾರದರ್ಶಕವಾಗಿ ಆಯ್ಕೆ ನಡೆಯುತ್ತದೆ. ಇದರಿಂದಾಗಿ ಎಲ್ಲ ಪ್ರಕ್ರಿಯೆಗಳನ್ನು ಸರಳವಾಗಿ, ಶೀಘ್ರವಾಗಿ ಮತ್ತು ಪಾರದರ್ಶಕವಾಗಿಸಿ ಹಣಕಾಸಿನ ಹರಿವನ್ನು ಒದಗಿಸಲು ಸಾಧ್ಯವಾಗುತ್ತದೆ.

26.6 ಶಿಕ್ಷಣ ಕ್ಷೇತ್ರದಲ್ಲಿ ಸಮಾಜಸೇವಾ ಸಂಸ್ಥೆಗಳ ಪಾತ್ರವನ್ನು ಹೆಚ್ಚಿಸಲು ಅವಕಾಶವನ್ನು ಒದಗಿಸಲಾಗಿದೆ. ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ಹಣಕಾಸಿನ ಸಹಾಯ-ಸಹಕಾರದ ಜೊತೆಜೊತೆಗೇ ಯಾವುದೇ ಸಾರ್ವಜನಿಕ ಸಂಸ್ಥೆಯು ಖಾಸಗಿ ಲೋಕೋಪಕಾರಿ ಸಂಸ್ಥೆಗಳಿಂದ ನಿಧಿಗಳನ್ನು ಸಂಗ್ರಹಿಸುವ ಮೂಲಕ ಶೈಕ್ಷಣಿಕ ಅವಕಾಶಗಳನ್ನು ವಿಸ್ತರಿಸಿಕೊಳ್ಳಬಹುದು.

26.7 ಶಿಕ್ಷಣದ ವಾಣಿಜ್ಯೀಕರಣ ಕುರಿತಾಗಿ ಈ ನೀತಿಯು ಅನೇಕ ಆಯಾಮಗಳಲ್ಲಿ ವ್ಯವಹರಿಸುತ್ತದೆ. "ಹಗುರ ಆದರೆ ಬಿಗಿಯಾದ" ನಿಬಂಧನಾ ವ್ಯವಸ್ಥೆಯಿಂದಾಗಿ ಹಣಕಾಸು ವ್ಯವಹಾರ ವಿವರಗಳ ಸಾರ್ವಜನಿಕ ಸ್ವಯಂ ಪ್ರಕಟಣೆ, ಅನುಷ್ಠಾನ ಕ್ರಮಗಳು, ಕಲಿಯಲು ರೂಪಿಸಲ್ಪಟ್ಟಿರುವ ಮಾರ್ಗಗಳು ಮತ್ತು ಕಾರ್ಯಕ್ರಮಗಳು, ಶೈಕ್ಷಣಿಕ ಫಲಿತಾಂಶಗಳು ಇತ್ಯಾದಿಗಳನ್ನು ಈ ನೀತಿಯಲ್ಲಿ ಅವಲೋಕನಕ್ಕೆ ಒಳಪಡಿಸಲಾಗುತ್ತದೆ. ಸಾರ್ವಜನಿಕ ಶಿಕ್ಷಣ ಸಂಬಂಧ ಗಣನೀಯ ಪ್ರಮಾಣದಲ್ಲಿ ಹೂಡಿಕೆಗಾಗಿ ಎಲ್ಲಾ ಖಾಸಗಿ ಅಥವಾ ಸರಕಾರಿ ಸಂಸ್ಥೆಗಳಲ್ಲಿ ವ್ಯವಸ್ಥೆ ಕಲ್ಪಿಸಲಾಗುವುದು. ಅದೇ ರೀತಿಯಲ್ಲಿ ಅರ್ಹ ಹಾಗೂ ಹಿಂದುಳಿದ ವರ್ಗಗಳಿಗೆ (ಪಂಗಡಗಳಿಗೆ) ಯಾವುದೇ ರೀತಿಯಲ್ಲಿಯೂ ಧಕ್ಕೆಯಾಗದಂತೆ ಅಧಿಕ ವೆಚ್ಚವನ್ನು ಮರಳಿ ಪಡೆದುಕೊಳ್ಳಲು ಅವಕಾಶಗಳನ್ನು ಇಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ.

## 27 ಅನುಷ್ಠಾನ

27.1 ಯಾವುದೇ ನೀತಿಯ ಪರಿಣಾಮಕಾರತೆ ಅದರ ಅನುಷ್ಠಾನವನ್ನು ಆಧರಿಸಿರುತ್ತದೆ. ಇಂತಹ ಅನುಷ್ಠಾನವು ಹಲವು ಕ್ರಮಗಳು ಹಾಗೂ ಉಪಕ್ರಮಗಳನ್ನು ಬಯಸುತ್ತದೆ. ಹಲವಾರು ಮಂಡಳಿಗಳು ಸಂಯೋಜಿತ ಮತ್ತು ವ್ಯವಸ್ಥಿತ ರೀತಿಯಲ್ಲಿ ಈ ಉಪಕ್ರಮಗಳನ್ನು ನಡೆಸಬೇಕಾಗಿರುತ್ತವೆ. ಹಲವು ಮಂಡಳಿಗಳು-ಅಂದರೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ಶಿಕ್ಷಣದ ಕೇಂದ್ರ ಸಲಹಾ-ಮಂಡಳಿ (CABE), ಕೇಂದ್ರ ಹಾಗೂ ರಾಜ್ಯ ಸರಕಾರಗಳು, ಶಿಕ್ಷಣ ಸಂಬಂಧಿತ ಸಚಿವಾಲಯಗಳು, ರಾಜ್ಯಗಳ ಶಿಕ್ಷಣ ವಿಭಾಗಗಳು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA), ಶಾಲಾ ಮತ್ತು ಉಚ್ಚ ಶಿಕ್ಷಣ ನಿಯಂತ್ರಕ ಮಂಡಳಿಗಳು (NCERT), ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ರಾಜ್ಯ ಮಂಡಳಿ (SCERT), ಶಾಲಾ ಮತ್ತು ಉಚ್ಚ ಶಿಕ್ಷಣ ಸಂಸ್ಥೆಗಳು, ನಿಗದಿತ ಸಮಯ ಮಿತಿಯೊಳಗೆ ಮತ್ತು ಪುನರ್-ವಿಮರ್ಶೆಯ ಯೋಜನೆಯೊಂದಿಗೆ ಈ ನೀತಿಯನ್ನು ಮನಃಪೂರ್ವಕವಾಗಿ ಸದುದ್ದೇಶ ಹಾಗೂ ಬದ್ಧತೆಯಿಂದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತವೆ.

27.2 ಈ ಅನುಷ್ಠಾನ ಪ್ರಕ್ರಿಯೆಯು ಮುಂದಿನ ತತ್ವಗಳನ್ನು ಆಧರಿಸಿರುತ್ತದೆ:


- ಮೊದಲನೆಯಾದಾಗಿ ಈ ನೀತಿಯ ಭಾವ ಮತ್ತು ಉದ್ದೇಶಗಳ ಅನುಷ್ಠಾನ ಅತ್ಯಂತ ನಿರ್ಣಾಯಕವಾಗಿದೆ.
- ಎರಡನೆಯದಾಗಿ, ಹಂತ ಹಂತವಾಗಿಯೇ ಈ ನೀತಿಯನ್ನು ಅನುಷ್ಠಾನಗೊಳಿಸುವ ಉಪಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಏಕೆಂದರೆ ಈ ನೀತಿಯ ಪ್ರತಿ ವಿಷಯವೂ ಹಲವಾರು ಹಂತಗಳನ್ನು ಹೊಂದಿದೆ. ಅವುಗಳ ಪ್ರತಿ ಹಂತದಲ್ಲೂ ಪೂರ್ವಭಾವಿ ಹಂತದ ಯಶಸ್ವಿ ಅನುಷ್ಠಾನ ಅನಿವಾರ್ಯವಾಗಿರುತ್ತದೆ.
- ಮೂರನೆಯಾದಾಗಿ, ಈ ನೀತಿಯ ವಿಷಯಗಳಿಗೆ ಸೂಕ್ತವಾಗಿ ಅನುಕ್ರಮವಾಗಿ ಪ್ರಾಶಸ್ತ್ಯವನ್ನು ನಿಗದಿಗೊಳಿಸುವುದು ಮುಖ್ಯವಾಗಿದೆ. ಅದೂ ಅಲ್ಲದೇ ಅತ್ಯಂತ ತುರ್ತಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಪ್ರಥಮದಲ್ಲಿಯೇ ರೂಪಿಸಬೇಕಾಗುತ್ತದೆ. ಈ ಮೂಲಕ ಒಂದು ಭದ್ರ ಬುನಾದಿಯನ್ನು ಹಾಕಿಕೊಳ್ಳಬಹುದು
- ನಾಲ್ಕನೆಯದಾಗಿ, ಸಮಗ್ರ ಅನುಷ್ಠಾನದಲ್ಲಿ ಈ ನೀತಿಯ ಯಶಸ್ಸು ಅಡಗಿದೆ. ಏಕೆಂದರೆ, ಈ ನೀತಿಯು ಪಾಕ್ಷಿಕವಾಗಲ್ಲದೇ ಒಂದಕ್ಕೊಂದು ಬೆಸೆದ ಅಂಶಗಳನ್ನು ಹೊಂದಿದೆ ಹಾಗೂ ಸಮಗ್ರವಾಗಿದೆ. ಆದ್ದರಿಂದ ಪಾಕ್ಷಿಕವಾಗಲ್ಲದೇ ಪೂರ್ಣ-ಪ್ರಮಾಣದ ಅನುಷ್ಠಾನದಿಂದ ಮಾತ್ರ ಉದ್ದೇಶಿತ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಸಾಧ್ಯ.
- ಐದನೆಯದಾಗಿ, ಶಿಕ್ಷಣವು ಒಂದು ಸಮವರ್ತಿ ವಿಷಯವಾಗಿರುವುದರಿಂದ ಅದು ಕೇಂದ್ರ ಹಾಗೂ ರಾಜ್ಯಗಳ ಜಂಟಿ ಉಸ್ತುವಾರಿಯಲ್ಲಿ ಯೋಜನಾಬದ್ಧ ಸಹಭಾಗಿತ್ವದ ಅನುಷ್ಠಾನವನ್ನು ನಿರೀಕ್ಷಿಸುತ್ತದೆ.
- ಆರನೆಯದಾಗಿ, ಈ ನೀತಿಯನ್ನು ತೃಪ್ತಿಕರವಾಗಿ ಅನುಷ್ಠಾನಗೊಳಿಸಲು ರಾಜ್ಯ ಹಾಗೂ ಕೇಂದ್ರ ವ್ಯವಸ್ಥೆಗಳಿಂದ ಸಮಯೋಚಿತವಾಗಿರುವ ಮಾನವ ಮೂಲ ಸೌಕರ್ಯಗಳ ಹಾಗೂ ಹಣಕಾಸಿನ ಪೂರೈಕೆಗಳು ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

- ಅಂತಿಮವಾಗಿ, ಈ ಎಲ್ಲ ಉಪಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಹಲವು ಆಯಾಮಗಳ ಅಗತ್ಯತೆ ಇರುತ್ತದೆ. ಈ ಆಯಾಮಗಳನ್ನು ಸೂಕ್ತವಾಗಿ ವೀಕ್ಷಿಸಿ, ವಿಶ್ಲೇಷಿಸಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಶಿಶುವಿಹಾರ/ಬಾಲವಾಡಿ/ಅಂಗನವಾಡಿಗಳ ಮೂಲಕ ಪ್ರಾರಂಭದಲ್ಲಿ ಹೂಡಿಕೆ ಮಾಡುವುದರಿಂದ ಒಂದು ಭದ್ರ ಬುನಾದಿಯನ್ನು ಒದಗಿಸಲು ಸಾಧ್ಯವಾಗುತ್ತದೆ. ಮುಂದುವರಿದಂತೆ ಪ್ರಗತಿಪರ ಕ್ರಮಗಳನ್ನು ರೂಪಿಸಲು ಇದು ಹಾದಿಯನ್ನು ಸುಗಮಗೊಳಿಸುತ್ತದೆ.

27.3 ಸುಸ್ಪಷ್ಟ ಹಾಗೂ ವಿವಿಧ ಹಂತಗಳಲ್ಲಿ, ನಿಗದಿತ ಗುರಿಗಳನ್ನು ಮೇಲೆ ಚರ್ಚಿಸಿದ ತತ್ವಗಳ ಅನ್ವಯ ಅನುಷ್ಠಾನಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹಂತದಲ್ಲಿ ವಿಷಯಾವಾರು ಪರಿಣಿತರ ಸಮಿತಿಗಳನ್ನು ರೂಪಿಸುವುದನ್ನು ಈ ನೀತಿಯು ಅಪೇಕ್ಷಿಸುತ್ತದೆ. ಇವುಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಚಿವಾಲಯಗಳ ಸಹಕಾರ ಮತ್ತು ಸಲಹೆಗಳೊಡನೆ ಅನುಷ್ಠಾನಗೊಳಿಸಲಾಗುವುದು. ಈ ನೀತಿ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು, ಒಂದು ಜಂಟೀ ನಿರೀಕ್ಷಣೆಯಿಂದ ವಾರ್ಷಿಕವಾಗಿ ಕೈಗೊಳ್ಳಲಾಗುತ್ತದೆ. ಆಯಾ ವಿಭಾಗಕ್ಕೆ ನಿರ್ದಿಷ್ಟಪಡಿಸಲಾಗಿರುವ ಗುರಿಗಳು ಮತ್ತು ಅದರ ಕ್ರಮಗಳ ಬಗೆಗೆ ಸಮೀಕ್ಷೆಯನ್ನು MHRD ಹಾಗು ರಾಜ್ಯಗಳಿಂದ ಸಂರಚಿತಗೊಂಡಿರುವ ಮಂಡಳಿಯಿಂದ ನಡೆಸಲಾಗುತ್ತದೆ. ಇದರ ವರದಿಯನ್ನು CABE ಜೊತೆ ಹಂಚಿಕೊಳ್ಳಲಾಗುವುದು.

- ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಹಾಗೂ ರಾಜ್ಯ ಹಂತಗಳಲ್ಲಿ ಹಣಕಾಸು ಪೂರೈಕೆಯ ಸವಾಲುಗಳೇನು?
- ಶಿಕ್ಷಣದ ವ್ಯಾಪಾರೀಕರಣದ ಪರಿಣಾಮಗಳೇನು?

2030–40 ದಶಕದಲ್ಲಿ ಈ ನೀತಿಯು ಸಂಪೂರ್ಣವಾಗಿ ಕಾರ್ಯನುಷ್ಠಾನಗೊಂಡಿರುತ್ತದೆ. ಇದರೊಂದಿಗೆ ಇನ್ನೊಂದು ಸಮಗ್ರ ನಿರೀಕ್ಷಣೆಯನ್ನು ಮಾಡಲಾಗುತ್ತದೆ.




## ಈ ಅಧ್ಯಾಯದಲ್ಲಿ ತಿಳಿದುಕೊಂಡ ಪ್ರಮುಖ ಅಂಶಗಳು

- ಕೇಂದ್ರೀಯ ಶಿಕ್ಷಣ ಸಲಹಾ ಮಂಡಲಿಯನ್ನು ಸಶಕ್ತಗೊಳಿಸುವ ಕ್ರಮಗಳು
- ಶಿಕ್ಷಣ ಕ್ಷೇತ್ರದಲ್ಲಿ ಸಮಾಜ ಸೇವ ಸಂಸ್ಥೆಗಳನ್ನು ಪಾತ್ರವನ್ನು ಹೆಚ್ಚಿಸುವ ಅವಕಾಶಗಳು
- ಶಿಕ್ಷಣ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ತತ್ವಗಳು.

# 6

# ತರಬೇತುದಾರರ ಸಾಹಿತ್ಯ ಮತ್ತು ವೇಳಾಪಟ್ಟಿ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020ರನ್ನು ಒಂದರಿಂದ ಎಂಟನೇ ತರಗತಿ ಬೋಧಿಸುತ್ತಿರುವ ಶಿಕ್ಷಕರಿಗೆ ಪರಿಚಯ ಮಾಡಿಕೊಡುವ ದೃಷ್ಟಿಯಿಂದ ಈ ಸಂಚಿಕೆಯನ್ನು ರೂಪಿಸಲಾಗಿದೆ. ಇದನ್ನು ತರಬೇತುದಾರರು ಬಳಸುವ ಮೊದಲು ಸಂಚಿಕೆಯಲ್ಲಿನ ಎಲ್ಲಾ ಅಂಶಗಳನ್ನು ಮನನ ಮಾಡಿಕೊಂಡು, ಮೂಲ ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲ ಸ್ವಾಭಾವವನ್ನು ಗ್ರಹಿಸಬೇಕು. ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಸಂಬಂಧ ಸಿದ್ಧತೆಗಳು, ನಮ್ಮ ಪಾತ್ರ, ನಾವು ತೊಡಗಿಸಿಕೊಳ್ಳಬೇಕಾದ ರೀತಿ ಇತ್ಯಾದಿಗಳನ್ನು ಸೂಕ್ತವಾಗಿ ಅವಲೋಕನ ಮಾಡಿಕೊಳ್ಳಬೇಕು. ಇದರಿಂದ ತರಬೇತಿಯ ಸಮಯದಲ್ಲಿ ಶಿಕ್ಷಕರಿಂದ ಎದುರಾಗಬಹುದಾದ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರಗಳನ್ನು ನೀಡಬಹುದು.

**ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಚಯಾತ್ಮಕ ಸಂಚಿಕೆಯ ಉದ್ದೇಶಗಳು:**

1. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮೂಲ ಅಂಶಗಳನ್ನು ಗ್ರಹಿಸುವರು;
2. ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮಗ್ರ ವಿಷಯಗಳನ್ನು ಅರಿಯುವರು;
3. ಶೈಕ್ಷಣಿಕ ಪ್ರಕ್ರಿಯೆಗಳು, ಶಿಕ್ಷಕರ ವೃತ್ತಿಪರಅಭಿವೃದ್ಧಿ, ಶೈಕ್ಷಣಿಕ ಕ್ರಮಗಳನ್ನು ಮನನ ಮಾಡಿಕೊಳ್ಳುವರು;
4. ಹೊಸ ಶಿಕ್ಷಣ ನೀತಿಯಂತೆ ಬದಲಾಗಬೇಕಾಗಿರುವ ಅಂಶಗಳನ್ನು ಗುರ್ತಿಸುವರು;
5. ಹೊಸ ಶಿಕ್ಷಣ ನೀತಿಯ ಜಾರಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವರು.

ಇದು ಪರಿಚಯಾತ್ಮಕ ಸಂಚಿಕೆಯಾದ್ದರಿಂದ, ವಿಶೇಷವಾದ ಕಲಿಕೋಪಕರಣಗಳ ಅಗತ್ಯವಿರುವುದಿಲ್ಲ. ಇದು ಕೇವಲ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವ ವಿಧಾನವಾಗಬಾರದು ಎಂಬ ಉದ್ದೇಶದಿಂದ, ಕೆಲವು ಪ್ರಮುಖ ವಿಷಯಗಳಿಗೆ ಚಿಂತನಾಶೀಲ ಪ್ರಶ್ನೆಗಳನ್ನು ನೀಡಲಾಗಿದೆ. ಇವುಗಳನ್ನು ಸೂಕ್ತವಾಗಿ ಬಳಸಿಕೊಂಡು ಶಿಕ್ಷಕರನ್ನು ತರಬೇತಿಯಲ್ಲಿ ತೊಡಗಿಸಿಕೊಳ್ಳಬೇಕು ಹಾಗೂ ವಿಚಾರಗಳನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಡಬೇಕು. ಇದು ತರಬೇತಿಯ ಸಂವಹನದಲ್ಲಿ ಏಕತಾನತೆಯನ್ನು ಹೋಗಲಾಡಿಸುವುದಲ್ಲದೆ, ಶಿಬಿರಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯ ಮಾಡುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ನಾಲ್ಕು ಭಾಗಗಳಿವೆ. ಭಾಗ – 1ರಲ್ಲಿ ಶಾಲಾ ಶಿಕ್ಷಣ ಸಂಬಂಧಿತ ವಿಷಯಗಳಿವೆ. ಇದು ಆರಂಭಿಕ ಶಿಕ್ಷಣ, ಆರಂಭಿಕ ಸಾಕ್ಷರತೆ ಮತ್ತು ನ್ಯೂಮರೆಸಿ, ಶಾಲೆಯಿಂದ ಹೊರಗುಳಿಯುವಿಕೆಯನ್ನು ತಡೆಗಟ್ಟಿ ಶಿಕ್ಷಣದ ಸಾರ್ವತ್ರೀಕರಣವನ್ನು ಖಾತರಿಗೊಳಿಸುವುದು, ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಶಿಕ್ಷಣ ಶಾಸ್ತ್ರ, ಶಿಕ್ಷಕರು, ಸಮಾನತೆ ಮತ್ತು ಒಳಗೊಳ್ಳುವ ಶಿಕ್ಷಣ, ಶಾಲಾ ಸಂಕೀರ್ಣಗಳ ಮೂಲಕ ಪರಿಣಾಮಕಾರಿ ಆಡಳಿತ, ಶಾಲಾ ಶಿಕ್ಷಣದ ಅಂಗೀಕರಣ ಇವುಗಳಿಗೆ

ಸಂಬಂಧಿಸಿದ ವಿಷಯಗಳನ್ನು ಹೊಂದಿದೆ. ಸದರಿ ಸಂಚಿಕೆಯನ್ನು ಒಂದರಿಂದ ಎಂಟನೇ ತರಗತಿ ಬೋಧಿಸುತ್ತಿರುವ ಶಿಕ್ಷಕರನ್ನು ಗಮನದಲ್ಲಿರಿಸಿಕೊಂಡು ರಚಿಸಿರುವುದರಿಂದ ಭಾಗ – 1ಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗಿದೆ. ಈ ಭಾಗದಲ್ಲಿ ವಿಷಯಗಳ ಬಗ್ಗೆ ನಮ್ಮ ಶಿಕ್ಷಕರು ಪೂರ್ಣ ಪರಿಚಯನ್ನು ಪಡೆದುಕೊಳ್ಳಬೇಕು.

ಭಾಗ – 2 ರಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳಿವೆ. ಇವುಗಳಿಗೆ ಆಧಾರವಾಗಿ ಶಾಲಾ ಶಿಕ್ಷಣವನ್ನು ನಾವು ಹೇಗೆ ರೂಪಿಸಬೇಕು ಎಂಬುದರ ಬಗ್ಗೆ ಶಿಕ್ಷಕರನ್ನು ಚಿಂತನೆಗೆ ತೊಡಗಿಸಬೇಕಾಗಿದೆ. ಇಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆಯೂ ಕೆಲವು ಚಿಂತನಾಶೀಲ ಪ್ರಶ್ನೆಗಳನ್ನು ನೀಡಲಾಗಿದೆ. ಇವುಗಳನ್ನು ಮನನ ಮಾಡಿಸುವುದರಿಂದ ವಿಷಯದ ಮಹತ್ವವನ್ನು ಮನಗಾಣಿಸಬಹುದು. ಭಾಗ – 3ರಲ್ಲಿ ಹೆಚ್ಚುವರಿ ಪ್ರಮುಖ ಕೇಂದ್ರಿತ ಕ್ಷೇತ್ರಗಳು ಹಾಗೂ ಭಾಗ – 4ರಲ್ಲಿ ಶಿಕ್ಷಣ ಪರಿವರ್ತನೆಯ ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಈ ಎಲ್ಲಾ ಅಂಶಗಳ ಬಗೆಗೂ ಶಿಕ್ಷಕರು ತಿಳಿದಿರಬೇಕಾದ ಅಂಶಗಳನ್ನು ಸಂಚಿಕೆಯಲ್ಲಿ ಸೇರಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ತರಬೇತುದಾರರು ಸಂಪೂರ್ಣವಾಗಿ ಮನನ ಮಾಡಿಕೊಂಡಾಗ ಇದರಲ್ಲಿನ ವಿಷಯಗಳನ್ನು ಮೂಲ ಆಶಯದಂತೆ ಸಂವಹನ ನಡೆಸಲು ಸಾಧ್ಯವಾಗುತ್ತದೆ.

## ತರಬೇತುದಾರರಿಗೆ ಸೂಚನೆಗಳು:

- ತರಬೇತಿಯನ್ನು ಆರಂಭಿಸುವ ಮೊದಲು ಸ್ವಾತಂತ್ರ್ಯದ ನಂತರ ಭಾರತದಲ್ಲಿ ಶಿಕ್ಷಣ ನಡೆದು ಬಂದ ಹಾದಿಯನ್ನು ಚರ್ಚಿಸಿ. ಇದರಿಂದ ಶಿಕ್ಷಣ ನೀತಿ ಹೇಗೆ ರೂಪುಗೊಳ್ಳುತ್ತದೆ, ಅದರ ಬುನಾದಿ ಅಂಶಗಳು ಯಾವುವು? ಶಿಕ್ಷಣ ನೀತಿಯ ಪ್ರಾಮುಖ್ಯತೆ ಇತ್ಯಾದಿಗಳ ಅರಿವು ಉಂಟಾಗುತ್ತದೆ. ಇದಕ್ಕೆ ಪೂರಕವಾಗಿ ಅಧ್ಯಾಯ – 1 ರಲ್ಲಿ ಕೆಲವು ಚಿಂತನಾಶೀಲ ಪ್ರಶ್ನೆಗಳನ್ನು ನೀಡಲಾಗಿದೆ. ಅವುಗಳನ್ನು ಬಳಸಿಕೊಳ್ಳಿ.
- ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪೀಠಿಕೆಯಲ್ಲಿನ ಅಂಶಗಳನ್ನು ಮನನ ಮಾಡಿಸಿ. ಇದರಿಂದ ಶಿಬಿರಾರ್ಥಿಗಳಿಗೆ ಒಟ್ಟಾರೆ ನೀತಿಯು ರೂಪುಗೊಳ್ಳಲು ಕಾರಣವಾದ ಅಂಶಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ.
- ಹಿಂದಿನ ರಾಷ್ಟ್ರೀಯ ಶಿಕ್ಷಣ ನೀತಿಗಳು ಮತ್ತು ಇವುಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ಚರ್ಚೆಯನ್ನು ಆರಂಭಿಸಿ. ಶಿಕ್ಷಕರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ. (ಇದಕ್ಕಾಗಿ ಮಾಡ್ಯೂಲ್‌ನಲ್ಲಿ ನೀಡಿರುವ ಚಿಂತನಾಶೀಲ ಪ್ರಶ್ನೆಗಳನ್ನು ಬಳಸಿಕೊಳ್ಳಿ)
- ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಮುಖ ತತ್ವಗಳನ್ನು ಪ್ರಸ್ತಾಪಿಸಿ. ಈ ತತ್ವಗಳ ಆಧಾರದಲ್ಲಿ ಇಡೀ ಶಿಕ್ಷಣ ನೀತಿ ರೂಪುಗೊಂಡಿರುವ ಬಗ್ಗೆ ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿಕೊಡಿ. ಇದರಿಂದ ಮುಂದಿನ ವಿಷಯಗಳನ್ನು ಈ ತತ್ವಗಳ ಆಧಾರದಲ್ಲಿ ಗ್ರಹಿಸಲು ಅವಕಾಶವಾಗುತ್ತದೆ.
- ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ವಿಶನ್ ಹೇಳಿಕೆಯನ್ನು ಒಂದು ಡ್ರಾಯಿಂಗ್ ಹಾಳೆಯಲ್ಲಿ ಬರೆದು ಎಲ್ಲರಿಗೂ ಕಾಣುವ ರೀತಿಯಲ್ಲಿ ಪ್ರದರ್ಶಿಸಿ. ಸಂಚಿಕೆಯಲ್ಲಿನ ಯಾವುದೇ ವಿಷಯವನ್ನು ವಿಶನ್ ಆಧಾರದಲ್ಲಿ ಗ್ರಹಿಸಲು ಶಿಬಿರಾರ್ಥಿಗಳಿಗೆ ಸಾಧ್ಯವಾಗುತ್ತದೆ.
- ನಂತರದಲ್ಲಿ ಅಧ್ಯಾಯ ಒಂದರಿಂದ ಆರಂಭಿಸಿ ಅದರಲ್ಲಿನ ವಿಷಯಗಳನ್ನು ಪ್ರಸ್ತಾಪಿಸಿ, ಸೂಕ್ತವಾದ ಪಿಪಿಟಿಗಳನ್ನು ಬಳಸಿ, ಚರ್ಚೆಯಲ್ಲಿ ಶಿಕ್ಷಕರನ್ನು ತೊಡಗಿಸಿಕೊಳ್ಳಿ.

## ತರಬೇತುದಾರರಿಂದ ನಿರೀಕ್ಷಿತ ಸಿದ್ಧತೆಗಳು

- ಇಡೀ ಸಂಚಿಕೆಯನ್ನು ಒಂದೆರಡು ಬಾರಿ ಪೂರ್ಣವಾಗಿ ಓದಿ ಮನನ ಮಾಡಿಕೊಳ್ಳಿ. ಮುಖ್ಯಾಂಶಗಳನ್ನು ಟಿಪ್ಪಣಿ ಮಾಡಿಕೊಳ್ಳಿ.
- ಚರ್ಚೆಯಲ್ಲಿ ಶಿಬಿರಾರ್ಥಿಗಳನ್ನು ತೊಡಗಿಸಲು ನೀಡಿರುವ ಚಿಂತನಾಶೀಲ ಪ್ರಶ್ನೆಗಳನ್ನು ವಿಶೇಷವಾಗಿ ಮನನ ಮಾಡಿಕೊಳ್ಳಿ. ಈ ಪ್ರಶ್ನೆಗಳಿಂದ ಚರ್ಚೆಗಳು ಯಾವ ಸ್ವರೂಪದಲ್ಲಿ ಮುಂದುವರಿಯಬಹುದು ಎಂಬುದನ್ನು ಚಿಂತಿಸಿ.
- ಶಿಕ್ಷಣ ನೀತಿಯಲ್ಲಿನ ಅಂಶಗಳಿಗೆ ಪೂರಕವಾಗಿಯಷ್ಟೇ ಚರ್ಚೆಗಳಿರಲಿ. ವಿಷಯದ ಹೊರತಾದ ಚರ್ಚೆಗಳನ್ನು ಪ್ರೋತ್ಸಾಹಿಸಬೇಡಿ. ಇದರಿಂದ ವಿಷಯದ ಗಾಂಭೀರ್ಯತೆಗೆ ಯಾವ ಹಂತದಲ್ಲೂ ಧಕ್ಕೆ ಬಾರದಂತೆ ನಿರ್ವಹಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂಬುದನ್ನು ನೆನಪಿಡಿ.
- ಪ್ರತಿ ಅಧಿವೇಶನವನ್ನೂ ನಿಗದಿತ ಸಮಯದೊಳಗೆ ಪೂರ್ಣಗೊಳಿಸಿ. ತೀರಾ ಅವಶ್ಯಕವಾದ ಪ್ರಶ್ನೆಗಳಿದ್ದು, ಅತ್ಯಗತ್ಯವೆನಿಸಿದರೆ ಮಾತ್ರ ಸ್ವಲ್ಪ ಹೆಚ್ಚಿನ ಸಮಯವನ್ನು ವಿನಿಯೋಗಿಸಬಹುದು. ಅಷ್ಟಕ್ಕೂ ಅಗತ್ಯವಾಗಿ ಚರ್ಚೆ ಅವಶ್ಯಕವೆನಿಸಿದರೆ, ತರಬೇತಿಯ ನಂತರ ಸಂಜೆಯ ಸಮಯದಲ್ಲಿ ಅವುಗಳನ್ನು ಚರ್ಚೆ ಮಾಡಬಹುದು.

- ಯಾವುದಾದರೂ ವಿಷಯಕ್ಕೆ ಸಂಬಂಧಿಸಿದ ಚರ್ಚೆಗಳು ಸುದೀರ್ಘವಾಗುತ್ತದೆ ಎನಿಸಿದರೆ, ಚರ್ಚೆಯ ಅಂಶಗಳನ್ನು ಶಿಬಿರಾರ್ಥಿಗಳಿಗೆ ಟಿಪ್ಪಣಿ ಮಾಡಿಕೊಳ್ಳಲು ತಿಳಿಸಿ. ನಂತರ ಆ ಅಂಶಗಳನ್ನು ಡ್ರಾಯಿಂಗ್ ಹಾಳೆಯಲ್ಲಿ ಬರೆದು ಪ್ರದರ್ಶಿಸಬಹುದು. ಹಾಗೂ ಅವುಗಳಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯ ಮಾಡುವ ಅವಶ್ಯಕತೆಯಿದ್ದರೆ ಸ್ವಲ್ಪ ಸಮಯವನ್ನು ವಿನಿಯೋಗಿಸಬಹುದು.
- ಯಾವುದೇ ಸಂವಹನ, ಚರ್ಚೆ, ವಿಚಾರ ವಿನಿಮಯ ತರಬೇತಿ ಸಂಚಿಕೆಯ ವಿಷಯಗಳ ಚೌಕಟ್ಟಿನೊಳಗೇ ನಡೆಯುವಂತೆ ಕ್ರಮವಹಿಸಿ. ಇದರಿಂದ ಅರ್ಥಪೂರ್ಣವಾಗಿ ವಿಷಯಗಳನ್ನು ಸಂವಹನ ಮಾಡಲು ಸಾಧ್ಯವಾಗುತ್ತದೆ.
- ಪ್ರತಿ ಅಧ್ಯಾಯದಲ್ಲೂ ಕೆಲವು ಪ್ರಮುಖ ಸೈದ್ಧಾಂತಿಕ ಅಂಶಗಳನ್ನು ಬಾಕ್ಸ್ ಐಟಂ ಆಗಿ ನೀಡಲಾಗಿದೆ. ಇದು ಸಂಬಂಧಿಸಿದ ವಿಷಯವನ್ನು ಗ್ರಹಿಸಲು ಪೂರಕವಾದ ಹಿನ್ನಲೆಯನ್ನು ಒದಗಿಸುತ್ತದೆ. ಇವುಗಳನ್ನು ತರಬೇತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಿ.
- ಪ್ರತಿ ಅಧಿವೇಶನವನ್ನು ನೀಡಲು ಅಗತ್ಯವಾದ ಕಲಿಕಾ ಸಾಮಗ್ರಿಗಳನ್ನು ಮೊದಲೇ ಸಿದ್ಧಪಡಿಸಿಕೊಳ್ಳಿ. ಅವುಗಳ ಉಪಯೋಗಾರ್ಹತೆಯ ಬಗ್ಗೆ ಗಮನಹರಿಸಿ.
- ಅಧಿವೇಶನಗಳಿಗೆ ಅಗತ್ಯವಾದ ಪಿಪಿಟಿಗಳನ್ನು ತಯಾರಿಸಿಕೊಳ್ಳಿ.
- ಸಮಯದ ನಿರ್ವಹಣೆಗೆ ಗಮನಹರಿಸಿ, ಪ್ರತಿ ಅಧಿವೇಶನವನ್ನು ಫಲದಾಯಕವಾಗಿ ನಿರ್ವಹಿಸಿ.

**ವಿಶೇಷ ಸೂಚನೆ:** ತರಬೇತಿ ಸಂಚಿಕೆಯಲ್ಲಿನ ಎಲ್ಲಾ ಅಂಶಗಳನ್ನು ಪ್ರಸ್ತುತಪಡಿಸಿ ಚರ್ಚೆ ಮಾಡಬೇಕು ಎಂಬುದೇನಿಲ್ಲ. ಪ್ರಮುಖ ಅಂಶಗಳನ್ನು ಪ್ರಸ್ತುತಿ ಪಡಿಸಿ ಚರ್ಚೆ, ಸಂವಾದ ನಡೆಸಬಹುದು. ಸುಲಭವಾಗಿ ಗ್ರಹಿಸಬಹುದಾದ ಅಂಶಗಳನ್ನು ಶಿಬಿರಾರ್ಥಿಗಳಿಗೆ ತಾವೇ ತರಬೇತಿಯ ನಂತರ ಓದಿಕೊಳ್ಳಲು ತಿಳಿಸಬಹುದು.

## ತರಬೇತಿ ವೇಳಾಪಟ್ಟಿ

| ದಿನ – 01 | | | |
|---|---|---|---|
| ಅಧಿವೇಶನ | ಸಂವಹನ ಅಂಶಗಳು | ಸಂವಹನ ವಿಧಾನ | ಅಗತ್ಯ ಸಾಮಗ್ರಿಗಳು |
| 01 | ನೊಂದಣಿ, ಉದ್ಘಾಟನೆ, ಪೂರ್ವ ಪರೀಕ್ಷೆ, ಶಿಬಿರಾರ್ಥಿಗಳ ಪರಿಚಯ | | ಪೂರ್ವ ಪರೀಕ್ಷೆ ಪ್ರಶ್ನಪತ್ರಿಕೆ, ಹಾಜರಾತಿ ವಹಿ |
| 02 | ಇಲ್ಲಿಯವರೆಗೆ ಶಿಕ್ಷಣ ನಡೆದು ಬಂದ ಹಾದಿ<br>ರಾ.ಶಿ. ನೀತಿ 2020 ಕ್ಕೆ ಪೀಠಿಕೆ | ಪ್ರಸ್ತುತಿ, ಚರ್ಚೆ | ಪಿಪಿಟಿ/ಡ್ರಾಯಿಂಗ್ ಹಾಳೆ |
| 03 | ರಾ.ಶಿ. ನೀತಿ 2020ರ ಪ್ರಮುಖ ತತ್ವಗಳು<br>ರಾ.ಶಿ. ನೀತಿ 2020ರ ವಿಷನ್ | ಪ್ರಸ್ತುತಿ, ಚರ್ಚೆ | ಪಿಪಿಟಿ/ಡ್ರಾಯಿಂಗ್ ಹಾಳೆ |
| 04 | ಗುಂಪು ಚಟುವಟಿಕೆ: ಶಿಬಿರಾರ್ಥಿಗಳು ಗುಂಪುಗಳಲ್ಲಿ ರಾ.ಶಿ.ನೀತಿ 2020ರ ಪ್ರಸ್ತುತ ಅಗತ್ಯತೆ ಹಾಗೂ ಮುಂದಿನ ಬದಲಾವಣೆಗಳ ಬಗ್ಗೆ ಚರ್ಚಿಸುವರು. | ಗುಂಪು ಚರ್ಚೆ, ಚಾರ್ಟ್‌ನಲ್ಲಿ ಪ್ರಮುಖ ವಿಷಯಗಳ ಟಿಪ್ಪಣಿ | ಡ್ರಾಯಿಂಗ್ ಹಾಳೆ, ಮಾರ್ಕರ್ ಪೆನ್‌ಗಳು |
| ದಿನ – 02 | | | |
| 01 | ದಿನ – 01 ರ ಗುಂಪು ಚಟುವಟಿಕೆಗಳ ಮುಖ್ಯಾಂಶಗಳ ಪ್ರಸ್ತುತಿ | ಪ್ರತಿ ಗುಂಪು 10 ರಿಂದ 12 ನಿಮಿಷ | ಪಿಪಿಟಿ/ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್‌ಗಳು |
| 02 | ರಾ.ಶಿ. ನೀತಿ 2020ರ ಮುಖ್ಯಾಂಶಗಳು<br>ರಾ.ಶಿ. ನೀತಿ 2020ರ ನಾಲ್ಕು ಭಾಗಗಳಲ್ಲಿನ ಅಂಶಗಳ ಸ್ಥೂಲ ಪರಿಚಯ | ಪ್ರಸ್ತುತಿ, ಚರ್ಚೆ | |
| 03 | ಶಾಲಾ ಶಿಕ್ಷಣಕ್ಕೆ ಪೀಠಿಕೆ<br>ಶಾಲಾ ಶಿಕ್ಷಣಕ್ಕೆ ಪೂರಕವಾದ ಮುಖ್ಯಾಂಶಗಳು | ಪ್ರಸ್ತುತಿ/ಚರ್ಚೆ<br>ಸಂವಾದ | |
| 04 | ಅಧಿವೇಶನ – 03 ಮುಂದುವರೆಯುತ್ತದೆ | ಶಿಬಿರಾರ್ಥಿಗಳಿಂದ<br>ಪ್ರಸ್ತುತಿ | |
| ದಿನ – 03 | | | |
| 01 | ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ<br>ಸಾಕ್ಷರತೆ ಮತ್ತು ಗಣಿತ ಕೌಶಲಗಳ ಭದ್ರ ಬುನಾದಿ<br>ಸಾರ್ವತ್ರಿಕ ದಾಖಲಾಗಿ ಮತ್ತು ಧಾರಣತೆ | ಪ್ರಸ್ತುತಿ/ಚರ್ಚೆ<br>ಸಂವಾದ | ಪಿಪಿಟಿ/ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್‌ಗಳು |

| | | | |
|---|---|---|---|
| 02 | ಶಾಲಾ ಸಂಕೀರ್ಣ<br>ಶಾಲಾ ಶಿಕ್ಷಣದ ನಿಯಂತ್ರಣ<br>ಶಾಲಾ ಸಂಕೀರ್ಣದ ಅನುಕೂಲತೆಗಳು | ಪ್ರಸ್ತುತಿ/ಚರ್ಚೆ<br>ಸಂವಾದ | ಪಿಪಿಟಿ/ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್‌ಗಳು |
| 03 | ಶಿಕ್ಷಕರು ಬದಲಾವಣೆಯ ಹರಿಕಾರರು<br>ಶಿಕ್ಷಕರ ನೇಮಕಾತಿ<br>ವೃತ್ತಿ ನಿರ್ವಹಣೆ ಮತ್ತು ಪ್ರಗತಿ<br>ಶಿಕ್ಷಕರ ಶಿಕ್ಷಣ | ಪ್ರಸ್ತುತಿ ಮತ್ತು ಚರ್ಚೆ | ಪಿಪಿಟಿ/ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್‌ಗಳು |
| 04 | ವೃತ್ತಿ ನಿರ್ವಹಣೆ ಮತ್ತು ಪ್ರಗತಿ<br>ಶಿಕ್ಷಕರ ಶಿಕ್ಷಣ | ಪ್ರಸ್ತುತಿ, ಚರ್ಚೆ | ಪಿಪಿಟಿ/ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್‌ಗಳು |
| ದಿನ – 04 | | | |
| 01 | ಶಾಲಾ ಸಂಕೀರ್ಣ<br>ಶಾಲಾ ಶಿಕ್ಷಣದ ನಿಯಂತ್ರಣ<br>ಶಾಲಾ ಸಂಕೀರ್ಣದ ಅನುಕೂಲತೆಗಳು | ಪ್ರಸ್ತುತಿ, ಚರ್ಚೆ ಶಿಬಿರಾರ್ಥಿಗಳಿಂದ ಪ್ರಸ್ತುತಿ | ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್ |
| 02 | ಶಾಲಾ ಸಂಕೀರ್ಣದ ಅನುಕೂಲತೆಗಳು ಮತ್ತು ಸಂಪನ್ಮೂಲಗಳ ಬಳಕೆ<br>ಸಂಪನ್ಮೂಲ ವ್ಯಕ್ತಿಗಳ ನೇಮಕ | ಪ್ರಸ್ತುತಿ ಮತ್ತು ಚರ್ಚೆ | ಪಿಪಿಟಿ |
| 03 | ಎಸ್.ಸಿ.ಎಂ.ಸಿ. ರಚನೆ, ಸ್ವರೂಪ ಮತ್ತು ಜವಾಬ್ದಾರಿಗಳು<br>ಶಿಕ್ಷಕರ ಕಾರ್ಯನಿರ್ವಹಣೆ | ಪ್ರಸ್ತುತಿ ಮತ್ತು ಚರ್ಚೆ | ಪಿಪಿಟಿ |
| 04 | 3 ಅಧಿವೇಶನಗಳ ವಿಷಯಕ್ಕೆ ಸಂಬಂಧಿಸಿದಂತೆ ಗುಂಪು ಚರ್ಚೆ ಮತ್ತು ಪ್ರಸ್ತುತಿ | ಪ್ರಸ್ತುತಿ | ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್ |
| ದಿನ – 05 | | | |
| 01 | ಉನ್ನತ ಶಿಕ್ಷಣ<br>ಹೊಸ ಬಗೆಯ ಸಾಂಸ್ಥಿಕ ರಚನಾ ವಿನ್ಯಾಸ<br>ಬೋಧಕ ವರ್ಗ<br>ಸಶಕ್ತ ಆಡಳಿತ ಮತ್ತು ಸ್ವಾಯುತ್ತದೆ | ಪ್ರಸ್ತುತಿ ಮತ್ತು ಚರ್ಚೆ | ಪಿಪಿಟಿ |
| 02 | ಶಿಕ್ಷಕರ ಶಿಕ್ಷಣ ಮತ್ತು ತರಬೇತಿ<br>ಶಿಕ್ಷಕರ ತರಬೇತಿಗಳು<br>ವೃತ್ತಿಪರ ಶಿಕ್ಷಣ | ಪ್ರಸ್ತುತಿ, ಚರ್ಚೆ<br>ಶಿಬಿರಾರ್ಥಿಗಳಿಂದ ಪ್ರಸ್ತುತಿ | ಡ್ರಾಯಿಂಗ್ ಹಾಳೆಗಳು, ಮಾರ್ಕರ್ ಪೆನ್ |

| | | | |
|---|---|---|---|
| 03 | ಹೆಚ್ಚು ಗಮನಹರಿಸಬೇಕಾದ ಕ್ಷೇತ್ರಗಳು<br>ಶಿಕ್ಷಣ ತಂತ್ರಜ್ಞಾನ<br>ಔದ್ಯೋಗಿಕ ಶಿಕ್ಷಣ<br>ವಯಸ್ಕರ ಶಿಕ್ಷಣ<br>ಭಾರತೀಯ ಭಾಷೆಗಳ ಉತ್ತೇಜನ<br>ರಾಷ್ಟ್ರೀಯ ಸಂಶೋಧನಾ ಸಂಸ್ಥೆ<br>ರಾಷ್ಟ್ರೀಯ ಶಿಕ್ಷಣ ಆಯೋಗ | ಪ್ರಸ್ತುತಿ ಮತ್ತು ಚರ್ಚೆ | ಪಿಪಿಟಿ |
| 04 | ತರಬೇತಿ ಬಗ್ಗೆ ಹಿಮ್ಮಾಹಿತಿ, ಉತ್ತರ ಪರೀಕ್ಷೆ,<br>ಸಮಾರೋಪ | | |

## ಅಗತ್ಯ ಸಾಮಗ್ರಿಗಳ ಪಟ್ಟಿ

ಲ್ಯಾಪ್‌ಟಾಪ್, ವಿವಿಧ ವಿಷಯಗಳ ಪಿಪಿಟಿಗಳು, ಎಲ್.ಸಿ.ಡಿ. ಪ್ರೊಜೆಕ್ಟರ್, ಸ್ಕ್ರೀನ್

ಡ್ರಾಯಿಂಗ್ ಹಾಳೆಗಳು – 25

ಬಿಳಿ ಹಾಳೆಗಳು – 01 ರೀಮ್


ಮಾರ್ಕರ್ ಪೆನ್‌ಗಳು – 02 ಸೆಟ್


ಡ್ರಾಯಿಂಗ್ ಪಿನ್, ಪೇಪರ್ ಕ್ಲಿಪ್‌ಗಳು, ಪ್ಲಾಸ್ಟಿಕ್ ದಾರ.

## ಸಂಕ್ಷಿಪ್ತ ಪದಗಳ ಪಟ್ಟಿ

| ಕ್ರಮ ಸಂ. | ಸಂಕ್ಷಿಪ್ತ ರೂಪ | ವಿಸ್ತರಣೆ |
|---|---|---|
| 1 | ABC | Academic Bank of Credit |
| 2 | ATP | Agriculture Technology Park |
| 3 | AYUSH | Ayurveda Unani Siddha and Homeopathy |
| 4 | B.Ed. | Bachelor of Education |
| 5 | BITE | Block Institute of Teacher Education |
| 6 | BRC | Block Resource Centre |
| 7 | CABE | Central Advisory Board of Education |
| 8 | CBCS | Choice/Criterion Based Credit System |
| 9 | CBSE | Central Board for secondary Education |
| 10 | CPD | Continuos Professional Development |
| 11 | CRC | Cluster Resource center |
| 12 | CRP | Cluster Resource Person |
| 13 | CWSN | Children With Special Needs |
| 14 | DIET | District Institute of Education and Training |
| 15 | DIKSHA | Digital Infrastructure for Knowledge Sharing |
| 16 | DST | Department of Science and Technology |
| 17 | ECCE | Early Childhood Children Education |
| 18 | ECE | Early Childhood Education |
| 19 | GCED | Global Citizenship Education |
| 20 | GER | Gross Enrolment Ratio |
| 21 | HEI | Higher Education Institutes |
| 22 | ICDS | Integrated Child Development Scheme |
| 23 | IDP | Institutional Developmental Plan |
| 24 | IIM | Indian Institute of Management |
| 25 | IIT | Indian Institute of Technology |
| 26 | ISL | Indian Sign Language |
| 27 | ITI | Industrial Training Institute |
| 28 | MERU | Multi-Disciplinary Education and Research University |
| 29 | MoU | Memorandum of Understanding |
| 30 | NAS | National Achievement Survey |
| 31 | NCERT | National Council for Educational Research and Training |
| 32 | NCF | National Curriculum Framework |
| 33 | NCFSE | National Curriculum Framework for School Education |
| 34 | NCPFECCE | National Curriculum and Pedagogical Framework for Early Child Care and Education |
| 35 | NCTE | National council for Teacher Education |
| 36 | NEP | New Education Policy |
| 37 | NER | Net Enrolment Ratio |
| 38 | NGO | Non-Governmental Organisation |

| | | |
|---|---|---|
| 39 | NIOS | National Institute of Open Schooling |
| 40 | NPE | National Policy of Education |
| 41 | NPERC | National policy of education review committee |
| 42 | NPST | National Professional Standard for Teachers |
| 43 | NSQF | National Skills Qualifications Framework |
| 44 | NTA | National Testing Agency |
| 45 | OBC | Other Backward Class |
| 46 | ODL | Open Distance Learning |
| 47 | PARAKH | Performance Assessment, Review and Analysis of Knowledge for Holistic Development |
| 48 | PFMS | Public Finance Management System |
| 49 | PoA | Programme of Action |
| 50 | PTR | Pupil Teacher Ratio |
| 51 | RCI | Rehabilitation Council of India |
| 52 | RMSA | Rashtriya Madyamika Shiksha Abhiyana |
| 53 | RTE | Right to Education |
| 54 | SAS | State Achievement Survey |
| 55 | SCERT | State Council for Educational Research & Training |
| 56 | SCF | State Curriculum Framework |
| 57 | SDG | Sustainable Developmental Goals |
| 58 | SDMC | School Development & Monitoring Committee |
| 59 | SEDG | Socio Economically Disadvantaged Groups |
| 60 | SEZ | Special Educational Zone |
| 61 | SMC | School Management Committee |
| 62 | SQAAF | School Quality Assessment and Accreditation Framework |
| 63 | SSA | Sarva Shiksha Abhiyaan |
| 64 | SSSA | State School Standards Authority |
| 65 | STEM | Science Technology Engineering and Mathematics |
| 66 | TEIs | Teacher Education Institutes |
| 67 | TET | Teacher Eligibility Test |
| 68 | U-DISE | Unified District Information System for Education |
| 69 | UGC | University Grants Commission |
| 70 | WCD | Women and Child Development |


ರಾಷ್ಟ್ರೀಯ ಶಿಕ್ಷಣ ನೀತಿ - 2020
ಭಾಗ – 1
ಶಾಲಾ ಶಿಕ್ಷಣ
1. ಪೂರ್ವ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ: ಕಲಿಕೆಯ ಬುನಾದಿ
2. ಬುನಾದಿ ಅಕ್ಷರ ಜ್ಞಾನ ಮತ್ತು ಸಂಖ್ಯಾ ಜ್ಞಾನ: ಕಲಿಕೆಗೆ ಕಲಿಕೆಗೆ ತುರ್ತು ಮತ್ತು ಅವಶ್ಯವಿರುವ ಅಪೇಕ್ಷಿತ ಅಂಶಗಳು
3. ಶಾಲೆಬಿಟ್ಟ ಮಕ್ಕಳ ದರವನ್ನು ಕಡಿಮೆಗೊಳಿಸುವುದು ಮತ್ತು ಎಲ್ಲಾ ಹಂತಗಳಲ್ಲಿ ಶಿಕ್ಷಣದ ಸಾರ್ವತ್ರಿಕ 10 ಲಭ್ಯತೆಯನ್ನು ಖಚಿತಪಡಿಸುವುದು
4. ಶಾಲೆಗಳಲ್ಲಿ ಪಠ್ಯಕ್ರಮ ಮತ್ತು ಬೋಧನಾ ವಿಧಾನ ಕಲಿಕೆಯು ಸಂಪೂರ್ಣ, ಸಮಗ್ರ, ಆಹ್ಲಾದಕರ ಮತ್ತು ಭಾಗವಹಿಸುವಿಕೆಯಿಂದ ಕೂಡಿರಬೇಕು
5. ಶಿಕ್ಷಕರು
6. ಸಮಾನ ಮತ್ತು ಸಮನ್ವಯ ಶಿಕ್ಷಣ ಎಲ್ಲರಿಗಾಗಿ ಕಲಿಕೆ
7. ಶಾಲಾ ಸಂಕೀರ್ಣ / ಸಮೂಹಗಳ ಮೂಲಕ ದಕ್ಷತೆಯಿಂದ ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಪರಿಣಾಮಕಾರಿ ಆಡಳಿತ ನಡೆಸುವುದು
8. ಶಾಲಾ ಶಿಕ್ಷಣಕ್ಕಾಗಿ ಮಾನಕಗಳ ನಿರ್ಧಾರ ಮತ್ತು ಅಂಗೀಕರಣ
ಭಾಗ – 2
ಉನ್ನತ ಶಿಕ್ಷಣ
9. ಗುಣಮಟ್ಟದ ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳು: ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಗೆ ನೂತನ ಮತ್ತು ದೂರ ದೃಷ್ಟಿಕೋನ
10. ಸಾಂಸ್ಥಿಕ ಪುನಾರಚನೆ ಮತ್ತು ಕ್ರೋಢೀಕರಣ
11. ಸಮಗ್ರ ಮತ್ತು ಬಹು (ಶಾಸ್ತ್ರೀಯ) ಬೋಧನಾ ಶಿಕ್ಷಣದೆಡೆಗೆ
12. ಸೂಕ್ತ ಕಲಿಕಾ ವಾತಾವರಣಗಳು ಮತ್ತು ವಿದ್ಯಾರ್ಥಿ ಒತ್ತಾಸೆ
13. ಪ್ರೇರಣಾಪೂರ್ಣ ಜ್ಞಾನ ಸಂಪನ್ನ ಮತ್ತು ಸಮರ್ಥ ಬೋಧಕ ಸಿಬ್ಬಂದಿ
14. ಉನ್ನತ ಶಿಕ್ಷಣದಲ್ಲಿ ಸಮತೆ ಮತ್ತು ಸಮನ್ವಯಿಕೆ
15. ಶಿಕ್ಷಕರ ಶಿಕ್ಷಣ
16. ವೃತ್ತಿಪರ ಶಿಕ್ಷಣದ ಪುನರ್ ಸಂಯೋಜನೆ
17. ನೂತನ ರಾಷ್ಟ್ರೀಯ ಸಂಶೋಧನಾ ಸಂಸ್ಥೆಯ ಸ್ಥಾಪನೆಯ ಮೂಲಕ ಎಲ್ಲಾ ವಲಯಗಳಲ್ಲಿಯೂ ಶೈಕ್ಷಣಿಕ ಗುಣಾತ್ಮಕ ಸಂಶೋಧನೆಗಳ ವೇಗ ವರ್ಧನೆ
18. ಉನ್ನತ ಶಿಕ್ಷಣದ ನಿಬಂಧನಾ ನೀತಿಯ ರೂಪಾಂತರಣ
19. ಉನ್ನತ ಶಿಕ್ಷಣದ ಸಂಸ್ಥೆಗಳಿಗಾಗಿ ಪರಿಣಾಮಕಾರಿ ಆಡಳಿತ ಮತ್ತು ನೇತೃತ್ವ
Floating Topic
Floating Topic
ಭಾಗ – 3
ಇತರ ಪ್ರಮುಖ ಕ್ಷೇತ್ರಗಳು
20. ವೃತ್ತಿಪರ ಶಿಕ್ಷಣ
21. ವಯಸ್ಕರ ಶಿಕ್ಷಣ ಮತ್ತು ಆಜೀವ ಕಲಿಕೆ
22. ಭಾರತೀಯ ಭಾಷೆಗಳು, ಕಲೆ ಮತ್ತು ಸಂಸ್ಕೃತಿಯ ಅಭಿವೃದ್ಧಿ
23. ತಂತ್ರಜ್ಞಾನದ ಬಳಕೆ ಮತ್ತು ಸಂಯೋಜನೆ
24 ಆನ್‌ಲೈನ್ ಮತ್ತು ಡಿಜಿಟಲ್ ಶಿಕ್ಷಣ : ತಂತ್ರಜ್ಞಾನದ ನ್ಯಾಯಸಮ್ಮತ ಬಳಕೆಯನ್ನು ಖಚಿತಪಡಿಸುವುದು
ಭಾಗ – 4
ಕಾರ್ಯಗತಗೊಳಿಸುವುದು (ಅನುಷ್ಠಾನ)
25. ಕೇಂದ್ರೀಯ ಶೈಕ್ಷಣಿಕ ಸಲಹಾ ಮಂಡಳಿ (ಕೇಶಸಮ) ಯ ಬಲವರ್ಧನೆ
26. ಹಣಕಾಸು ನಿರ್ವಹಣೆ : ಎಲ್ಲರಿಗೂ ಲಭ್ಯವಾಗುವಂತಹ ಗುಣಮಟ್ಟದ ಶಿಕ್ಷಣ
27. ಅನುಷ್ಠಾನಗೊಳಿಸುವುದು




## ಎನ್.ಇ.ಪಿ ದೃಷ್ಟಿಕೋನ (ಕಾಣ್ಕೆ)

ತಾರ್ಕಿಕ ಚಿಂತನೆ ಮತ್ತು ನಿರ್ವಹಣೆಯಲ್ಲಿ ಸಮರ್ಥರಾಗಿರುವ, ನೈತಿಕ ಮೌಲ್ಯಗಳು, ಸಹಾನುಭೂತಿ ಮತ್ತು ಅನುಭೂತಿ, ಧೈರ್ಯ, ಸೃಜನಶೀಲತೆ, ವೈಜ್ಞಾನಿಕ ಮನೋಭಾವವನ್ನು ಹೊಂದಿರುವ ಉತ್ತಮ ವ್ಯಕ್ತಿಗಳನ್ನು ರೂಪಿಸುವುದು ಶಿಕ್ಷಣ ವ್ಯವಸ್ಥೆಯ ಉದ್ದೇಶವಾಗಿದೆ. ನಮ್ಮ ಸಂವಿಧಾನದಲ್ಲಿ ಅಡಕವಾಗಿರುವಂತೆ, ಸರ್ವಸಮಾವೇಷಕ, ಸಮಾನತೆಯುಳ್ಳ, ಬಹುತ್ವದಿಂದೊಡಗೂಡಿದ ಸಮಾಜವನ್ನು ನಿರ್ಮಿಸಲು ಬದ್ಧವಾಗಿರುವ, ವಿಸ್ತಾರವಾದ ಬಹುಮುಖ್ಯ ಮತ್ತು ತಮ್ಮದೇ ಆದ ಕೊಡುಗೆ ನೀಡುವ ನಾಗರೀಕರನ್ನು ರೂಪಿಸುವ ಗುರಿಯನ್ನು ಇದು ಹೊಂದಿದೆ.